# ಸಮಾಜವಿಜ್ಞಾನ I

# SOCIAL SCIENCE I

## ತರಗತಿ IX

## STANDARD IX

### ಭಾಗ–2
### PART -2

ಕೇರಳ ಸರಕಾರ
GOVT OF KERALA
ಶಿಕ್ಷಣ ಇಲಾಖೆ
**Education Department**

ರಾಜ್ಯಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ
2016
**State Council of Educational Research and Training (SCERT) Kerala 2016**

KT-541-1/Soc. Sci. I-9 (K) Vol-2

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ,
ವಿಂಧ್ಯಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಶ ಮಾಗೇ,
ಗಾಹೇ ತವ ಜಯ ಗಾಥಾ
ಜನಗಣಮಂಗಲದಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ,
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ಹೆತ್ತವರನ್ನು ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**State Council of Educational Research and Training (SCERT)**
Poojappura, Thiruvananthapuram 695 012, Kerala

*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
Typesetting and Layout : SCERT
Printed at : KBPS, Kakkanad, Kochi-30
© Department of Education, Government of Kerala

ಪ್ರೀತಿಯ ಮಕ್ಕಳೇ,

ಸಮಾಜದ ವಿಕಾಸ ಮತ್ತು ಮನುಷ್ಯನ ಸರ್ವತೋಮುಖ ಅಭಿವೃದ್ಧಿಯು ಸಮಾಜವಿಜ್ಞಾನ ಕಲಿಕೆಯ ಮುಖ್ಯ ಗುರಿ. ಸಾಮಾಜಿಕ ಜೀವನವನ್ನು ಮತ್ತು ವಿದ್ಯಮಾನವನ್ನು ಸಮಗ್ರವಾಗಿ ಮತ್ತು ವಸ್ತುನಿಷ್ಠವಾಗಿ ವಿಶ್ಲೇಷಿಸಲು ಸಮಾಜವಿಜ್ಞಾನವು ಅತಿ ಅಗತ್ಯವಾಗಿ ಕಲಿಯಬೇಕಾಗಿದೆ. ಸಮಾಜವಿಜ್ಞಾನವನ್ನು ಕಲಿಯುವುದರಿಂದ ಘಟನೆ ನಡೆದ ಸ್ಥಳ, ವಿಷಯದ ಕಾರ್ಯ-ಕಾರಣ ಸಂಬಂಧ, ವೈಜ್ಞಾನಿಕ ಮನೋಭಾವ, ಜೀವನ ಮೌಲ್ಯಗಳು, ದೂರದೃಷ್ಟಿ ಮೊದಲಾದುವುಗಳ ಕುರಿತು ತಿಳಿದಂತಾಗುತ್ತದೆ. ಚರಿತ್ರೆ, ರಾಜಕೀಯಶಾಸ್ತ್ರ, ಸಮಾಜಶಾಸ್ತ್ರ ಮೊದಲಾದ ಕವಲುಗಳಾಗಿ ವಿಭಾಗಗಳಾಗುತ್ತಿದ್ದರೂ ಸಂಯೋಜನೆಯ ಸಾಧ್ಯತೆಗಳು ಮತ್ತು ವಲಯಗಳನ್ನು ಗಣನೆಗೆ ತೆಗೆದುಕೊಂಡು ಈ ಪಾಠಪುಸ್ತಕವನ್ನು ತಯಾರಿಸಲಾಗಿದೆ.

ಮಧ್ಯಕಾಲ ಪ್ರಪಂಚ, ಭಾರತ ಮತ್ತು ಕೇರಳಗಳ ಒಂದು ಸಮಗ್ರ ಚಿತ್ರಣವನ್ನು ಚರಿತ್ರೆಯ ಪಾಠಗಳಿಂದ ತಿಳಿಯಬಹುದು. ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶದ ಪೌರನೆಂಬ ನೆಲೆಯಲ್ಲಿ ಮೂಲಭೂತ ಹಕ್ಕುಗಳ ಪ್ರಾಧಾನ್ಯ ಮತ್ತು ಅನಿವಾರ್ಯತೆಯನ್ನು ರಾಜಕೀಯ ಶಾಸ್ತ್ರದ ಪಾಠಗಳು ಸ್ಪಷ್ಟಪಡಿಸುತ್ತದೆ. ಸಾಮಾಜಿಕ ಸಮಸ್ಯೆಗಳು ಮತ್ತು ಅವುಗಳಿಗಿರುವ ಪರಿಹಾರ ಮಾರ್ಗಗಳನ್ನು ಸಮಾಜಶಾಸ್ತ್ರದಲ್ಲಿ ಪ್ರತಿಪಾದಿಸಲಾಗಿದೆ.

ವೈವಿಧ್ಯತೆಯನ್ನು ಗೌರವಿಸಲು, ಸಹಿಷ್ಣುತೆಯಿಂದ ವರ್ತಿಸಲು ಮತ್ತು ಮನುಷ್ಯರಂತೆ ಎಲ್ಲ ಜೀವಿಗಳಿಗೂ ಈ ಭೂಮಿ ಎಂಬ ದೃಷ್ಟಿಕೋನವನ್ನು ತಲುಪಲು ಸಮಾಜವಿಜ್ಞಾನದ ಈ ಪಾಠಪುಸ್ತಕವು ನಿಮಗೆ ಸಹಾಯಕವಾಗುತ್ತದೆ.

ಪ್ರೀತಿಪೂರ್ವಕ ಶುಭಾಶಯಗಳೊಂದಿಗೆ

**ಡಾ. ಪಿ.ಎ. ಫಾತಿಮ**
ಡೈರೆಕ್ಟರ್
ಎಸ್.ಸಿ.ಇ.ಆರ್.ಟಿ. ಕೇರಳ

# TEXT BOOK DEVELOPMENT COMMITTEE

**Abdul Aziz**
V.P.K.M.M. H.S.S. Puthur Pallikkal, Malappuram
**Abhilash Kumar K.G.**
Devadhar Govt. H.S.S. Thanur, Malappuram
**Amar**
H.S.S. , Muttannur, Kannur
**Jayakrishnan O.K.**
K.P.C.. H.S.S. Pattannur, Kannur
**Jyothish Kumar B.**
M.G. H.S.S. Edathara, Pathanapuram, Kollam
**Pradeepan T.**
G.H.S.S. Kallachi, Kozikode
**Faizal V.**
G.G. H.S.S. Parayancheri, Kozikode
**Prasad V.**
G. H.S.S. Kadamanitta, Pattanamthitta
**Muralidharan Nair**
N.S.S.. H.S.S. Anikode, Kottayam
**Mohammed Musthafa**
D.P.O. Malappuram
**Yousuf Kumar S.M.**
Govt. Model Boys H.S.S. Attingal, Thiruvananthapuram.
**Rathnakaran T.**
G.B. H.S.S., Malappuram
**Haripradeep S.**
S.V.H.S. Pullad, Thiruvalla, Pathanamthitta
**Chithra Madhavan**
Research Officer, SCERT.
**Yahiya P.**
G.G.M.G. H.S.S. Chalappuram, Kozikode
(Prof. Reeding)

## EXPERTS

**Dr. Abdul Razak P.P.**
Associate Professor, Dept of History
P.S.M.O. College, Thirurangadi
**Dr. B. Shobhanan**
Head Dept. of History (Rtd), Kerala University
**Dr. N.P. Hafeez Muhammad**
Co-odinator, Sociology Department,
Calicut Univesity.
**Dr. Vijayalakshmi**
Head, Dept. of History (Rtd) N.S.S. College,
Manjeri, Malappuram
**Dr.V. Kunhali**
Head, Dept of History (Rtd) Calicut Univesity.
**Dr. K.P. Rajesh**
N.S.S. College, Manjeri, Malappuram
**Dr. Sainthalavi**
Malayalam University, Thirur, Malappuram.

## ACADEMIC CO-ORDINATOR

**Manoj K.P. Research Officer, SCERT.**

## KANNADA VERSION PARTICIPANTS

**Sathyanarayana Rao K.V.**
Headmaster, G.H.S. Soorambail
**Saraswathi H.**
H.S.A. S.G.K.H.S. Kudlu
**Suresh P.**
H.S.A. G.H.S.S. Bekur
**Bhanu A.C.**
H.S.A. G.H.S.S. Mulleria
**O.Satheesh Kumar Shetty**
H.S.A. S.D.P.H.S.S. Dharmathadka
**Narayana Bhat M.**
H.S.S.T. (Rtd) N.H.S.S. Peradala
**Aravinda Y.**
H.S.A. S.A.P.H.S.S. Agalpady

## LANGUAGE EXPERTS

**Prof. Shreenath**
Associate Prof. of Kannada (Rtd) Govt. College, Kasaragod
**Dr. Rathnakara Mallamoole**
Asst. Prof of Kannada, Govt. College, Kasaragod.

## CO-ORDINATOR OF TRANSLATION

**Dr. Fiazal Mavulladathil** Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ(SCERT)
ವಿದ್ಯಾಭವನ - ಪೂಜಾಪುರ, ತಿರುವನಂತಪುರಂ- 695012

# ಅನುಕ್ರಮಣಿಕೆ


| | | |
|---|---|---|
| 05 | ಸಮನ್ವಯ ಭಾರತ | 89 |
| 06 | ಎಂಟನೇ ಶತಮಾನದಿಂದ ಹದಿನೆಂಟನೇ ಶತಮಾನದ ವರೆಗಿನ ಕೇರಳ | 105 |
| 08 | ಚುನಾವಣೆ ಹಾಗೂ ಪ್ರಜಾಪ್ರಭುತ್ವ | 121 |
| 09 | ಉತ್ತಮ ಭವಿಷ್ಯಕ್ಕಾಗಿ | 135 |

## ಕಲಿಕೆಯ ಸೌಲಭ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಬಳಸಲಾಗಿದೆ


ಹೆಚ್ಚಿನ ಓದಿಗಾಗಿ - ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿಲ್ಲ


ಕಲಿಕೆಯ ಪ್ರಗತಿಯನ್ನು ನಿರ್ಣಯಿಸಲಿಕ್ಕಿರುವ ಪ್ರಶ್ನೆಗಳು


ಚಟುವಟಿಕೆಗಳು


ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು


ಮೌಲ್ಯನಿರ್ಣಯ ಮಾಡುವ


ಮುಂದುವರಿದ ಚಟುವಟಿಕೆಗಳು

## ಪಾಠಪುಸ್ತಕದ ಕುರಿತು:

**ಒ**ಂಭತ್ತನೇ ತರಗತಿಯ ಸಮಾವಿಜ್ಞಾನ ಪಾಠ ಪುಸ್ತಕದ ಒಂದನೇ ಭಾಗದಲ್ಲಿ ಚರಿತ್ರೆ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಎಂಬೀ ವಿಷಯಗಳಿಗೆ ಸಂಬಂಧಿಸಿದ ಒಂಭತ್ತು ಅಧ್ಯಾಯಗಳನ್ನು ಪ್ರತಿಪಾದಿಸಲಾಗಿದೆ. ಆರು ಅಧ್ಯಾಯಗಳು ಚರಿತ್ರೆಯ ಪಾಠಭಾಗಗಳನ್ನು, ಎರಡು ಅಧ್ಯಾಯಗಳು ರಾಜ್ಯಶಾಸ್ತ್ರವನ್ನು ಮತ್ತು ಒಂದು ಅಧ್ಯಾಯವು ಸಮಾಜಶಾಸ್ತ್ರವನ್ನು ಒಳಗೊಂಡಿದೆ.

ನಿರಂತರವಾದ ವಿಕಾಸವನ್ನು ದೃಢಪಡಿಸುವ ರೀತಿಯಲ್ಲಿ ಚರಿತ್ರೆಯ ಪಾಠಭಾಗವನ್ನು ಕ್ರಮೀಕರಿಸಲಾಗಿದೆ. ಆರನೇ ತರಗತಿಯಲ್ಲಿ ಮಂಡಿಸಿದ ಮಧ್ಯಕಾಲ ಚರಿತ್ರೆಗೆ ಇನ್ನಷ್ಟು ಹೆಚ್ಚಿನ ವಿಷಯ, ವಾಸ್ತವಿಕತೆ, ಆಶಯಗಳು ಮತ್ತು ಅವುಗಳ ವಿಶ್ಲೇಷಣೆಗಳಿಗೆ ಇಲ್ಲಿ ಪ್ರಾಧಾನ್ಯ ನೀಡಲಾಗಿದೆ. 'ವಿಷಯಾಧಾರಿತ' (Thematic) ಸಮೀಪನದ ಆಧಾರದಲ್ಲಿ ಚರಿತ್ರೆಯ ಘಟನೆಗಳನ್ನು ಸಮಗ್ರವಾಗಿ ಮಂಡಿಸಲು ಪ್ರಯತ್ನಿಸಲಾಗಿದೆ. ಮಧ್ಯಕಾಲ ಜಗತ್ತು, ಮಧ್ಯಕಾಲ ಭಾರತ, ಮಧ್ಯಕಾಲ ಕೇರಳ ಎಂಬ ರೀತಿಯಲ್ಲಿ ಮಧ್ಯಕಾಲ ಜೀವನದ ವಿವಿಧ ಹಂತಗಳನ್ನು ವಿವರವಾದ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

**ಮಧ್ಯಕಾಲೀನ ಜಗತ್ತು:** ಅಧಿಕಾರ ಕೇಂದ್ರಗಳು ಎಂಬ ಅಧ್ಯಾಯದಲ್ಲಿ ಜಗತ್ತಿನ ವಿವಿಧ ಭಾಗಗಳಲ್ಲಿ ಜಾರಿಯಲ್ಲಿದ್ದ ವಿಭಿನ್ನ ಅಧಿಕಾರ ಕೇಂದ್ರಗಳ ಕುರಿತು ಚರ್ಚಿಸಲಾಗಿದೆ. ವಿವಿಧ ಭೂಖಂಡಗಳಲ್ಲಿ ವ್ಯಾಪಿಸಿರುವ ವಿಭಿನ್ನ ಅಧಿಕಾರದ ರಚನೆಗಳನ್ನು ಒಂದು ಅಧ್ಯಾಯದಲ್ಲಿ ಮಂಡಿಸಲಾಗಿದೆ. ಯುರೋಪನ್ನು ಆಧಾರವಾಗಿಟ್ಟುಕೊಂಡು ಮಧ್ಯಕಾಲವನ್ನು ವಿಶ್ಲೇಷಿಸುವ ರೀತಿಗಿಂತ ಭಿನ್ನವಾಗಿ ಮಧ್ಯಕಾಲ ಜಗತ್ತಿನ ವಿವಿಧ ವಲಯಗಳಲ್ಲಿ ಉಂಟಾದ ಬೆಳವಣಿಗೆ ಮತ್ತು ವಿಕಾಸವನ್ನು ವಸ್ತುನಿಷ್ಠವಾಗಿ ದಾಖಲಿಸಲು ಪ್ರಯತ್ನಿಸಲಾಗಿದೆ.

**ಪೌರಾತ್ಯ ಮತ್ತು ಪಾಶ್ಚಾತ್ಯ:** ವಿನಿಮಯಗಳ ಕಾಲ ಎಂಬ ಅಧ್ಯಾಯದಲ್ಲಿ ವಾಣಿಜ್ಯಗಳ ಪ್ರಗತಿ, ನಗರೀಕರಣ ಮತ್ತು ಮಧ್ಯಕಾಲೀನ ಜಗತ್ತಿನ ವಿವಿಧ ಭಾಗಗಳಲ್ಲಿ ಉಂಟಾದ ಸಾಂಸ್ಕೃತಿಕ ಪ್ರಗತಿಯನ್ನು ವಿವರಿಸಲಾಗಿದೆ. 'ಕತ್ತಲೆಯ ಯುಗ' ಎಂದು ಯುರೋಪಿನ ಚರಿತ್ರೆಗಾರರು ಕರೆಯುತ್ತಿದ್ದ ಮಧ್ಯಕಾಲದ ಪ್ರಕಾಶಮಾನವಾದ ಚರಿತ್ರೆಯನ್ನು ಈ ಪಾಠಭಾಗದಲ್ಲಿ ವಿಶ್ಲೇಷಿಸಲಾಗಿದೆ.

ಅನಂತರದ ಮೂರು ಅಧ್ಯಾಯಗಳಲ್ಲಿ ಮಧ್ಯಕಾಲೀನ ಭಾರತದ ವಿವರವಾದ ಚರಿತ್ರೆಯನ್ನು ಪ್ರತಿಪಾದಿಸಲಾಗಿದೆ.

**ಮಧ್ಯಕಾಲೀನ ಭಾರತ:**ರಾಜಪ್ರಭುತ್ವ ಮತ್ತು ಆಡಳಿತ ವಿಧಾನ ಎಂಬ ಅಧ್ಯಾಯದಲ್ಲಿ ಮಧ್ಯಕಾಲೀನ ಭಾರತದ ಆಡಳಿತರಂಗದ ಸಾಧನೆಗಳನ್ನು ಮತ್ತು ವಿಶೇಷತೆಗಳನ್ನು ವಿಶ್ಲೇಷಿಸಲಾಗಿದೆ.

**ಸಂಪತ್ತು ಮತ್ತು ಸಮಾಜ:** ಎಂಬ ಪಾಠಭಾಗದಲ್ಲಿ ಮಧ್ಯಕಾಲ ಭಾರತದ ಆರ್ಥಿಕ- ಸಾಮಾಜಿಕ ಪ್ರಗತಿಯನ್ನು ದಾಖಲಿಸಲು ಪ್ರಯತ್ನಿಸಲಾಗಿದೆ.

ಮಧ್ಯಕಾಲ ಭಾರತದ ಸಾಂಸ್ಕೃತಿಕ ಸಮನ್ವಯದ ಕುರಿತು **ಸಮನ್ವಯ ಭಾರತ** ದಲ್ಲಿ ಚರ್ಚಿಸಲಾಗಿದೆ. ತತ್ವಚಿಂತನೆಗಳ ಸಮನ್ವಯ ಮತ್ತು ಸಾಂಸ್ಕೃತಿಕ ವಿನಿಮಯ ಸಂಬಂಧಗಳು ಸಾರ್ವತ್ರಿಕವಾದುದು ಹೇಗೆಂದು ಈ ಅಧ್ಯಾಯವು ಸ್ಪಷ್ಟಪಡಿಸುತ್ತದೆ.

ಮಧ್ಯಕಾಲ ಕೇರಳದ ಸಮಗ್ರವಾದ ಜೀವನ ಚರಿತ್ರೆ ಮತ್ತು ಆಧುನಿಕ ಕಾಲದ ಕಡೆಗಿನ ಪ್ರಯಾಣದ ಕುರಿತು **ಎಂಟನೇ ಶತಮಾನದಿಂದ ಹದಿನೆಂಟನೇ ಶತಮಾನದ ವರೆಗಿನ ಕೇರಳ'** ಎಂಬ ಪಾಠಭಾಗದಲ್ಲಿ ವಿಶದೀಕರಿಸಲಾಗಿದೆ.

ಅನಂತರದ ಎರಡು ಅಧ್ಯಾಯಗಳು ರಾಜ್ಯಶಾಸ್ತ್ರದ ಕೆಲವು ಪ್ರಧಾನ ವಲಯಗಳನ್ನು ಮಂಡಿಸುತ್ತದೆ.

**ಭಾರತದ ಸಂವಿಧಾನ:** ಹಕ್ಕುಗಳು ಮತ್ತು ಕರ್ತವ್ಯಗಳು ಎಂಬ ಅಧ್ಯಾಯದಲ್ಲಿ ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳು, ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಕರ್ತವ್ಯಗಳ ಕುರಿತು ವಿವರಿಸಲಾಗಿದೆ.

ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಚುನಾವಣೆಯ ಪ್ರಾಧಾನ್ಯ ಮತ್ತು ಔಚಿತ್ಯ, ವಿಭಿನ್ನ ಚುನಾವಣಾ ಕ್ರಮಗಳ ಕುರಿತು **'ಚುನಾವಣೆ ಹಾಗೂ ಪ್ರಜಾಪ್ರಭುತ್ವ'** ಎಂಬ ಪಾಠದಲ್ಲಿ ಚರ್ಚಿಸಲಾಗಿದೆ. ಸಮಾಜಶಾಸ್ತ್ರದ ಪ್ರಧಾನ ವಲಯಗಳಲ್ಲಿ ಒಂದಾದ ವಿಭಿನ್ನ ಸಾಮಾಜಿಕ ಸಮಸ್ಯೆಗಳು ಅವುಗಳ ಕಾರಣಗಳು ಮತ್ತು ಪರಿಹಾರೋಪಾಯಗಳ ಕುರಿತು **'ಉತ್ತಮ ಭವಿಷ್ಯಕ್ಕಾಗಿ'** ಎಂಬ ಅಧ್ಯಾಯದಲ್ಲಿ ಪರಾಮರ್ಶಿಸಲಾಗಿದೆ.



ಅಧ್ಯಾಯ

**05**



# ಸಮನ್ವಯ ಭಾರತ

*ನಾನು ಜುಮ್ಮಾ ಮಸೀದಿಗೆ ಹೋದೆ. ನಂತರ ಮಂತ್ರಿ ಅಬೂಲ್ ಫಸಲ್‌ನ ಮತ್ತು ಅಬುಲ್ ಫೈಸಲ್‌ನ ಸರಳವಾದ ಭವನಗಳನ್ನೂ ಸಂದರ್ಶಿಸಿದೆ. ನಾನು ಫೈಸಿಯ ಸಣ್ಣಭವನದ ಮೆಟ್ಟಿಲನ್ನು ದಾಟಿದಾಗ ಆ-ಭಕ್ತ ಕವಿ ಸಾಮ್ರಾಟನ ಮುಂದೆ ಕುಳಿತು ಶ್ರೀಕೃಷ್ಣ ಕೀರ್ತನೆ ಆಲಾಪಿಸುವಂತೆ ನನಗೆ ತೋರಿತು. ಹೆಬ್ಬಾಗಿಲನ್ನು ಪ್ರವೇಶಿಸಿ ನಾನು ಜುಮ್ಮಾ ಮಸೀದಿಯ ಅಂಗಣಕ್ಕೆ ಪ್ರವೇಶಿಸಿದೆ. ಅಸ್ತಮಿಸುವ ಸೂರ್ಯನ ಕೆಂಪು ಕಿರಣಗಳು ಶಿಲೆಗಳ ಮೇಲೆ ಬಿದ್ದಾಗ ಸ್ವರ್ಣದಂತೆ ಹೊಳೆಯುತ್ತಿತ್ತು. ಆ ಸಮಯದಲ್ಲಿ ಸಲೀಂ ಚಿಸ್ತಿಯ ಧವಳ ಶಿಲಾ ನಿರ್ಮಿತವಾದ ಸಮಾಧಿ ಮಂದಿರವು ಶುಭ್ರವಾದ ರತ್ನದಂತೆ ಪ್ರಕಾಶಿಸಿತು. ಇಂದು ಮಸೀದಿಯ ಜಗಲಿಯಲ್ಲಿ ದೀನ್ ಇಲಾಹಿಯ ಶಿಷ್ಯರು ಯಾರು ಇಲ್ಲ. ನಾನು ಮಾತ್ರ ಇಂದು ಅಲ್ಲಿಗೆ ತೀರ್ಥಾಟನೆಗೆ ತಲುಪಿದವಳು. ನಾನು ಮೆಟ್ಟಿಲನ್ನು ಹತ್ತಿ ಬಾಗಿಲಿನ ಸಮೀಪಕ್ಕೆ ತಲುಪಿದೆ. ಸಾಮ್ರಾಟ ಅಕ್ಬರ್‌ನ ಶವಕುಟೀರದ ಬಾಗಿಲಿನಲ್ಲಿ ಬೆಳ್ಳಿಯಿಂದ ನಿರ್ಮಿಸಿದ ಒಂದು ಕುದುರೆಯ ಲಾಳವನ್ನು ಬಡಿದಿದ್ದರು. ಕುದುರೆಯ ಕಾಲಿನ ಲಾಳದ ಶಬ್ದ ಕೇಳಿದಾಗ ನನಗೆ ಆ ವಿಷಯ ನೆನಪಿಗೆ ಬಂತು. ಅಶ್ವಾರೂಢರಾದ ಸಾವಿರಾರು ರಜಪೂತ ವೀರರು ನನ್ನ ತಂದೆಗೆ ಸಹಾಯ ಮಾಡಲು ಓಡಿ ಬರುವುದಾಗಿ ನಾನು ಸಂಕಲ್ಪಿಸಿದೆ.*

ಮೊಘಲ್ ಚಕ್ರವರ್ತಿ ಷಹಜಹಾನ್‌ನ ಮಗಳು ಜಹನಾರ ಪರ್ಶಿಯನ್ ಭಾಷೆಯಲ್ಲಿ ಬರೆದ ಆತ್ಮಕಥೆಯಿಂದ ಮೇಲಿನ ಈ ಭಾಗವನ್ನು ಆರಿಸಲಾಗಿದೆ. ಈ ವಿವರಣೆಗಳು ಮಧ್ಯಕಾಲ ಭಾರತದಲ್ಲಿ ನೆಲೆನಿಂತಿದ್ದ ಸಾಂಸ್ಕೃತಿಕ ಸಮಾನತೆಯ ಕಡೆಗೆ ಬೆಳಕು ಚೆಲ್ಲುವ ಕೆಲವು ವಿಚಾರಗಳಾಗಿವೆ.

ಆಡಳಿತಾಧಿಕಾರಿಗಳ ಆತ್ಮಕಥೆಗಳು, ಜೀವನ ಚರಿತ್ರೆಗಳು, ಸಂಚಾರಿಗಳ ಪ್ರವಾಸ ಕಥನಗಳು, ದಿನಚರಿಗಳು, ಇತಿಹಾಸದ ಕೃತಿಗಳು ಮೊದಲಾದ ವ್ಯತ್ಯಸ್ತ ಮೂಲಗಳಿಂದ ಮಧ್ಯಕಾಲೀನ ಭಾರತದ ಸಂಸ್ಕೃತಿಗಳ ಕುರಿತು ಮಾಹಿತಿಗಳು ಲಭ್ಯವಾಗಿವೆ. ಅದು ವಿವಿಧ ಸಂಸ್ಕೃತಿಗಳ ಸಮನ್ವಯದ ಕಾಲವಾಗಿತ್ತು. ಸಾಹಿತ್ಯದಲ್ಲೂ ಸಂಗೀತದಲ್ಲೂ ಚಿತ್ರ ರಚನೆಯಲ್ಲೂ ಶಿಲ್ಪಕಲೆಯಲ್ಲೂ ಹೊಸ ಶೈಲಿಗಳು ಮಧ್ಯಕಾಲದಲ್ಲಿ ರೂಪಗೊಂಡುವು.

ಭಾರತದಲ್ಲಿ ವಿಭಿನ್ನ ಧಾರ್ಮಿಕ ವಿಶ್ವಾಸಗಳು, ಅನುಷ್ಠಾನಗಳೂ ನೆಲೆನಿಂತಿವೆ ಎಂದು ತಿಳಿದಿರುವಿರಲ್ಲವೇ. ಭಾರತಕ್ಕೆ ವಿವಿಧ ಧರ್ಮಗಳು ವಿವಿಧ ಕಾಲದಲ್ಲಿ ಬಂದವು. ಇದು ಮಧ್ಯಕಾಲದಲ್ಲಿ ಹೊಸ ಆಶಯಗಳು ರೂಪುಗೊಳ್ಳುವುದಕ್ಕೆ ಕಾರಣವಾಯಿತು. ಸೂಫಿ ಪಂಥ ಮತ್ತು ಭಕ್ತಿ ಪಂಥಗಳು ಹೀಗಿರುವ ವಿಭಿನ್ನ ತತ್ವಚಿಂತನೆಗಳ ಪರಸ್ಪರ ಪ್ರಭಾವಗಳಿಂದ ರೂಪುಗೊಂಡ ಎರಡು ಆಶಯಗಳಾಗಿವೆ.

## ಸೂಫಿ ಚಳುವಳಿ



**ಸೂಫಿಸಂ**

19ನೇ ಶತಮಾನದಲ್ಲಿ ಸೂಫಿಸಂ ಎಂಬ ಪಂಥವು ಆರಂಭಗೊಂಡಿತು. ಸೂಫಿಸಂ ಎಂಬ ಪದವು ಇಸ್ಲಾಮಿಕ್ ಗ್ರಂಥಗಳು ಉಲ್ಲೇಖಿಸಿದ 'ತಸವುಫ್' ಎಂಬ ಪದದಿಂದ ಹುಟ್ಟಿಕೊಂಡಿತು. ಈ ಪದಕ್ಕೆ ಇತಿಹಾಸಗಾರರು ಹಲವು ಅರ್ಥಗಳನ್ನು ನೀಡಿರುವರು. ಕಂಬಳಿ ಎಂಬ ಅರ್ಥ ಬರುವ ಸುಫ್(Suf) ಎಂಬ ಪದದಿಂದ ಸೂಫಿಸಂ ಎಂಬ ಪದ ರೂಪುಗೊಂಡಿದೆ, ಎಂದು ಕೆಲವು ಪಂಡಿತರ ಅಭಿಪ್ರಾಯ. ಸೂಫಿಗಳು ಧರಿಸುವ ಹೊದಿಕೆಯಾದ ಕಂಬಳಿ ವಸ್ತ್ರವನ್ನು ಈ ಪದವು ಸೂಚಿಸುವುದು ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಶುದ್ಧಿ ಎಂದು ಅರ್ಥಬರುವ ಸಫ(Safa) ಎಂಬ ಪದದಿಂದ ಉಂಟಾದುದೆಂದು ಇನ್ನೂ ಕೆಲವು ಪಂಡಿತರ ಅಭಿಪ್ರಾಯ

ಸೂಫಿ ಪಂಥದ ಕುರಿತು ಹಿಂದಿನ ತರಗತಿಯಲ್ಲಿ ಕಲಿತಿದ್ದೀರಲ್ಲವೇ. ಮುಸ್ಲಿಮರ ಎಡೆಯಲ್ಲಿ ಆಡಂಬರದ ಜೀವನಕ್ಕೆ ಒತ್ತು ಕೊಡದೆ ಆಧ್ಯಾತ್ಮಿಕ ಜೀವನಕ್ಕೆ ಪ್ರಾಧಾನ್ಯ ನೀಡುವವರನ್ನು ಸೂಫಿಗಳು ಎಂದು ಕರೆಯುತ್ತಾರೆ. 11ನೇ ಶತಮಾನದಲ್ಲಿ ಮಧ್ಯಏಷ್ಯಾದಿಂದ ಇವರು ಭಾರತಕ್ಕೆ ಬಂದರು. ಭಾರತದ ವಿವಿಧ ಭಾಗಗಳಲ್ಲಿ ಸೂಫಿಗಳು ಸ್ಥಿರವಾಸ ಆರಂಭಿಸಿದರು. ಅವರಿಗೆ ಹಲವಾರು ಅನುಯಾಯಿಗಳಾದರು. ದೇವರೊಂದಿಗೆ ಹೆಚ್ಚು ಹತ್ತಿರವಾಗಲು ಭಕ್ತಿಯೇ ಒಂದು ದಾರಿಯೆಂದು ಸೂಫಿಗಳು ಕಂಡುಕೊಂಡರು. ಒಬ್ಬನು ದೇವರನ್ನು ನಿಜವಾಗಿಯೂ ಪ್ರೀತಿಸಿದರೆ ಅವನು ದೇವರೊಂದಿಗೂ ತನ್ನ ಸುತ್ತಲಿರುವ ಮಾನವರೊಂದಿಗೂ ಆತ್ಮೀಯರಾಗುವರು ಎಂದು ನಂಬಿದ್ದರು. ಎಲ್ಲಾ ಮನುಷ್ಯರನ್ನು ಗೌರವಿಸಬೇಕೆಂದು ಅವರು ಹೇಳಿದರು. ಸೂಫಿ ಗುರುವನ್ನು 'ಪೀರ್' ಅಥವಾ 'ಶೇಕ್'ಎಂದೂ ಅನುಯಾಯಿಗಳನ್ನು 'ಮುರೀದ್' ಎಂದೂ ಕರೆಯುತ್ತಿದ್ದರು. ಸೂಫಿಗಳ ವಾಸಸ್ಥಳಗಳಾದ ಖಾನ್‌ಗಾಹುಗಳ ಬಗ್ಗೆ ಹಿಂದಿನ ತರಗತಿಯಲ್ಲಿ ಪರಿಚಯಿಸಿದ್ದಿರಲ್ಲವೇ. ಖಾನ್‌ಗಾಹುಗಳು ಅಂದಿನ ಸಾಮಾಜಿಕ, ಸಾಂಸ್ಕೃತಿಕ ಜೀವನದ ಕೇಂದ್ರವಾಗಿದ್ದುವು. ಅಜ್‌ಮೀರ್‌ನ (ರಾಜಸ್ಥಾನ) ಕ್ವಾಜಾ ಮ್ಯೊನುದ್ದೀನ್ ಚಿಸ್ತಿ ಪ್ರಸಿದ್ಧರಾದ ಸೂಫಿ ಸಂತರಲ್ಲಿ ಒಬ್ಬರಾಗಿದ್ದಾರೆ. ದೇವರೊಂದಿಗೆ ಆತ್ಮೀಯತೆಯಿಂದಿರಲು ಭಕ್ತಿಗಾನಾಲಾಪನೆಯು ಅತ್ಯಂತ ಸೂಕ್ತವಾದ ಮಾರ್ಗವೆಂದು ಅವರು ಅಭಿಪ್ರಾಯಪಟ್ಟರು. ಕವ್ವಾಲಿಗಳು ಸೂಫಿ ಕೇಂದ್ರಗಳಲ್ಲಿ ಹಾಡುವ ಭಕ್ತಿಗೀತೆಗಳಾಗಿವೆ. ಆಡಳಿತಾಧಿಕಾರಿಗಳನ್ನು,

ಸಾರ್ವಜನಿಕರನ್ನು ಸಮಾನತೆಯಿಂದ ಗೌರವಿಸುತ್ತಿದ್ದ ಸೂಫಿ ಸಂತನಾದ ಶೇಖ್ ನಿಸಾಮುದ್ದೀನ್ ಔಲಿಯರ ಕೇಂದ್ರವು ದೆಹಲಿ ಆಗಿತ್ತು. ಸುಲ್ತಾನರ ಕಾಲದಲ್ಲಿಯೂ ಮೊಘಲರ ಕಾಲದಲ್ಲಿಯೂ ವಿವಿಧ ಧರ್ಮಗಳೊಳಗೆ ಸಂಬಂಧಗಳ ಸೇತುವೆಯನ್ನು ನಿರ್ಮಿಸಿದ್ದು ಸೂಫಿಗಳಾಗಿದ್ದಾರೆ.

ಕೆಳಗೆ ನೀಡಿರುವ ಪಟ್ಟಿ ನೋಡಿರಿ. ಇದರಿಂದ ಆ ಕಾಲದ ಪ್ರಖ್ಯಾತರಾದ ಸೂಫಿ ಸಂತರು ಯಾರೆಂದು ಹಾಗೂ ಅವರಿಗೆ ಸಂಬಂಧಿಸಿದ ಸ್ಥಳಗಳು ಯಾವುವೆಂದು ತಿಳಿಯಿರಿ.


ನಿಜಾಮುದ್ದೀನ್ ಔಲಿಯರ ದರ್ಗದ ಮುಂದೆ ನಡೆಯುವ ಕವ್ವಾಲಿ

| ಸೂಫಿ ಸಂತರು | ಸ್ಥಳ |
|---|---|
| ♦ ಬಾಬಾ ಫರೀದ್ | ♦ ಅಯೋಧಾನ್ |
| ♦ ಸಯ್ಯದ್ ಮುಹಮ್ಮದ್ ಜೇಸುದರಾಸ್ | ♦ ಗುಲ್ಬರ್ಗಾ |
| ♦ ಷಾ ಆಲಂ ಬುಖಾರಿ | ♦ ಗುಜರಾತ್ |
| ♦ ಬಹಾವುದ್ದೀನ್ ಸತ್ಕಾರಿಯ | ♦ ಮುಲ್ತಾನ್ |
| ♦ ಶೇಖ್ ಶಿರಾಬುದ್ದೀನ್ ಸುಹ್ರಾವರ್ದಿ | ♦ ಸಿಲ್‌ಹಟ್ |


ಶೇಖ್ ನಿಸಾಮುದ್ದೀನ್ ಔಲಿಯ ಮತ್ತು ಶಿಷ್ಯನಾದ ಅಮೀರ್ ಖುಸ್ರು – 17ನೇ ಶತಮಾನದ ಒಂದು ಛಾಯಾಚಿತ್ರ.

**ಮಧ್ಯಕಾಲದಲ್ಲಿ ವಿವಿಧ ಜನವಿಭಾಗಗಳೆಡೆಯಲ್ಲಿ ಸಾಂಸ್ಕೃತಿಕ ಸಮನ್ವಯವನ್ನು ಸಾಧಿಸಲು ಸೂಫಿಸಂ ವಹಿಸಿದ ಪಾತ್ರವನ್ನು ಪರಿಶೀಲಿಸಿರಿ.**

## ಭಕ್ತಿ ಪಂಥ

ಯಾಕೆ
ಕಾಡಿನಲ್ಲಿ ಅಲೆಯಬೇಕು?
ನಗರವನ್ನು ಸುತ್ತಬೇಕು?
ಗ್ರಂಥಗಳನ್ನು ಓದಿ
ಕಠಿಣ ತಪಸ್ಸು ಮಾಡಬೇಕು?
ಆಕಾಶವ ವೀಕ್ಷಿಸಿ
ಹಸಿದ ಹೊಟ್ಟೆಯಲ್ಲಿ ವ್ರತವೇಕೆ ಮಾಡಬೇಕು?
ಬನ್ನಿ
ಸರ್ವಜ್ಞನಾದ ಅವನಲ್ಲಿ
ಸ್ವಯಂ ಅರ್ಪಿಸಿ ಅದುವೇ ನಮ್ಮ ರಕ್ಷೆ

ಮೇಲೆ ನೀಡಿರುವುದು ಪ್ರಸಿದ್ಧ ಶೈವ ಸನ್ಯಾಸಿಯಾಗಿದ್ದ 'ಅಪ್ಪರ'ರವರ ಕವಿತೆಯ ಭಾಗಗಳಾಗಿವೆ.

ಭಕ್ತಿ ಪಂಥದ ಕುರಿತು ಹಿಂದಿನ ತರಗತಿಗಳಲ್ಲಿ ಚರ್ಚೆ ಮಾಡಿದ್ದೀರಲ್ಲವೇ. ಭಕ್ತಿ ಎಂದರೆ ಇಷ್ಟ. ದೇವರೊಡನೆ ಇರುವ ಅರ್ಪಣಾ ಮನೋಭಾವವಾಗಿದೆ. ದೇವ ಭಕ್ತಿಯನ್ನು ಆಧಾರವಾಗಿಟ್ಟುಕೊಂಡು ಮಧ್ಯಕಾಲದಲ್ಲಿ ಬೆಳೆದು ಬಂದ ಆಶಯಗಳನ್ನು ಮತ್ತು ಚಟುವಟಿಕೆಗಳನ್ನು ಭಕ್ತಿಪಂಥ ಎನ್ನುತ್ತಾರೆ. ಇದೊಂದು ಜನಪರ ಚಳವಳಿಯಾಗಿ ಮಾತ್ರ ಮೊದಲು ದಕ್ಷಿಣ ಭಾರತದಲ್ಲಿ ಬೆಳೆದುಬಂತು. ಪ್ರಾಚೀನ ಕಾಲದ ಭಕ್ತಿ ಪರಂಪರೆಗಳಿಗೆ ಕೆಲವು ವಿಶೇಷತೆಗಳು ಇದ್ದುವು. ಅವುಗಳು ಈ ಕೆಳಗಿನಂತಿವೆ.

- ಪ್ರಚಾರಕರು ಭಕ್ತಿ ಕವಿಗಳಾದ ಸನ್ಯಾಸಿಗಳಾಗಿದ್ದರು.
- ಶಾಸ್ತ್ರೋಕ್ತವಾದ ಬ್ರಾಹ್ಮಣ ಪರಂಪರೆಗೆ ಸವಾಲೆಸೆಯಿತು.
- ಮಹಿಳೆಯರಿಗೂ ಕೆಳವರ್ಗದವರಿಗೂ ಪ್ರಾತಿನಿಧ್ಯವನ್ನು ನೀಡಿದರು.
- ಸಾಹಿತ್ಯಕ್ಕೂ ಸಂಗೀತಕ್ಕೂ ಕೊಡುಗೆಗಳನ್ನು ನೀಡಿದರು.

**ಭಕ್ತಿಪಂಥ ಒಂದು ಸುಧಾರಣಾ ಚಳವಳಿಯಾಗಿತ್ತೆಂದು ಹೇಳುವುದು ಯಾಕೆ?**

## ಆಳ್ವಾರರೂ ನಾಯನ್ಮಾರರೂ


ತಮಿಳುನಾಡಿನಲ್ಲಿ ಮೊದಲಿಗೆ ಭಕ್ತಿ ಪಂಥವು ಆರಂಭವಾಯಿತು. ಈ ಪಂಥಕ್ಕೆ ನೇತೃತ್ವ ನೀಡಿದವರು ಆಳ್ವಾರರು ಮತ್ತು ನಾಯನ್ಮಾರರಾಗಿದ್ದರು. ಆಳ್ವಾರರು ವಿಷ್ಣುಭಕ್ತರು, ನಾಯನ್ಮಾರರು ಶಿವಭಕ್ತರು ಆಗಿದ್ದರು. ಅವರು ಭಕ್ತಿಗಾನಗಳನ್ನು ರಚಿಸಿ ಪ್ರಚಾರ ಮಾಡಿದ್ದರು. ಆಳ್ವಾರರು ಮತ್ತು ನಾಯನ್ಮಾರರು ಜಾತಿಯತೆಯನ್ನು ಎದುರಿಸಿದರು. ಅವರ ಜೊತೆಯಲ್ಲಿ ಸನ್ಯಾಸಿನಿಯರೂ ಇದ್ದರು. 'ಆಂಡಾಳ್' ವೈಷ್ಣವ ಸನ್ಯಾಸಿನಿಯರಲ್ಲಿ ಪ್ರಮುಖಳಾಗಿದ್ದಳು. ಸನ್ಯಾಸಿನಿಯಾಗಿದ್ದ ಕಾರೈಯ್ಕಲ್ ಅಮಯಾರಳು ಶಿವ ಭಕ್ತೆಯಾಗಿದ್ದಳು.

**ಸಾಹಿತ್ಯ ಕೃತಿಗಳು**

63 ನಾಯನ್ಮಾರರ ಕುರಿತು ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖವಿದೆ. ಇವರು ಕಾರ್ಮಿಕರು, ಕೃಷಿಕರು, ಬೇಟೆಗಾರರು, ಸೈನಿಕರು, ಬ್ರಾಹ್ಮಣರು, ಮುಖ್ಯಸ್ಥರು ಮುಂತಾದ ವಿವಿಧ ವಿಭಾಗಗಳಲ್ಲಿರುವವರಾಗಿದ್ದರು. ಅವರಲ್ಲಿ ಪ್ರಮುಖರಾದವರು ಅಪ್ಪರ್, ಸಂಬಂಧರ್, ಸುಂದರರ್, ಮಾಣಿಕಾ ವಾಸಗರು ಎಂಬವರಾಗಿದ್ದರು. ಅವರ ಕೃತಿ ಸಂಗ್ರಹವು ತೇವಾರಂ ಎಂಬುದಾಗಿ ತಿಳಿಯಲ್ಪಡುತ್ತದೆ. ವ್ಯತ್ಯಸ್ತ ವಿಭಾಗದಲ್ಲಿನ 12 ಆಳ್ವಾರ್‌ರ ಕುರಿತು ಉಲ್ಲೇಖಿಸಲಾಗಿದೆ. ಇವರಲ್ಲಿ ಪ್ರಧಾನವಾದವರು ಪೆರಿಯಾಳ್ವಾರ್, ಆಂಡಾಳ್, ತೊಂಡನಡಿಪ್ಪೊಡಿ, ನಮ್ಮಾಳ್ವರ್‌ಎಂಬವರಾಗಿದ್ದರು. ಅವರ ರಚನೆಗಳು 'ನಾಲ್ಕು ಸಾವಿರ ದಿವ್ಯ ಪ್ರಬಂಧ' ಎಂಬ ಹೆಸರಿನಲ್ಲಿ ತಿಳಿಯಲ್ಪಡುತ್ತದೆ.

ದಕ್ಷಿಣ ಭಾರತದಲ್ಲಿ ಭಕ್ತಿಪಂಥ ಪ್ರಚಾರ ಮಾಡುವುದರಲ್ಲಿ ಆಳ್ವಾರರು ಹಾಗೂ ನಾಯನ್ಮಾರರು ವಹಿಸಿದ ಪ್ರಾತ್ರವನ್ನು ಚರ್ಚೆಮಾಡಿರಿ.


# ವೀರಶೈವ ಪಂಥ




ಮೇಲೆ ನೀಡಿರುವ ಸಾಲುಗಳನ್ನು ನೋಡಿರಿ. ಇವು ಕರ್ನಾಟಕದಲ್ಲಿ ಜೀವಿಸಿದ್ದ ಬಸವಣ್ಣನ ವಚನ ಸಾಹಿತ್ಯದ ಕೆಲವು ಸಾಲುಗಳಾಗಿವೆ.


ಬಸವಣ್ಣ

ವೀರಶೈವ ಪಂಥವು 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ರೂಪುಗೊಂಡ ಒಂದು ಜನಪರ ಚಳವಳಿಯಾಗಿದೆ. ವೀರಶೈವರು ಕುತ್ತಿಗೆಯಲ್ಲಿ ಶಿವಲಿಂಗ ಧರಿಸುವುದರಿಂದ ಲಿಂಗಾಯಿತರು ಎಂದು ತಿಳಿಯಲ್ಪಡುತ್ತಾರೆ. ಬಸವಣ್ಣ ಈ ಪಂಥದ ಪ್ರಮುಖರು. ವೀರಶೈವರ ಚಳುವಳಿಯು ಲಿಂಗಭೇದ ಮತ್ತು ಜಾತಿಭೇದಕ್ಕೆ ವಿರುದ್ಧವಾಗಿ ಹೋರಾಡಿದ ಮೊತ್ತಮೊದಲ ಚಳುವಳಿಯಾಗಿದೆ. ವೀರಶೈವರು ಶಿವಭಕ್ತರಾಗಿದ್ದರು. ವೀರಶೈವ ಸಮಿತಿಯ ಆಶಯಗಳನ್ನು ಕೆಳಗೆ ನೀಡಲಾಗಿದೆ. 'ಅನುಭವ ಮಂಟಪ' ವು 12ನೇ ಶತಮಾನದಲ್ಲಿ ಲಿಂಗಾಯಿತರ ವಿಭಾಗಗಳಿಗೆ ಸಂಬಂಧಿಸಿ ರೂಪುಗೊಂಡ ಒಂದು ಪ್ರಜಾಪ್ರಭುತ್ವ ವೇದಿಕೆಯಾಗಿತ್ತು. ಬಸವಣ್ಣನ ನೇತೃತ್ವದಲ್ಲಿ ಅನುಭವ ಮಂಟಪದಲ್ಲಿ ಸೇರಿದ ಸಮ್ಮೇಳನದಲ್ಲಿ ಜಾತಿ, ಮತ, ಸ್ತ್ರೀ, ಪುರುಷ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಪಾಲ್ಗೊಳ್ಳಲು ಮತ್ತು ಚರ್ಚೆಗಳಲ್ಲಿ ಭಾಗವಹಿಸಲು ಅವಕಾಶ ಒದಗಿಸಲಾಗಿತ್ತು. ಸಮಾಜದ ಅಸಮಾನತೆಗಳನ್ನು ಎದುರಿಸುವುದಕ್ಕೆ ಮತ್ತು ಜಾತಿಯ ಮೇಧಾವಿತ್ವವನ್ನು ಪ್ರಶ್ನಿಸಲು ಇದು ದಾರಿ ಮಾಡಿತು. ಬಸವಣ್ಣನವರು ಕೆಲಸದ ಮಹತ್ವವನ್ನು ಮೊತ್ತಮೊದಲಾಗಿ ಹೇಳಿದವರಾಗಿದ್ದಾರೆ. ಎಲ್ಲಾ ವ್ಯಕ್ತಿಗಳು ಯಾವುದಾದರೂ ಒಂದು ಕೆಲಸ ಸ್ವೀಕರಿಸಬೇಕೆಂದೂ ಅದನ್ನು ನಿಷ್ಠೆಯಿಂದ ಮಾಡಬೇಕೆಂದೂ ಬಸವಣ್ಣನವರು ಬೋಧಿಸಿದರು. ನಾವು ಮಾಡುವ ಕೆಲಸದ ಮೂಲಕ ದೇವರನ್ನು ತಿಳಿದುಕೊಳ್ಳಬಹುದೆಂದು ಅವರು ಹೇಳಿದರು. ಜಗತ್ತಿನ ಎಲ್ಲ ಕೆಲಸಕ್ಕೂ ಅದರದ್ದೇ ಆದ ಮಹತ್ವವಿದೆ ಎಂದು ಬಸವಣ್ಣ ನೆನಪಿಸಿದರು.



ವೀರಶೈವ ಪಂಥದ ಪ್ರಭಾವದಿಂದ ಕನ್ನಡ ಭಾಷೆಯಲ್ಲಿ ಪ್ರಸಿದ್ಧವಾದ ವಚನ ಸಾಹಿತ್ಯವು ರೂಪುಗೊಂಡಿತು. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಎಂಬವರು ವಚನ ಸಾಹಿತ್ಯಕ್ಕೆ ಹೆಚ್ಚಿನ ಕೊಡುಗೆಗಳನ್ನು ನೀಡಿದವರಾಗಿದ್ದಾರೆ. ಬಸವಣ್ಣನವರು ವಚನದ ಮೂಲಕ ವೇದಗಳ ಪ್ರಾಮಾಣಿಕತೆಯನ್ನು ಪ್ರಶ್ನಿಸುವುದರೊಂದಿಗೆ ಸಮಾಜ ಸುಧಾರಣಾ ಪ್ರಯತ್ನಗಳನ್ನು ಪ್ರೋತ್ಸಾಹಿಸಿದರು. ವಚನ ಸಾಹಿತ್ಯವು ಕನ್ನಡ ಭಾಷೆಯ ಬೆಳವಣಿಗೆಗೆ ಸಹಾಯಕವಾಯಿತು.



ವೀರಶೈವ ಪಂಥ ಮುಂದಿಟ್ಟ ಆಶಯಗಳ ಸಮಕಾಲೀನ ಔಚಿತ್ಯವನ್ನು ಚರ್ಚಿಸಿರಿ.

## ಉತ್ತರ ಭಾರತದಲ್ಲಿ ಭಕ್ತಿಪಂಥ

ತಮಿಳುನಾಡಿನಲ್ಲಿ ಆರಂಭಗೊಂಡ ಭಕ್ತಿಪಂಥವು ಅನಂತರದ ಕಾಲದಲ್ಲಿ ಉತ್ತರ ಭಾರತಕ್ಕೆ ವ್ಯಾಪಿಸಿತು.



ಭಕ್ತಿಪಂಥದ ಚಳವಳಿಗಳಿಗೆ ನೇತೃತ್ವ ನೀಡಿದವರನ್ನು ಮತ್ತು ಅವರು ಜೀವಿಸಿದ್ದ ಪ್ರದೇಶಗಳನ್ನು ಮೇಲಿನ ಭೂಪಟದಲ್ಲಿ ನೀಡಲಾಗಿದೆ. ಆದರಿಂದ ಉತ್ತರಭಾರತದ ಭಕ್ತಿಪಂಥದ ನೇತಾರರನ್ನು ಮತ್ತು ಅವರ ಪ್ರದೇಶಗಳು ಒಳಗೊಂಡಿರುವ ಇಂದಿನ ರಾಜ್ಯಗಳನ್ನು ಕಂಡುಹಿಡಿದು ಕೆಳಗೆ ನೀಡಿದ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ನೇತಾರರು | ರಾಜ್ಯಗಳು |
|---|---|
| ♦ ಲಾಲ್‌ದೇದ್ | ♦ ಕಾಶ್ಮೀರ |
| ♦ ವಲ್ಲಭಾಚಾರ್ಯ | ♦ ಗುಜರಾತ್ |
| ♦ ಶಂಕರದೇವ | ♦ |
| ♦ ನಾಮದೇವ್, ತುಕಾರಾಂ | ♦ |
| ♦ ಚೈತನ್ಯ | ♦ |
| ♦ ಮೀರಾಬಾಯಿ | ♦ |
| ♦ ಗುರುನಾನಕ್ | ♦ |



## ಕಬೀರ್

> ದೇವರು ಹಲವು ಹೆಸರಿನಲ್ಲಿ ತಿಳಿಯಲ್ಪಡುತ್ತಾನೆ. ಅಲ್ಲಾ, ರಾಂ, ಕರೀಂ, ಕೇಶವ, ಹರಿ, ಹಸ್ರತ್.... ಚಿನ್ನವನ್ನು ಉಂಗುರವಾಗಿಯೂ ಬಳೆಯಾಗಿಯೂ ಬದಲಾಯಿಸಬಹುದು. ಆದರೆ ಅದೆಲ್ಲ ಚಿನ್ನವೇ ಆಗಿದೆ. ವ್ಯತ್ಯಾಸವಿರುವುದು ನಾವು ಉಪಯೋಗಿಸುವ ಪದದಲ್ಲಿ ಮಾತ್ರ.



ಕಬೀರ್

ಮೇಲೆ ನೀಡಿರುವುದು ಭಕ್ತಿಪಂಥದ ಸಂತನಾದ ಕಬೀರ್‌ನ 'ದೋಹ'ದ (ಅರ್ಥಪೂರ್ಣವಾದ ದ್ವಿಪದಿಗಳು) ಒಂದು ಭಾಗವಾಗಿದೆ. ಒಂದೇ ಮಣ್ಣಿನಿಂದ ನಿರ್ಮಿಸಿದ ಎರಡು ಪಾತ್ರೆಗಳು ಹಿಂದು ಮತ್ತು ಮುಸ್ಲಿಂ ಆಗಿವೆ ಎಂದು ನೆನಪಿಸುವ ಅವರು ಹಿಂದೂಗಳಲ್ಲೂ ಮುಸ್ಲಿಮರಲ್ಲೂ ಪರಸ್ಪರ ಸಹೋದರ ಬಾಂಧವ್ಯವನ್ನು ಬೆಳೆಸಲು ಶ್ರಮಿಸಿದರು. ಎಲ್ಲ ಜಾತಿಯವರನ್ನು, ಧರ್ಮದವರನ್ನು ಒಂದುಗೂಡಿಸಿ ಮತೇತರ ಬಾಂಧವ್ಯವನ್ನು ಪ್ರಚಾರಮಾಡುವುದು ಕಬೀರರ ಮುಖ್ಯ ಗುರಿಯಾಗಿತ್ತು. ಜಾತಿ, ಮತ, ಬಣ್ಣ, ಕುಟುಂಬ, ಸಂಪತ್ತು ಮೊದಲಾದುವುಗಳ ಆಧಾರದಲ್ಲಿರುವ ಭೇದ-ಭಾವವನ್ನು ಕಬೀರರು ಪ್ರಬಲವಾಗಿ ವಿರೋಧಿಸಿದರು. ಜಾತಿಪದ್ಧತಿಯನ್ನೂ ಅಶ್ಪೃಶ್ಯತೆಯನ್ನೂ ಪ್ರಬಲವಾಗಿ ಎದುರಿಸಿದ ಕಬೀರರು ಮಾನವರ ಐಕ್ಯಕ್ಕೆ ಪ್ರಾಧಾನ್ಯ ನೀಡಿದರು. ವಿಗ್ರಹಾರಾಧನೆ, ತೀರ್ಥಯಾತ್ರೆ, ಪುಣ್ಯನದಿ ಸ್ನಾನ ಎಂಬಿವುಗಳನ್ನು ಅವರು ನಿರಾಕರಿಸಿದರು.

ಸನ್ಯಾಸವನ್ನು ಸ್ವೀಕರಿಸಲು ಮತ್ತು ಕೌಟುಂಬಿಕ ಜೀವನ ತ್ಯಜಿಸಲು ಅವರು ಒಪ್ಪಲಿಲ್ಲ. ಸೂಫಿ-ಭಕ್ತಿ ಪರಂಪರೆಯೊಂದಿಗಿರುವ ನಿರಂತರವಾದ ಸಂವಾದದ ಮತ್ತು ಚರ್ಚೆಯ ಫಲವಾಗಿ ಕಬೀರರ ಆಶಯಗಳು ವಿಕಾಸಹೊಂದಿದುವು.

**ವಿವಿಧ ವಿಭಾಗದ ಜನರೆಡೆಯಲ್ಲಿ ಧಾರ್ಮಿಕ ಸೌಹಾರ್ದತೆಯನ್ನು ಬೆಳೆಸುವುದರಲ್ಲಿ ಕಬೀರರ ಆಶಯಗಳು ವಹಿಸಿದ ಪಾತ್ರವನ್ನು ಪರಿಶೀಲಿಸಿರಿ.**


## ಗುರುನಾನಕ್


ಗುರುನಾನಕ್

ಗುರುನಾನಕರು ಏಕದೇವ ನಂಬಿಕೆಗೆ ಒತ್ತು ನೀಡಿದ ಬೋಧನಾಕಾರರಾಗಿದ್ದರು. ಹಿಂದು, ಮುಸ್ಲಿಂ ಮತಗಳಲ್ಲಿನ ತತ್ವಗಳನ್ನು ಏಕೀಕರಿಸಲು ಇವರು ಶ್ರಮಿಸಿದರು. ಮತ ಸಹಿಷ್ಣುತೆ, ಸಹೋದರತೆ ಎಂಬೀ ಆಶಯಗಳ ವಕ್ತಾರರಾಗಿದ್ದ ಅವರು ಹಿಂದೂ ಇಸ್ಲಾಂ ಮತಗಳಲ್ಲಿನ ಬಾಹ್ಯಾನುಷ್ಠಾನಗಳನ್ನು ಎದುರಿಸಿದರು. ದೇವರ ಕೃಪೆ ಲಭಿಸಲು ನಮ್ಮ ಗುಣ ನಡತೆಯು ಉತ್ತಮವಾಗಿರಬೇಕೆಂದು ಅವರು ಹೇಳಿದರು. ವಿಗ್ರಹಾರಾಧನೆ, ತೀರ್ಥಯಾತ್ರೆ ಮೊದಲಾದುವುಗಳನ್ನು ಅವರು ಕಡ್ಡಾಯವಾಗಿ ವಿರೋಧಿಸಿದರು. ಗೃಹಸ್ಥ ಜೀವನ ಕರ್ತವ್ಯಗಳೊಂದಿಗೆ ಅಧ್ಯಾತ್ಮಿಕ ಜೀವನವನ್ನು ಸಾಗಿಸುವುದನ್ನು ಅವರು ಪ್ರೋತ್ಸಾಹಿಸಿದರು. 'ಪಾಬಾಹ್' ಎಂದು ತಿಳಿಯಲ್ಪಡುವ ಪ್ರಾರ್ಥನಾ ಗೀತೆಗಳು ನಾನಕ್‌ರ ಕೊಡುಗೆಯಾಗಿದೆ. ಮಾನವರೆಲ್ಲರೂ ಸಮಾನರು ಆದುದರಿಂದ ಅವರೆಡೆಯಲ್ಲಿ ಜಾತಿ ವ್ಯತ್ಯಾಸ ಇರಬಾರದೆಂದು ಅವರು ಒತ್ತಿ ಹೇಳಿದರು. ತನ್ನ ಅನುಯಾಯಿಗಳು ಒಂದು ಸಾಮಾನ್ಯ ಅಡುಗೆ ಕೋಣೆ (ಲಂಗರ್) ಯಿಂದ ಆಹಾರ ಸೇವಿಸಲು ತಯಾರಿರಬೇಕೆಂದು ಅವರು ಹೇಳಿದರು. ಯಾವ ಜಾತಿಗೆ ಸೇರಿದವರಿಗೂ ಅಲ್ಲಿಂದ ಆಹಾರ ಸೇವಿಸಲು ಸಾಧ್ಯವೆಂದು ನಾನಕ್ ತಿಳಿಸಿದರು. ನಾನಕ್‌ನ ಆಶಯಗಳು ಮುಂದೆ ಸಿಖ್ ಮತದ ಉದ್ಭವಕ್ಕೆ ನಾಂದಿಯಾಯಿತು.

ಗುರುನಾನಕರ ಆಶಯಗಳನ್ನು ಆಧಾರವಾಗಿರಿಸಿ ಒಂದು ಟಿಪ್ಪಣಿ ತಯಾರಿಸಿರಿ.

## ಭಕ್ತಿ ಪಂಥದಲ್ಲಿ - ಸ್ತ್ರೀ ಪ್ರಾತಿನಿಧ್ಯ


ಮೀರಾಬಾಯಿ


ಹಲವಾರು ಸ್ತ್ರೀಯರು ಭಕ್ತಿಪಂಥದೆಡೆಗೆ ಆಕರ್ಷಿತರಾದರು. ಅವರಲ್ಲಿ ಪ್ರಧಾನರಾದವರು ರಾಜಸ್ಥಾನದ ಕವಯಿತ್ರಿಯಾದ ಮೀರಾಬಾಯಿಯಾಗಿದ್ದರು. ಅವರು ಕೃಷ್ಣಭಕ್ತೆಯಾಗಿದ್ದರು. ಇವರು ಹಲವಾರು ಭಜನೆಗಳನ್ನು ರಚಿಸಿದರು. ಇವುಗಳೆಲ್ಲ ಕೃಷ್ಣನ ಕುರಿತಾದ ಭಕ್ತಿಗೀತೆಗಳಾಗಿದ್ದವು. ಮೀರಾಭಾಯಿಯವರ ಭಕ್ತಿ ಗೀತೆಗಳನ್ನು ಗುಜರಾತ್, ರಾಜಸ್ಥಾನಗಳಲ್ಲಿ ಇಂದಿಗೂ ಜನರು ಆಲಾಪಿಸುತ್ತಿದ್ದಾರೆ. ಮೀರಾಭಾಯಿಗೆ ಪ್ರತ್ಯೇಕವಾದ ಅನುಯಾಯಿಗಳೋ ಸಂಘವೋ ಇರಲಿಲ್ಲ. ಆದರೂ ಶತಮಾನಗಳ ಕಾಲ ಪ್ರಚೋದನೆಯ ಮೂಲಗಳಿಂದ ಅವರು ಅಂಗೀಕರಿಸಲ್ಪಟ್ಟರು. ಇವರಲ್ಲದೆ ಭಾರತದ ವಿವಿಧ ಭಾಗಗಳಲ್ಲಿ ಭಕ್ತಿ ಪಂಥದ ಸ್ತ್ರೀ ಸಾನ್ನಿಧ್ಯವನ್ನು ನಾವು ಕಾಣಬಹುದಾಗಿದೆ. ಕಾಶ್ಮೀರದ ಲಾಲ್‌ದೇದ್, ಮಹಾರಾಷ್ಟ್ರದ ಭಹೀನಾಭಾಯ್, ಕರ್ನಾಟಕದ

ಅಕ್ಕಮಹಾದೇವಿ, ತಮಿಳ್ನಾಡಿನ ಆಂಡಾಳ್, ಕರಯಿಕ್ಕಲ್ ಅಮ್ಮ್ಯಾರ್ ಎಂಬಿವರು ಅವರಲ್ಲಿ ಪ್ರಮುಖರಾಗಿದ್ದರು.

### ಭಕ್ತಿಪಂಥದ ಪರಿಣಾಮಗಳು

ದೇವರಿಗೆ ಸಮರ್ಪಣೆ ಎಂಬ ಗುರಿಯಿಟ್ಟುಕೊಂಡು ಭಕ್ತಿಯಿಂದೊಡಗೂಡಿದ ಈ ಚಳುವಳಿಯು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ಪರಿಣಾಮಗಳಿಗೆ ಕಾರಣವಾಯಿತು. ದೇವರ ಮುಂದೆ ಎಲ್ಲರೂ ಸಮಾನರೆಂದು ಭಕ್ತಿ ಪ್ರಚಾರಕರು ಸಾರಿದರು. ಜಾತಿ ವ್ಯವಸ್ಥೆಗೆ ಎದುರಾಗಿ ಸಾಮಾಜಿಕ ಸಮಾನತೆ ಎಂಬ ಚಿಂತನೆ ಇದರೊಂದಿಗೆ ಬಲಗೊಂಡಿತು. ಸ್ತ್ರೀ, ಪುರುಷ ಸಮಾನರೆಂಬ ಆಶಯ ರೂಪುಗೊಂಡಿತು. ಜಾತಿಯಲ್ಲಿ ಹಿಂದುಳಿದವರಾಗಿದ್ದ ತಿರುಪ್ಪನ, ಆಳ್ವಾರು, ಕಬೀರ್, ಲಾಲ್‌ದೆದು ಭಕ್ತಿಪಂಥವನ್ನು ಮುನ್ನಡೆಸಿದಾಗ ಸಾಮಾಜಿಕ ಸಮಾನತೆ ಎಂಬ ಆಶಯಕ್ಕೆ ಪ್ರಚಾರ ಲಭಿಸಿತಲ್ಲದೆ ಪ್ರಾದೇಶಿಕ ಭಾಷೆಗಳೂ ವಿಕಾಸಗೊಂಡವು. ಅನಾಚಾರಗಳನ್ನು ಪ್ರಶ್ನಿಸಲು ಆರಂಭಿಸಿದರು.

**ಭಕ್ತಿಪಂಥವು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಉಂಟುಮಾಡಿದ ಬದಲಾವಣೆಗಳು ಯಾವುವು?**



## ಪ್ರಾದೇಶಿಕ ಭಾಷೆಗಳ ಬೆಳವಣಿಗೆ

ಭಾರತದೆಲ್ಲೆಡೆ ಇರುವ ಭಕ್ತಿ-ಸೂಫಿ ಪಂಥದ ಪ್ರಚಾರಕರು ತಮ್ಮ ಆಶಯಗಳನ್ನು ಆಯಾ ಪ್ರದೇಶದಲ್ಲಿರುವ ಭಾಷೆಯಲ್ಲಿ ಪ್ರಚಾರ ಮಾಡಿದರು. ಇದರಿಂದ ಜನಸಾಮಾನ್ಯರಿಗೆ ಸುಲಭವಾಗಿ ತಿಳಿಯಲು ಸಾಧ್ಯವಾಯಿತು. ಇದು ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಸಹಕರಿಸಿತು. ಹಿಂದಿಯ ಎರಡು ರೂಪಗಳಾದ 'ಭಜು' (ಪ್ರಜಭಾಷೆ), 'ಅವಧಿ' ಮಾತನಾಡುವ ಭಾಷೆಯಾಗಿ ಉಪಯೋಗಿಸಲ್ಪಟ್ಟಿತು. ಈ ಕಾಲದಲ್ಲಿ ಪಂಜಾಬಿ, ಕನ್ನಡ, ತೆಲುಗು, ಒರಿಯ, ಅಸ್ಸಾಮಿ, ಮರಾಠಿ, ಬಂಗಾಳಿ, ಸಿಂಧೀ, ಮಲೆಯಾಳ ಎಂಬೀ ಭಾಷೆಗಳು ರೂಪುಗೊಂಡವು.

**ಉರ್ದು**



'ಉರ್ದು' ಎಂಬ ಪದದ ವಾಚ್ಯಾರ್ಥವು 'ಶಿಬಿರ' ಎಂದಾಗಿದೆ. ವಿವಿಧ ಭಾಷೆಯವರಾದ ಸೈನಿಕರು ತಮ್ಮೊಳಗೆ ಮಾತನಾಡಲು ಉರ್ದು ಭಾಷೆಯನ್ನು ಬಳಸಿದರು. ಇದು ಹಿಂದಿ ಭಾಷೆಯ ವ್ಯಾಕರಣವನ್ನು ಹೊಂದಿದೆ. ಇದು ಪರ್ಶಿಯಾ, ತುರ್ಕಿ, ಹಿಂದೀ ಎಂಬೀ ಭಾಷೆಗಳಿಂದ ಪದಗಳನ್ನು ಸ್ವೀಕರಿಸಿದೆ.

ಮಧ್ಯಕಾಲದಲ್ಲಿ ದೇಶದ ಹೆಚ್ಚಿನ ಭಾಗಗಳಲ್ಲೂ ನ್ಯಾಯಾಲಯದ ಭಾಷೆ ಪರ್ಶಿಯನ್ ಆಗಿತ್ತು. ಅದಕ್ಕಾಗಿ ಹಲವು ಪ್ರಾದೇಶಿಕ ಭಾಷೆಗಳಲ್ಲೂ ಪರ್ಶಿಯನ್ ಪದಗಳು ಪ್ರವೇಶಿಸಿದವು. ಪರ್ಶಿಯನ್ ಮತ್ತು ಹಿಂದಿ ಭಾಷೆಯ ಸಮ್ಮಿಲನದ ಫಲವಾಗಿ 'ಉರ್ದು' ಎಂಬ ಹೊಸ ಭಾಷೆ ರೂಪುಗೊಂಡಿತು. ಉರ್ದು ಭಾಷೆ ಮಧ್ಯಕಾಲದ ಭಾರತದ ಸಾಂಸ್ಕೃತಿಕ ಸಮನ್ವಯಕ್ಕೆ ಉತ್ತಮ ಉದಾಹರಣೆಯಾಗಿದೆ. ದಕ್ಷಿಣ ಪ್ರದೇಶಗಳಲ್ಲಿ ಮಾತನಾಡುತ್ತಿದ್ದ ಉರ್ದುವಿನ ಮೇಲೆ ತೆಲುಗಿನ, ಮರಾಠಿಯ ಪ್ರಬಲವಾದ ಪ್ರಭಾವ ಇದೆ. ಕ್ರಮೇಣ ಉರ್ದು ಪಟ್ಟಣಗಳಲ್ಲಿ ಹೆಚ್ಚು ಪ್ರಭಾವವಿರುವ, ಮಾತನಾಡುವ ಭಾಷೆಯಾಯಿತು. ಪಶ್ಚಿಮ ತೀರ ಪ್ರದೇಶಗಳಲ್ಲಿ ವ್ಯಾಪಾರಿಗಳು ಅರಬಿ ಭಾಷೆ ಬಳಸುತ್ತಿದ್ದರು. ಕೇರಳದಲ್ಲಿ ಅರಬಿ ಭಾಷೆಯು ಪ್ರಾದೇಶಿಕ ಭಾಷೆಗಳ ಮೇಲೆ ಪ್ರಭಾವಬೀರಿತು. ಅರಬಿ ಭಾಷೆಯ ಪ್ರಭಾವದಿಂದ ಅರಬಿ ಮಲಯಾಳಂ ಎಂಬ ಹೊಸ ಮಿಶ್ರಭಾಷೆಯು ರೂಪುಗೊಂಡಿತು.

ಮಧ್ಯಕಾಲದಲ್ಲಿ ಸಂಸ್ಕೃತ ಭಾಷೆಯನ್ನು ಜನರು ಬಳಸುತ್ತಿದ್ದರು. ವಿಜಯನಗರದ ಆಡಳಿತಗಾರರು ಸಭೆಗಳಲ್ಲಿ, ಉತ್ಸವಗಳಲ್ಲಿ ಸಂಸ್ಕೃತ ಭಾಷೆಯನ್ನು ಬಳಸಿದರು. ಉನ್ನತ ವಿದ್ಯಾಭ್ಯಾಸದ ಭಾಷೆಯಾಗಿ ಸಂಸ್ಕೃತವು ಜಾರಿಗೆ ಬಂತು. ಸಂಸ್ಕೃತದಲ್ಲಿದ್ದ ಪ್ರಸಿದ್ಧ ಸಾಹಿತ್ಯಗಳಾದ ಪುರಾಣಗಳು, ರಾಮಾಯಣ, ಮಹಾಭಾರತ ಎಂಬಿವುಗಳು ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಾದುವು.


ಈ ಕಾಲದಲ್ಲಿ ಕೆಲವು ಕವಿಗಳ, ಬರಹಗಾರರ ಮೇಲೆ ಪರ್ಶಿಯನ್ ಸಾಹಿತ್ಯವು ಪ್ರಭಾವ ಬೀರಿತು. ಅಮಿರ್ ಖುಸ್ರು ಆ ಕಾಲದಲ್ಲಿ ಪ್ರಸಿದ್ಧಿಯನ್ನು ಪಡೆದ ಪರ್ಶಿಯನ್ ಬರಹಗಾರನಾಗಿದ್ದನು. ಅವರ ಹೆಚ್ಚಿನ ಕವಿತೆಗಳು ಪರ್ಶಿಯನ್ ಭಾಷೆಯಲ್ಲಾಗಿತ್ತು. ಅವರ ಗ್ರಂಥಗಳಲ್ಲಿನ ಆಶಯವು ಭಾರತದೊಂದಿಗಿನ ಸ್ನೇಹ ಮತ್ತು ಅಭಿಮಾನವನ್ನು ವ್ಯಕ್ತಪಡಿಸುತ್ತದೆ.


ಸೂರ್‌ದಾಸ್

ಆ ಕಾಲದಲ್ಲಿ ಹಲವಾರು ಭಾರತೀಯ ಕೃತಿಗಳನ್ನು ಪರ್ಶಿಯನ್ ಭಾಷೆಗೆ ಅನುವಾದ ಮಾಡಲಾಯಿತು. ರಾಮಾಯಣ, ಮಹಾಭಾರತ, ಅಥರ್ವವೇದ, ಉಪನಿಷತ್ತುಗಳು ಎಂಬಿವುಗಳು ಈ ಗುಂಪಿನಲ್ಲಿ ಸೇರುತ್ತದೆ. ಕಲ್ಹಣ ರಚಿಸಿದ ಇತಿಹಾಸಗ್ರಂಥವಾದ 'ರಾಜತರಂಗಿಣಿ' ಕಾಶ್ಮೀರಿ ರಾಜನಾಗಿದ್ದ ಸೈನುಲ್ ಅಬುದೀನ್‌ನ ಕಾಲದಲ್ಲಿ ಪರ್ಶಿಯನ್ ಭಾಷೆಗೆ ಅನುವಾದಗೊಂಡಿತು.


ತುಳಸೀದಾಸ್

ಹಿಂದಿ ಭಾಷೆಯು ಮಧ್ಯಕಾಲದ ಭಾರತದಲ್ಲಿ ಬೆಳೆದುಬಂದ ಭಾಷೆಯಾಗಿತ್ತು. ರಾಮನಂದನ ಮತ್ತು ಕಬೀರರು ಹಿಂದಿಯಲ್ಲಿ ಧರ್ಮೋಪದೇಶ ನಡೆಸಿದರು. ಕಬೀರರ ದೋಹಾಗಳು ಹಿಂದಿ ಸಾಹಿತ್ಯದಲ್ಲಿನ ಉತ್ತಮ ಕೃತಿಗಳಿಗೆ ಉದಾಹರಣೆಯಾಗಿವೆ. ಸೂರದಾಸನ 'ಸುರ್ಸಾಗರ್', ತುಳಸಿದಾಸರ 'ರಾಮಚರಿತಮಾನಸ' ಮೀರಾಭಾಯಿಯ 'ಭಜನೆ' ಗಳು ಮಾಲಿಕ್ ಮಹಮ್ಮದ್ ಜಾಯಸಿಯ 'ಪದ್ಮಾವತಿ' ಎಂಬಿವು ಹಿಂದೀ ಭಾಷೆಯುನ್ನು ಸಂಪನ್ನಗೊಳಿಸಿದುವು.



ಮಾಲಿಕ್ ಮುಹಮ್ಮದ್ ಜಾಯಸಿಯ ಪದ್ಮಾವತ್


ಕೆಳಗೆ ನೀಡಿರುವ ಪಟ್ಟಿ ನೋಡಿರಿ. ಅದರಿಂದ ಆ ಕಾಲದ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ತಿಳಿಯಲು ಸಾಧ್ಯವಾಗುವುದು.

| ಭಾಷೆ | ಕೃತಿಗಳು/ಸಾಹಿತ್ಯ ವಿಭಾಗ | ರಚಿಸಿದವರು |
|---|---|---|
| ♦ ಬಂಗಾಳಿ | ♦ ಮಹಾಭಾರತವು ಬಂಗಾಳಿಗೆ ಅನುವಾದಗೊಂಡಿತು. | ♦ ಶ್ರೀಕರನಂದಿ, ಕವೀಂದ್ರ |
| | ♦ ಬಂಗಾಳಿ ರಾಮಾಯಣ | ♦ ಕೃತಿವಾಸ ಓಜ |
| ♦ ಮರಾಠಿ | ♦ ಗೀತೆಗಳು | ♦ ವಮನ ಪಂಡಿತ್ |
| ♦ ಒರಿಯ | ♦ ಕಾವ್ಯಗಳು | ♦ ಸರಳದಾಸ |

| | | |
|---|---|---|
| ♦ ತೆಲುಗು | ♦ ಮಹಾಭಾರತ ತೆಲುಗಿಗೆ ಅನುವಾದ ಮಾಡಿದರು | ♦ ನನ್ನಯ್ಯ, ತಿಕ್ಕನ, ಯರಪ್ರಗದ |
| ♦ ತಮಿಳು | ♦ ತಿರುಮುರೈ | ♦ ಅಪ್ಪರ್, ಸಂಬಂಧರು |
| | ♦ ನಾಲ್ಕು ಸಾವಿರ ದಿವ್ಯ ಪ್ರಬಂಧ | ♦ ಆಳ್ವಾರ್ಮಾರರು |
| ♦ ಕನ್ನಡ | ♦ ಕವಿರಾಜ ಮಾರ್ಗ | ♦ ಅಮೋಘವರ್ಷ |
| ♦ ಮಲಯಾಳ | ♦ ಆದ್ಯಾತ್ಮರಾಮಾಯಣ ಕಿಳಿಪ್ಪಾಟ್ಟ್ | ♦ ಎಳುತ್ತಚ್ಚನ್ |

ಭಕ್ತಿ-ಸೂಫಿ ಪಂಥಗಳು ಪ್ರಾದೇಶಿಕ ಭಾಷೆಗಳ ಬೆಳೆಯುವಿಕೆಗೆ ಹೇಗೆ ಸಹಾಯಕವಾಗಿವೆ? ಚರ್ಚೆ ಮಾಡಿರಿ.

## ಸಂಗೀತ





ಈ ಮೇಲಿನ ಹೇಳಿಕೆಯು ಮಧ್ಯಕಾಲ ಭಾರತದ ಸಂಗೀತ ವಿದ್ವಾಂಸರಾದ ಅಮೀರ್‌ಖುಸ್ರುನ ವಾಕ್ಯಗಳಾಗಿವೆ.

ಸಂಗೀತವು ಹೊಸರೂಪುಗಳಿಂದ ಸಮೃದ್ಧವಾದುದು ಮಧ್ಯಕಾಲದಲ್ಲಾಗಿದೆ. ಈ ಕಾಲದಲ್ಲಿ ಕರ್ನಾಟಕ ಸಂಗೀತವು ದಕ್ಷಿಣ ಏಷ್ಯಾದಲ್ಲಿ ನೆಲೆ ನಿಂತಿದ್ದ ಸಂಗೀತ ಶೈಲಿಯಾಗಿತ್ತು. ನಾಯ್ಕ್ ಗೋಪಾಲ್ ಆ ಕಾಲದ ಪ್ರಸಿದ್ಧ ಕರ್ನಾಟಕ ಸಂಗೀತ ವಿದ್ವಾಂಸರಾಗಿದ್ದರು. ಮಧ್ಯಕಾಲದಲ್ಲಿ ದಕ್ಷಿಣದಿಂದ ಬಹಳ ಷ್ಟು ಮಂದಿ ಸಂಗೀತ ಶಾಸ್ತ್ರಜ್ಞರು ಉತ್ತರ ಭಾರತಕ್ಕೆ ಬಂದರು. ಈ ಸಮಯದಲ್ಲಿ ಉತ್ತರ ಭಾರತದಲ್ಲಿ ಪರ್ಶಿಯನ್ ಸಂಗೀತದ ಪ್ರಭಾವದಿಂದ ನೂತನವಾದ ಸಂಗೀತ ಶೈಲಿಯು ರೂಪುಗೊಂಡಿತು. ಅದು ಹಿಂದುಸ್ಥಾನಿ ಸಂಗೀತ ಎಂಬ ಹೆಸರಿನಲ್ಲಿ ತಿಳಿಯಲ್ಪಟ್ಟಿತು. ಮಧ್ಯಕಾಲದಲ್ಲಿ ಪ್ರಸಿದ್ಧರಾದ ಹಿಂದುಸ್ಥಾನಿ ಸಂಗೀತಜ್ಞರಲ್ಲಿ ಒಬ್ಬರಾಗಿದ್ದ ಸಲ್‌ತನತ್ತ್‌ನ ಕಾಲದಲ್ಲಿ ಜೀವಿಸಿದ್ದ ಅಮೀರ್‌ಖುಸ್ರು ಕರ್ನಾಟಕ ಸಂಗೀತ ಶಾಸ್ತ್ರಜ್ಞನಾದ ಗುರುನಾಯ್ಕ್ ಗೋಪಾಲನಿಂದ ಭಾರತೀಯ ಸಂಗೀತವನ್ನು ಅಭ್ಯಸಿಸಿದರು.

### ಅಮೀರ್‌ಖುಸ್ರು



ಅಮೀರ್‌ಖುಸ್ರು ಮಹಾನ್ ಕವಿಯೂ ಸಂಗೀತಜ್ಞನೂ ಆಗಿದ್ದನು. ಅವರು ಸಂಗೀತ ಉಪಕರಣಗಳನ್ನು ನುಡಿಸುತ್ತಾ ಹಾಡುಗಳನ್ನು ಆಲಾಪನೆ ಮಾಡತ್ತ ಸೂಫಿ ಆಚಾರವಾಗಿರುವ 'ಸಾಮು'ಕ್ಕೆ ವಿಶೇಷವಾದ ರೂಪ ನೀಡಿದರು. ಕವ್ವಾಲಿ ಆರಂಭಿಸುವುದಕ್ಕೂ ಕೊನೆಗೊಳಿಸುವುದಕ್ಕೂ ಮೊದಲು ಪ್ರಾರ್ಥನೆ ಸಂಗೀತ ಹಾಡಿ ದೇವರನ್ನು ಸ್ತುತಿಸುವುದೇ ಈ ವಿಶೇಷತೆಯಾಗಿದೆ.


ತಾನ್‌ಸೇನ್

ಮಧ್ಯಕಾಲದ ರಾಜರುಗಳು ಈ ಸಂಗೀತ ಪ್ರಕಾರವನ್ನು ಪ್ರೋತ್ಸಾಹಿಸುತ್ತಿದ್ದರು. ಆ ಕಾಲದಲ್ಲಿ ಸಂಗೀತದಲ್ಲಿ ಹಲವು ಹೊಸ ಪ್ರಯೋಗಗಳು ನಡೆದವು. ಕ್ರಮಬದ್ಧವಾಗಿಯೂ ಹೊಸತನ್ನು ಕಂಡುಹಿಡಿದೂ ಹಾಡಲು ತೊಡಗಿದರು. ಪರ್ಶಿಯನ್ ಸಂಗೀತವನ್ನು ಭಾರತದ ಸಂಗೀತ ಶೈಲಿಯಲ್ಲಿ ಪರೀಕ್ಷಿಸಲಾಯಿತು. ಖಯಾಲ್, ತುಮ್ರಿ ಮುಂತಾದ ಆಲಾಪನ ರೀತಿಗಳಿಗೆ ಹೆಚ್ಚು ಪ್ರಚಾರ ಲಭಿಸಿತು. ಇದಲ್ಲದೆ ಸಿತಾರ, ಸಾರಂಗಿ, ತಬಲೆ ಮುಂತಾದ ಹೊಸ ಸಂಗೀತ ಉಪಕರಣಗಳು ಪ್ರಚಾರಕ್ಕೆ ಬಂದವು. ಕೆಲವು ಸೂಫಿಗಳಿಗೆ ಆಲಾಪನೆಯಲ್ಲಿ ಇರುವ ಆಸಕ್ತಿಯು ಇದಕ್ಕೆ ಕಾರಣವಾಗಿದೆ. ಖಯಾಲ್ ಮತ್ತು ಘಸಲ್‌ಗಳೆಂಬ ಸಂಗೀತ ರೀತಿಯು ಭಾರತದಲ್ಲಿ ವಿಕಾಸಗೊಂಡುದು ಸೂಫಿಗಳಿಂದಾಗಿದೆ. ಆ ಕಾಲದಲ್ಲಿ ಸಂಸ್ಕೃತದಲ್ಲಿದ್ದ ಸಂಗೀತ ಕೃತಿಗಳನ್ನು ಪರ್ಶಿಯನ್ ಭಾಷೆಗೆ ಅನುವಾದ ಮಾಡಿದರು. ಫಿರೋಜ್ ಷಾ ತುಘಲಕ್‌ನ ಕಾಲದಲ್ಲಿ 'ರಾಗದರ್ಪಣ್' ಎಂಬ ಸಂಗೀತ ಕೃತಿಯನ್ನು ಪರ್ಶಿಯನ್ ಭಾಷೆಗೆ ಅನುವಾದ ಮಾಡಿದರು. ಅಕ್ಬರ್ ಚಕ್ರವರ್ತಿಯು ಓರ್ವ ಶ್ರೇಷ್ಠ ಸಂಗೀತೋಪಾಸಕನಾಗಿದ್ದನು. ಆತನ ಆಸ್ಥಾನದಲ್ಲಿ 36 ಸಂಗೀತಶಾಸ್ತ್ರಜ್ಞರಿದ್ದುದಾಗಿ ಅಬುಲ್ ಫಸಲ್ ತನ್ನ ಕೃತಿಗಳಲ್ಲಿ ಉಲ್ಲೇಖಿಸಿದ್ದಾನೆ. ತಾನ್‌ಸೇನ್ ಅವರಲ್ಲಿ ಅತಿ ಪ್ರಸಿದ್ಧನಾಗಿದ್ದನು. ಹಿಂದುಸ್ಥಾನಿ ಸಂಗೀತವನ್ನು ಸಂಪನ್ನಗೊಳಿಸಿದುದು ತಾನ್‌ಸೇನ್‌ನ ಕೊಡುಗೆಯಾದ ದರ್‌ಬಾರಿ ರಾಗವಾಗಿದೆ.

13ನೇ ಶತಮಾನದ ಪೂರ್ವಾರ್ಧದಲ್ಲಿ ಜೀವಿಸಿದ್ದ ಶಾರಂಗ್‌ದೇವನ 'ಸಂಗೀತರತ್ನಾಕರಂ' ಎಂಬ ಗ್ರಂಥ ಮಧ್ಯಕಾಲ ಭಾರತದ ಸಂಗೀತ ಲೋಕದ ಪ್ರಧಾನ ಕೊಡುಗೆಯಾಗಿದೆ. ವಿಜಯನಗರ ರಾಜರುಗಳ ಕಾಲಘಟ್ಟದಲ್ಲಿ ಪರ್ಶಿಯನ್ ಅರಬಿ ಸಂಗೀತವು ದಕ್ಷಿಣ ಭಾರತದ ಕರ್ನಾಟಕ ಸಂಗೀತದ ಮೇಲೆ ಪ್ರಭಾವ ಬೀರಿತು.

**ಮಧ್ಯಕಾಲ ಭಾರತದ ಸಂಸ್ಕೃತಿಯ ಸಮನ್ವಯತೆಗೆ ಸಂಗೀತವು ಹೇಗೆ ಸಹಾಯಕಾರಿಯಾಗಿದೆ.?**

## ಶಿಲ್ಪಕಲೆ ಮತ್ತು ಚಿತ್ರಕಲೆ


ಬೃಹದೇಶ್ವರ ದೇವಾಲಯ- ತಂಜಾವೂರು (ದ್ರಾವಿಡ ಶೈಲಿ)

ಮಧ್ಯಕಾಲ ಭಾರತದಲ್ಲಿ ಶಿಲ್ಪಕಲೆ ಮತ್ತು ಚಿತ್ರಕಲೆ ಅಭಿವೃದ್ಧಿಯಾಯಿತು. ಆ ಕಾಲದಲ್ಲಿನ ಪ್ರಧಾನ ಕೆತ್ತನೆಗಳು ಮತ್ತು ಅದರ ವಿಶೇಷತೆಗಳ ಕುರಿತು ಹಿಂದಿನ ತರಗತಿಯಲ್ಲಿ ಕಲಿತಿದ್ದೀರಲ್ಲವೇ. ಶಿಲ್ಪಕಲೆಯ ಹೊಸ ಶೈಲಿಗಳಾದ ದ್ರಾವಿಡ, ನಾಗರ, ಇಂಡೊ ಪರ್ಶಿಯನ್ ಎಂಬಿವುಗಳು ವಿಕಾಸಹೊಂದಿದ್ದು ಮಧ್ಯಕಾಲದಲ್ಲಾಗಿದೆ. ವಿವಿಧ ಶಿಲ್ಪ ಕಲಾ ಶೈಲಿಗಳ ಸಮನ್ವಯವು ಈ ಕಾಲದ ವಿಶೇಷತೆಯಾಗಿದೆ.

ಕೊಟ್ಟಿರುವ ಚಿತ್ರಗಳನ್ನು ಗಮನಿಸಿರಿ.

ಇವು ಮಧ್ಯಕಾಲದಲ್ಲಿ ರಚಿಸಿದ ಚಿತ್ರಗಳಾಗಿವೆ. ಆ ಕಾಲದ ಚಿತ್ರಕಲೆಗಳ ವಿಶೇಷತೆಗಳನ್ನು ನೋಡೋಣ. ಮೊಘಲರ ಕಾಲದಲ್ಲಿ ಜಾರಿಗೆ ಬಂದ ಚಿತ್ರಕಲೆಯ ರೀತಿಯು ಸೂಕ್ಷ್ಮ ಚಿತ್ರಕಲೆ ಎಂಬ ಹೆಸರಿನಲ್ಲಿ ತಿಳಿಯಲ್ಪಡುತ್ತದೆ. ಈ ವಿಧಾನದಲ್ಲಿ ಪುಸ್ತಕಗಳಲ್ಲಿರುವ ಚಿತ್ರಗಳಂತೆ ಸಣ್ಣ ಚಿತ್ರಗಳನ್ನು ರಚಿಸುತ್ತಿದ್ದರು. ಇದು ಭಾರತದ ಶೈಲಿಯೂ ಪರ್ಶಿಯನ್ ಶೈಲಿಯೂ ತಮ್ಮೊಳಗೆ ಸಮ್ಮಿಶ್ರಗೊಂಡಿರುವ ಒಂದು ಶೈಲಿಯಾಗಿದೆ.


ಕಾಂದರ್ಯ ದೇವಾಲಯ ಖಜರಾವೊ (ನಾಗರ ಕಲೆಗಳು)


ಮೊಘಲರ ಚಿತ್ರಕಲೆ


ಕೆಂಪುಕೋಟೆ-ದೆಹಲಿ (ಇಂಡೋ ಪರ್ಶಿಯನ್ ಚಿತ್ರಕಲೆ)

ಮೊಘಲರ ಆಡಳಿತಾಧಿಕಾರಿಯಾದ ಹುಮಾಯುನ್, ಪರ್ಶಿಯ ಕಲಾಗಾರರೊಂದಿಗೆ ಸಂಬಂಧ ಬೆಳೆಸಿ ಮಿರ್ ಸಯ್ಯಿದ್ ಅಲಿ, ಅಬ್ದುಲ್ ಸಮದ್ ಎಂಬವರನ್ನು ಅರಮನೆಗೆ ಬರುವಂತೆ ಮಾಡಿದರು. ಇವರಿಬ್ಬರು ಮೊಘಲ ಚಿತ್ರಕಲಾ ಶೈಲಿಯ ಪಿತಾಮಹರಾಗಿದ್ದಾರೆ.

ಅಕ್ಬರನ ಆಡಳಿತ ಕಾಲದಲ್ಲಿ ರಾಜಕೀಯ ಸಂಸ್ಥೆಯೊಂದರಲ್ಲಿ (ಕಾರ್ಯಾಗಾರ) ಚಿತ್ರ ರಚನೆಯನ್ನು ಆಯೋಜಿಸಲಾಯಿತು. ವಿವಿಧ ವಿಭಾಗದಲ್ಲಿರುವ ಜನರು ಇದರಲ್ಲಿ ಭಾಗವಹಿಸಿದ್ದರು. ಮೊಘಲ ಚಕ್ರವರ್ತಿಯಾದ ಅಕ್ಬರನ ಕಾಲದಲ್ಲಿ ಚಿತ್ರಗಾರರಾದ ದಸ್‌ವಂತ್ 'ರಾಸ್‌ನಾಮ' ಎಂಬ ಹೆಸರಿನಲ್ಲಿ ಮಹಾಭಾರತದ ಕಥೆಯನ್ನು ಸಂಪೂರ್ಣವಾಗಿ ಚಿತ್ರರೂಪದಲ್ಲಿ ತಯಾರಿಸಿದರು. ಭಾರತೀಯ ವಿಷಯಗಳೂ ಭಾರತದ ಪ್ರಕೃತಿ ದೃಶ್ಯಗಳೂ ಕ್ರಮೇಣ ಚಿತ್ರಗಳಲ್ಲಿ ಆವಿಷ್ಕರಿಸಲ್ಪಟ್ಟವು.


ರಾಸ್‌ನಾಮದ ಚಿತ್ರಕಲೆ

ಪಕ್ಷಿಮೃಗಗಳ ಚಿತ್ರೀಕರಣದಲ್ಲೂ ಈ ಕಾಲದ ಚಿತ್ರಗಾರರು ಸಾಧನೆ ತೋರಿದ್ದರು. ಜಹಾಂಗೀರ್‌ನ ಆಡಳಿತದ ಕಾಲದಲ್ಲಿ ಚಿತ್ರಗಳ ಗುಣಮಟ್ಟ ಹೆಚ್ಚಾಯಿತು. ಬಿಷನ್‌ದಾಸ್, ಅಬೂಲ್ ಹಸನ್ ಎಂಬವರು ಆ ಕಾಲದ ಉತ್ತಮ ಚಿತ್ರಗಾರರಾಗಿದ್ದರು. ಕಲ್ಯಾಣ್‌ದಾಸ್ ಷಹಜಹಾನನ


ರಾಜಸ್ಥಾನದ - ಭಿತ್ತಿಚಿತ್ರ


ಚೋಳರ ಕಾಲದ - ಭಿತ್ತಿಚಿತ್ರ

ಕಾಲದಲ್ಲಿ ಜೀವಿಸಿದ್ದ ಚಿತ್ರಗಾರನಾಗಿದ್ದನು.

ಮಧ್ಯಕಾಲದಲ್ಲಿ ಚಿತ್ರಗಾರರ ಸಂಘಗಳು ಅಸ್ತಿತ್ವದಲ್ಲಿದ್ದುವು. ಇವರು ಗುಜರಾತ್, ಕಾಶ್ಮೀರ, ದಕ್ಷಿಣ ಮೊದಲಾದ ಭಾರತದ ವಿವಿಧ ಭಾಗಗಳಿಂದ ಬಂದವರಾಗಿದ್ದರು. ಆಯಾ ಸ್ಥಳಗಳಲ್ಲಿ ಪ್ರಾದೇಶಿಕ ಶೈಲಿಗಳು ಅವರ ಚಿತ್ರರಚನೆಯ ಮೇಲೆ ಪ್ರಭಾವ ಬೀರಿದವು. ಭಾರತೀಯ ಪುರಾಣಗಳಲ್ಲಿಯೂ ಕಥೆಯಲ್ಲಿಯೂ ಇರುವ ಸನ್ನಿವೇಶಗಳನ್ನು ಪರ್ಶಿಯನರು ಚಿತ್ರೀಕರಿಸಿದರು. ಆ ಕಾಲದ ಭಿತ್ತಿ ಚಿತ್ರಗಳು ಪ್ರಸಿದ್ಧವಾದವುಗಳು. ಚೋಳರ ಕಾಲದಲ್ಲಿ ತಂಜಾವೂರಿನ ಕ್ಷೇತ್ರಗಳ ಗೋಡೆಯ ಚಿತ್ರಗಳು ಮಧ್ಯಕಾಲ ಚಿತ್ರಕಲೆಯ ಪ್ರಧಾನ ವಿಶೇಷತೆಯಾಗಿದೆ. ರಾಜಸ್ಥಾನೀ ಶೈಲಿಯು ಈ ಕಾಲದಲ್ಲಿ ರೂಪುಗೊಂಡ ಒಂದು ಚಿತ್ರಕಲೆಯಾಗಿದೆ. ರಾಜಸ್ಥಾನ್ ಚಿತ್ರಕಲೆಯು ಪರಂಪರಾಗತ ಶೈಲಿ ಮತ್ತು ಮೊಘಲರ ರಾಜಸ್ಥಾನ ಶೈಲಿಗಳೂ ಸಮ್ಮಿಶ್ರಗೊಂಡುದಾಗಿದೆ.

> ಮಧ್ಯಕಾಲದಲ್ಲಿನ ಚಿತ್ರಕಲೆಯ ವಿಶೇಷತೆಗಳನ್ನು ವಿವರಿಸಿರಿ.

ಮಧ್ಯಕಾಲದ ಭಾರತದಲ್ಲಿ ರೂಪುಗೊಂಡ ಸಾಂಸ್ಕೃತಿಕ ಸಮನ್ವಯವು ತದನಂತರದ ಭಾರತದ ಇತಿಹಾಸದಲ್ಲಿ ಅತಿದೊಡ್ಡ ಬದಲಾವಣೆಗೆ ಕಾರಣವಾಯಿತು. ದಿನ್-ಇ-ಇಲಾಹಿ ಮತ್ತು ಸಿಖ್‌ಮತಗಳು ಸಮನ್ವಯದ ದೊಡ್ಡ ಮಾದರಿಯಾಗಿತ್ತು ದಿನ್-ಇ-ಇಲಾಹಿಯು ರಾಜನ ಪ್ರಭಾವಕ್ಕೆ ಒಳಪಟ್ಟಿದ್ದರೂ ಸಿಖ್‌ಮತವು ಜನರಿಂದ ರೂಪುಗೊಂಡುದಾಗಿದೆ. ಶಿಲ್ಪಕಲೆ, ಚಿತ್ರಕಲೆ, ಸಾಹಿತ್ಯ, ಸಂಗೀತ ಎಂಬೀ ಕ್ಷೇತ್ರಗಳಲ್ಲಿ ಆವಿಷ್ಕರಿಸಿದ ಹೊಸ ಶೈಲಿಗಳು ಭಾರತದ ಸಮ್ಮಿಶ್ರ ಸಂಸ್ಕೃತಿಗಳನ್ನು ಸಂಪನ್ನಗೊಳಿಸಿದುವು. ಭಾರತದ ವಿವಿಧ ಪ್ರದೇಶದಲ್ಲಿದ್ದವರು, ವಿಭಿನ್ನ ಧಾರ್ಮಿಕ ವಿಶ್ವಾಸಿಗಳು, ಸಂಸ್ಥೆಗಳು ಈ ಸಾಂಸ್ಕೃತಿಕ ಬೆಳವಣಿಗೆಗೆ ಅವರದ್ದೇ ಆದ ಕೊಡುಗೆಗಳನ್ನು ನೀಡಿದರು.

> ಮಧ್ಯಕಾಲ ಭಾರತದ ಸಾಂಸ್ಕೃತಿಕ ಜೀವನ ಎಂಬ ವಿಷಯದ ಕುರಿತು ಸೆಮಿನಾರ್ ತಯಾರಿಸಿರಿ. ಪರಿಗಣಿಸಬೇಕಾದ ಅಂಶಗಳು:
> - ಪ್ರಾದೇಶಿಕ ಭಾಷೆಗಳು
> - ಸಂಗೀತ
> - ಚಿತ್ರಕಲೆ ಮತ್ತು ಶಿಲ್ಪಕಲೆ

## ಸಮನ್ವಯ ಭಾರತ

- **ಸೂಫಿ ಚಳವಳಿ** → ಕ್ವಾಜಾ ಮೊಯಿನುದ್ದೀನ್ ಚಿಸ್ತಿ, ಶೇಕ್ ನಿಜಾಮುದ್ದೀನ್ ಔಲಿಯಾ
- **ಭಕ್ತಿ ಚಳವಳಿ** → ಆಳ್ವಾರರು ನಾಯನ್ಮಾರರು → ಕಬೀರ್‌ದಾಸ್ ಸೂರ್‌ದಾಸ್ ತುಳಸೀ ದಾಸ್ ಗುರುನಾನಕ್ ಮೀರಾಬಾಯಿ
- **ವೀರಶೈವ ಚಳವಳಿ** → ಬಸವಣ್ಣ
- **ಸಾಂಸ್ಕೃತಿಕ ಚಳವಳಿ** → ಪ್ರಾದೇಶಿಕ ಭಾಷೆಗಳ ಬೆಳವಣಿಗೆ → ಸಂಗೀತ → ಶಿಲ್ಪಕಲೆ ಮತ್ತು ಚಿತ್ರಕಲೆ

### ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಸೂಫಿ ಪಂಥದ ಪ್ರಾಧಾನ್ಯವನ್ನು ವಿಶದೀಕರಿಸುವುದು
- ಆರಂಭ ಕಾಲದ ಭಕ್ತಿಪಂಥದ ವಿಶೇಷತೆಗಳನ್ನು ವಿಶ್ಲೇಷಿಸುವುದು.
- ಉತ್ತರ ಭಾರತದಲ್ಲಿ ಭಕ್ತಿಪಂಥಕ್ಕೆ ನೇತೃತ್ವ ನೀಡಿದವರನ್ನು ಪಟ್ಟಿ ಮಾಡುವುದು.
- ಭಕ್ತಿ ಪ್ರಚಾರ ಮಾಡಿದ ಭಾರತೀಯ ರಾಜ್ಯಗಳನ್ನು ಭಾರತದ ಭೂಪಟದಲ್ಲಿ ಗುರುತಿಸುವುದು.
- ಭಕ್ತಿ ಸೂಫಿ ಪಂಥಗಳು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸೃಷ್ಟಿಸಿದ ಪ್ರಭಾವವನ್ನು ಅರ್ಥೈಸಿಕೊಳ್ಳುವುದು.
- ಮಧ್ಯಕಾಲದ ಪ್ರಾದೇಶಿಕ ಭಾಷೆಗಳ ಬೆಳವಣಿಗೆಯನ್ನು ವಿಶದೀಕರಿಸುವುದು.
- ಮಧ್ಯಕಾಲದ ಸಂಗೀತ ಹಾಗೂ ಚಿತ್ರಕಲೆಯ ವಿಶೇಷತೆಗಳನ್ನು ವಿಶ್ಲೇಷಿಸುವುದು.

### ಮೌಲ್ಯನಿರ್ಣಯ ಮಾಡುವ

- ಮಧ್ಯಕಾಲದ ಸೂಫಿ ಪಂಥದ ವಿಶೇಷತೆಗಳನ್ನು ವಿಶದೀಕರಿಸಿರಿ.
- ನಾಯನ್ಮಾರರೂ ಆಳ್ವಾರರೂ ಭಕ್ತಿ ಪಂಥಕ್ಕೆ ನೀಡಿದ ಕೊಡುಗೆಯನ್ನು ವಿಶ್ಲೇಷಿಸಿರಿ.

- 'ವೀರಶೈವ ಪಂಥವು ಅಭಿವೃದ್ಧಿಪರವಾದ ನೂತನ ಆಶಯಗಳಿಗೆ ರೂಪುನೀಡಿತು' ಮೇಲಿನ ಹೇಳಿಕೆಯನ್ನು ಸಮರ್ಥಿಸಿರಿ.
- ಕಬೀರ, ಗುರುನಾನಕ್ ಹಿಂದು-ಮುಸ್ಲಿಂ ಐಕ್ಯದ ಪ್ರತೀಕವಾಗಿದ್ದಾರೆ. ಸಮರ್ಥಿಸಿರಿ.
- ಮಧ್ಯಕಾಲದಲ್ಲಿ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಕಾರಣವಾದ ಸನ್ನಿವೇಶವನ್ನು ವಿಶದೀಕರಿಸಿರಿ.
- 'ಸಂಗೀತ ರತ್ನಾಕರ' ಎಂಬ ಕೃತಿಯನ್ನು ರಚಿಸಿದವರು ಯಾರು?

  ಎ. ಶಾರಂಗದೇವ ಬಿ. ತಾನ್‌ಸೇನ್

  ಸಿ. ಅಮೀರ್‌ಖುಸ್ರು ಡಿ. ರಾಜಾಮಾನ್‌ಸಿಂಗ್
- 'ಮಧ್ಯಕಾಲವು ಭಾರತೀಯ ಸಂಗೀತಕ್ಕೆ ಗಮನಾರ್ಹವಾದ ಬದಲಾವಣೆಯನ್ನು ತಂದ ಕಾಲವಾಗಿತ್ತು' ಈ ಹೇಳಿಕೆಯನ್ನು ಪರಿಶೀಲಿಸಿರಿ.
- ಮಧ್ಯಕಾಲದಲ್ಲಿ ಚಿತ್ರಕಲೆಯು ಪ್ರಗತಿ ಹೊಂದಿತ್ತು ಎಂದು ನೀವು ಒಪ್ಪುವಿರಾ? ಯಾಕೆ?
- ಹೊಂದಿಸಿ ಬರೆಯಿರಿ.

| ಎ | ಬಿ |
|---|---|
| ♦ ಚೈತನ್ಯ | ♦ ಕಾಶ್ಮೀರ |
| ♦ ತುಕಾರಾಮ | ♦ ಅಸ್ಸಾಂ |
| ♦ ಮೀರಾಬಾಯಿ | ♦ ಬಂಗಾಳ |
| ♦ ಶಂಕರದೇವಾ | ♦ ಕರ್ನಾಟಕ |
| ♦ ಬಸವಣ್ಣ | ♦ ರಾಜಸ್ಥಾನ |
| ♦ ಲಾಲ್‌ದೆದ್ | ♦ ಮಹಾರಾಷ್ಟ್ರ |



## ಮುಂದುವರಿದ ಚಟುವಟಿಕೆಗಳು

- ಕಬೀರ ಮತ್ತು ಗುರುನಾನಕರ ಗೀತೆಗಳನ್ನು ಸಂಗ್ರಹಿಸಿ ಇವುಗಳ ಸಾಮಾಜಿಕ ಪ್ರಾಧಾನ್ಯವನ್ನು ತರಗತಿಯಲ್ಲಿ ಚರ್ಚೆ ಮಾಡಿರಿ.
- 'ಮಧ್ಯಕಾಲದಲ್ಲಿ ಪ್ರಾದೇಶಿಕ ಭಾಷೆಗಳ ಬೆಳವಣಿಗೆ' ಎಂಬ ವಿಷಯದಲ್ಲಿ ಸೆಮಿನಾರ್ ತಯಾರಿಸಿರಿ.


ಅಧ್ಯಾಯ

06



# ಎಂಟನೇ ಶತಮಾನದಿಂದ ಹದಿನೆಂಟನೇ ಶತಮಾನದ ವರೆಗಿನ ಕೇರಳ

ಮಧ್ಯಕಾಲದ ಜಗತ್ತಿನ ಮತ್ತು ಭಾರತದ ಚರಿತ್ರೆಯ ಕುರಿತು ನಾವು ಈವರೆಗೆ ಚರ್ಚೆ ನಡೆಸಿದೆವು. ಸಿ.ಇ. 8ನೇ ಶತಮಾನದ ವರೆಗೆ ತಮಿಳಗಂನೊಂದಿಗೆ ಸೇರಿಕೊಂಡಿದ್ದ ಕೇರಳದ ಪ್ರಾಚೀನ ಚರಿತ್ರೆಯನ್ನು ಈ ಹಿಂದಿನ ತರಗತಿಗಳಲ್ಲಿ ಕಲಿತಿರುವುದನ್ನು ನೆನಪಿಸುವಿರಲ್ಲವೇ. ಸಿ.ಇ. 8ನೇ ಶತಮಾನದಿಂದ 18ನೇ ಶತಮಾನದವರೆಗಿನ ಕಾಲವನ್ನು ಕೇರಳದಲ್ಲಿ ಮಧ್ಯಕಾಲ ಎಂದು ಕರೆಯುತ್ತಾರೆ. ಈ ಕಾಲದಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕವಾದ ಬದಲಾವಣೆಗಳು ಉಂಟಾದುವು.



(ಸಿ.ಇ.849ರಲ್ಲಿ ರಚಿಸಲ್ಪಟ್ಟ ತರಿಸಾಪಳ್ಳಿ ಶಾಸನ)

> "ಸ್ವಸ್ತಿ ರಾಜ ಸ್ಥಾಣುರವಿ ಹಲವು ವರ್ಷ ಶತ್ರುಗಳನ್ನು ಎದುರಿಸಿ ಶರಣಾಗತರನ್ನಾಗಿಸಿ ಆಡಳಿತ ಮಾಡಬೇಕಾದ ವರ್ಷಗಳಲ್ಲಿ ಐದು ವರ್ಷ ನಷ್ಟವಾಯಿತು. ಈ ವರ್ಷದಲ್ಲಿ ವೇನಾಡನ್ನು ಆಳುವ ಅಯ್ಯ (ರಾಜ)....

ಸಿ.ಇ. 849ರಲ್ಲಿ ರಚಿತವಾದ ತರಿಸಾಪಳ್ಳಿ ಶಾಸನ ಮತ್ತು ಅದರ ಅನುವಾದದ ಭಾಗವನ್ನು ಮೇಲೆ ನೀಡಲಾಗಿದೆ.

ಮಧ್ಯಕಾಲದ ಕೇರಳದಲ್ಲಿ ಪ್ರಚಾರದಲ್ಲಿದ್ದ ಉರುಟು ಲಿಪಿಯಲ್ಲಿ ಈ ಬರಹವನ್ನು ಕೆತ್ತಲಾಗಿದೆ. ಪೆರುಮಾಳ್ ರಾಜನಾದ ಸ್ಥಾಣುರವಿಯ ಐದನೆಯ ಆಡಳಿತ ವರ್ಷದ ನೆನಪಿಗಾಗಿ ವೇನಾಡಿನ ನಾಡುವಾಳಿ (ದೇಶೀಯ ರಾಜ)ಯಾದ ಅಯ್ಯನಡಿಗಳ್ ತಿರುವಡಿಗಳ್ ಕೊಲ್ಲಂ ನಗರದ ತರಿಸಾಪಳ್ಳಿಗೆ ಭೂಮಿಯನ್ನು ದಾನವಾಗಿ ನೀಡಿದ ಮಾಹಿತಿಗಳನ್ನು ಇಲ್ಲಿ ದಾಖಲಿಸಲಾಗಿದೆ.

### ಉರುಟುಲಿಪಿ ಶಾಸನಗಳು



ಒಂಭತ್ತನೆಯ ಶತಮಾನದಿಂದ ಹದಿನಾಲ್ಕನೇ ಶತಮಾನದ ವರೆಗೆ ಕೇರಳದಲ್ಲಿ ಪ್ರಧಾನವಾಗಿ ಕಂಡುಬರುತ್ತಿದ್ದ ಲಿಪಿಯು ಉರುಟು ಲಿಪಿಯಾಗಿದೆ. ಈ ಲಿಪಿಯನ್ನು ಶಿಲೆ, ತಾಮ್ರದ ಫಲಕಗಳಲ್ಲಿ ಬರೆಯುತ್ತಿದ್ದರು. ಈ ಲಿಪಿಯು ತಮಿಳ್ನಾಡಿನಲ್ಲಿಯೂ ಪ್ರಚಾರದಲ್ಲಿತ್ತು.

ಉರುಟು ಲಿಪಿಯಿಂದ ಕೇರಳದ ನಾಡುಗಳ ಕುರಿತಾದ ಪ್ರಧಾನ ವಿವರಗಳು ಲಭಿಸುತ್ತದೆ. ನಾವು ಈ ಹಿಂದಿನ ತರಗತಿಗಳಲ್ಲಿ ಕಲಿತ ತಮಿಳಗಂನ ಕಾಲದಲ್ಲಿ ನಾಡುಗಳು ಬೆಳೆದು ಬಂದುವು. ಜನರು ಕೃಷಿ ಮಾಡಿ ವಾಸಮಾಡುತ್ತಿದ್ದ ಪ್ರದೇಶಗಳು ನಾಡುಗಳಾಗಿದ್ದುವು. ಅನೇಕ ಒಕ್ಕಲುಗಳು ಹಾಗೂ ಊರ್‌ಗಳು ಸೇರಿಕೊಂಡು ನಾಡುಗಳು ರೂಪುಗೊಂಡಿದ್ದುವು. ಕೆಳಗೆ ನೀಡಿರುವ ಪಟ್ಟಿಯನ್ನು ಗಮನಿಸಿರಿ.

| | |
|---|---|
| **ಒಕ್ಕಲು** | ಕೃಷಿ ಮಾಡಿ ಜೀವಿಸುತ್ತಿದ್ದ ಕೆಲಸಗಾರರ ಕುಟುಂಬಗಳು ಒಕ್ಕಲುಗಳಾಗಿದ್ದುವು. ಕುಡಿ (ಒಕ್ಕಲು) ಪತಿಯು ಒಕ್ಕಲುಗಳ ಮುಖ್ಯಸ್ಥನಾಗಿದ್ದನು. |
| **ಊರ್** | ಅನೇಕ ಒಕ್ಕಲುಗಳು ಸೇರಿ ಒಂದು ಊರ್ ರೂಪುಗೊಳ್ಳುತ್ತದೆ. ಊರಾಳರು ಇದರ ಮುಖ್ಯಸ್ಥರಾಗಿದ್ದರು. |
| **ನಾಡ್** | ಅನೇಕ ಊರ್‌ಗಳು ಸೇರಿ ಒಂದು ನಾಡ್ ಎಂದು ಕರೆಯಲ್ಪಡುತ್ತದೆ. ನಾಡ್‌ಗಳ ಮೇಲೆ ಅಧಿಕಾರವಿದ್ದವರು ನಾಡುವಾಳಿಗಳಾಗಿದ್ದರು. |

### ಮಹೋದಯಪುರದ ಪೆರುಮಾಳರು (ಸಿ.ಇ. 800-1122)

- ರಾಜಶೇಖರನ್
- ಸ್ಥಾಣುರವಿ
- ಕೋತ ರವಿ
- ಕೋತ ಕೋತ ಕೇರಳ ಕೇಸರಿ
- ಇಂದು ಕೋತ
- ಭಾಸ್ಕರ ರವಿ
- ರವಿ ಕೋತ
- ಆದಿತ್ಯನ್ ಕೋತ
- ರಾಮ ಕುಲಶೇಖರನ್


ಈ ಎಲ್ಲ ನಾಡುಗಳು ಮಹೋದಯಪುರವನ್ನು (ಈಗಿನ ಕೊಡುಂಗಲ್ಲೂರ್) ರಾಜಧಾನಿಯನ್ನಾಗಿ ಮಾಡಿಕೊಂಡು ಕೇರಳವನ್ನು ಆಳುತ್ತಿದ್ದ ಪೆರುಮಾಳರಿಗೆ ಸೇರಿತ್ತು. ಉತ್ತರದ ಕೋಲತ್ ನಾಡಿನಿಂದ ದಕ್ಷಿಣದ ವೇನಾಡಿನವರೆಗಿರುವ ಹದಿನಾಲ್ಕು ನಾಡುಗಳು ಪೆರುಮಾಳರ ಆಡಳಿತವನ್ನು ಅಂಗೀಕರಿಸಿದ್ದುವು. ಕೇರಳದಲ್ಲಿ ಮೊದಲ ಬಾರಿಗೆ ಕೇಂದ್ರಾಡಳಿತ ವಿಧಾನವು ಆರಂಭಗೊಂಡುದು ಈ ಕಾಲದಲ್ಲಾಗಿದೆ. ರಾಜಶೇಖರನಿಂದ ಹಿಡಿದು ರಾಮಕುಲಶೇಖರರ ವರೆಗಿನ ರಾಜರು ಸಿ.ಇ. 800ರಿಂದ 1122ರವರೆಗೆ ಮಹೋದಯಪುರವನ್ನು ಕೇಂದ್ರವನ್ನಾಗಿಸಿ ಆಡಳಿತ ನಡೆಸಿದರು. ಪೆರುಮಾಳ್ ಆಡಳಿತಕಾಲದ ವಿಶೇಷತೆಗಳೇನೆಂದು ನೋಡುವ.

- ಪೆರುಮಾಳರಿಗೆ ಕೊಯಿಲಾಧಿಕಾರಿಗಳು ಎಂಬ ಪ್ರತಿನಿಧಿಗಳಿದ್ದರು.

- ನಾಲುತಳಿ ಎಂಬ ಬ್ರಾಹ್ಮಣ ಸಮಿತಿಯು ಪೆರುಮಾಳ್ ಆಡಳಿತಕ್ಕೆ ಸಹಾಯಮಾಡುತ್ತಿತ್ತು.
- ಆಯಿರಂ ಎಂಬ ಸೈನಿಕ ಕೂಟವೊಂದು ಅಸ್ತಿತ್ವದಲ್ಲಿತ್ತು.
- ನಾಡುಗಳು, ನಗರಗಳು, ಬ್ರಾಹ್ಮಣ ಗ್ರಾಮಗಳು, ಕ್ಷೇತ್ರಗಳು ಮುಂತಾದೆಡೆಗಳಿಂದ ಪೆರುಮಾಳರು ತೆರಿಗೆ ಪಡೆಯುತ್ತಿದ್ದರು.

ಭೂಪಟವನ್ನು ನಿರೀಕ್ಷಣೆ ಮಾಡಿ ಮಧ್ಯಕಾಲದ ಕೇರಳದಲ್ಲಿ ನೆಲೆನಿಂತಿದ್ದ ನಾಡುಗಳನ್ನು ಪಟ್ಟಿಮಾಡಿರಿ.

ಮಧ್ಯಕಾಲ ಕೇರಳದ ನಾಡುಗಳು




ಪೆರುಮಾಳ್ ಕಾಲದ ಆಡಳಿತವು ಕೇಂದ್ರೀಕೃತ ಆಡಳಿತವಾಗಿತ್ತೇ? ಚರ್ಚಿಸಿರಿ.

## ಸ್ವರೂಪಗಳು

ಸಿ.ಇ.ಹನ್ನೆರಡನೇ ಶತಮಾನದಲ್ಲಿ ಪೆರುಮಾಳ್‌ಗಳ ಕೇಂದ್ರೀಕೃತ ಆಡಳಿತವು ಕೊನೆಗೊಂಡಿತು. ನಾಡುಗಳು ಸ್ವತಂತ್ರ ಆಡಳಿತವಿರುವ ಪ್ರದೇಶಗಳಾದುವು. ನಾಡುಗಳಲ್ಲಿ ಬೆಳೆದುಬಂದ ಅಧಿಕಾರ ಸ್ಥಾನಗಳು ನಾಡುವಾಳಿ ಸ್ವರೂಪಗಳು ಎಂದು ಕರೆಯಲ್ಪಟ್ಟವು. ಪ್ರಧಾನ ನಾಡುವಾಳಿ ಸ್ವರೂಪಗಳನ್ನು ಕೆಳಗೆ ನೀಡಲಾಗಿದೆ.

| |
|---|
| ಕೋಲಸ್ವರೂಪ (ಕೋಲತ್ತುನಾಡ್) |
| ನೆಡಿಯಿರಪ್ಪು ಸ್ವರೂಪ (ಏರನಾಡ್) |
| ಪೆರಂಬಡುಪ್ಪು ಸ್ವರೂಪ (ಕೊಚ್ಚಿ) |
| ತೃಪ್ಪಾಪ್ಪುರ ಸ್ವರೂಪ (ವೇನಾಡ್) |

ಅಳಿಯಕಟ್ಟು ಸಂಪ್ರದಾಯವು ಅಸ್ತಿತ್ವದಲ್ಲಿದ್ದು ಸ್ವಯಂ ಆಡಳಿತವಿರುವ ತರವಾಡುಗಳೇ ಸ್ವರೂಪಗಳಾಗಿದ್ದುವು. ಸ್ವರೂಪಗಳಿಗೆ ತಮ್ಮದೇ ಆದ ಸೈನಿಕ ಒಕ್ಕೂಟಗಳೂ (ಸೈನ್ಯ) ಇದ್ದುವು. ವೇನಾಡಿನ ಅರಿಶಿಪ್ಪಡಿಜನಂ, ಕೋಲತ್ತು ನಾಡಿನಲ್ಲಿ ಪಡುಮಲ ನಾಯನ್‌ಮಾರ್, ನೆಡಿಯಿರಪ್ಪಿನಲ್ಲಿ ಲೋಕರ್ ಮುಂತಾದುವುಗಳು ಈ ರೀತಿಯ ಸೈನಿಕ ಒಕ್ಕೂಟಗಳಾಗಿದ್ದವು.



### ಮಾರ್ತಾಂಡವರ್ಮ

18ನೇ ಶತಮಾನದಲ್ಲಿ ಮಾರ್ತಾಂಡವರ್ಮನ ಆಡಳಿತ ಕಾಲದಲ್ಲಿ ತಿರುವಾಂಕೂರು ಪ್ರಬಲವಾದ ದೇಶೀಯ ರಾಜ್ಯವಾಯಿತು.



### ಶಕ್ತನ್ ತಂಬುರಾನ್

18ನೇ ಶತಮಾನದಲ್ಲಿ ಶಕ್ತನ್ ತಂಬುರಾನ್‌ನ ಆಡಳಿತ ಕಾಲದಲ್ಲಿ ಕೊಚ್ಚಿಯು ಪ್ರಬಲವಾದ ದೇಶೀಯ ರಾಜ್ಯವಾಯಿತು. ಇವನ ಕಾಲದಲ್ಲಿ ತ್ರಿಶೂರ್‌ಪೂರಂ ಆರಂಭಿಸಲಾಯಿತು.



### ಮೈಸೂರಿನ ಸುಲ್ತಾನರು

ಹೈದರಾಲಿ ಮತ್ತು ಅವನ ಮಗನಾದ ಟಿಪ್ಪು ಸುಲ್ತಾನ್ ಕೇರಳವನ್ನು ಆಕ್ರಮಿಸಿದ ಮೈಸೂರಿನ ಆಡಳಿತಾಧಿಕಾರಿಗಳಾಗಿದ್ದರು. 1792ರ ವರೆಗೆ ಮಲಬಾರ್ ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿತ್ತು.

ಪ್ರತಿಯೊಂದು ನಾಡುವಾಳಿ ಸ್ವರೂಪಗಳೂ ತಮ್ಮ ಅಧಿಕಾರವನ್ನು ವ್ಯಾಪಿಸುವ ಉದ್ದೇಶದಿಂದ ಪರಸ್ಪರ ಕಲಹಗಳಲ್ಲಿ ಏರ್ಪಡುವುದು ಮತ್ತು ಸಾಮಾನ್ಯ ಶತ್ರುಗಳ ವಿರುದ್ಧವಾಗಿ ಪರಸ್ಪರ ಸಹಕಾರದಿಂದಿರುವುದು ಸಾಮಾನ್ಯವಾಗಿತ್ತು. ಹದಿನೈದನೇ ಶತಮಾನದ ಕೊನೆಯಲ್ಲಿ ಕೇರಳಕ್ಕೆ ವ್ಯಾಪಾರಕ್ಕಾಗಿ ಬಂದ ಪೋರ್ಚುಗೀಸರು ಮತ್ತು ಡಚ್ಚರು ತಮ್ಮ ವ್ಯಾಪಾರ ಆಸಕ್ತಿಗೆ ಅನುಗುಣವಾಗಿ ನಾಡುವಾಳಿಗಳ ಸ್ಪರ್ಧೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಹದಿನೆಂಟನೆಯ ಶತಮಾನದ ವರೆಗೆ ನಾಡುವಾಳಿ ಸ್ವರೂಪಗಳು ವಿಶೇಷ ಬದಲಾವಣೆಯಿಲ್ಲದೆ ಅಸ್ತಿತ್ವದಲ್ಲಿದ್ದುವು. ಆದರೆ ಹದಿನೆಂಟನೇ ಶತಮಾನದ ಕೊನೆಯ ಭಾಗದಲ್ಲಿ ಮೈಸೂರಿನ ಸುಲ್ತಾನರಾದ ಹೈದರಾಲಿ ಮತ್ತು ಟಿಪ್ಪು ಸುಲ್ತಾನನು ಕೇರಳಕ್ಕೆ ಮಾಡಿದ ದಂಡಯಾತ್ರೆಯು ಉತ್ತರ ಕೇರಳದ ನಾಡುವಾಳಿಗಳನ್ನು ಭಯಭೀತರನ್ನಾಗಿಸಿತು. ನೆಡಿಯಿರಪ್ಪು, ಕೋಲಸ್ವರೂಪ, ಇತರ ಸಣ್ಣ ಸ್ವರೂಪಗಳು, ನಾಡುಗಳೆಲ್ಲವೂ ಮೈಸೂರು ಸುಲ್ತಾನರ ಆಳ್ವಿಕೆಗೆ ಒಳಪಟ್ಟವು. ಮೈಸೂರು ಸುಲ್ತಾನರ ಆಕ್ರಮಣದ ಭಯದಿಂದ ಉಳಿದ ನಾಡುವಾಳಿಗಳು, ದೇಶೀಯ ವಾಳಿಗಳು ವೇನಾಡಿಗೆ ಪಲಾಯನ ಮಾಡಿದರು. ಕೊಚ್ಚಿಯ ಪೆರುಂಬಡಪ್ ಸ್ವರೂಪವು ಮೈಸೂರಿನ ಸುಲ್ತಾನರ ಪರಮಾಧಿಕಾರವನ್ನು ಅಂಗೀಕರಿಸಿತು. ತಿರುವಾಂಕೂರು ಮೈಸೂರು ಸುಲ್ತಾನರ ಆಡಳಿತವನ್ನು ಪ್ರತಿಭಟಿಸಿತು.

ಕೇರಳವು ತಿರುವಾಂಕೂರು, ಕೊಚ್ಚಿ ಮತ್ತು ಮಲಬಾರು ಎಂಬ ಮೂರು ವಲಯಗಳಾಗಿ ಆ ಕಾಲದಲ್ಲಿ ವಿಭಜನೆಗೊಂಡಿತು. 18ನೆಯ ಶತಮಾನದ ಕೊನೆಯಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯು ಟಿಪ್ಪು ಸುಲ್ತಾನನನ್ನು ಪರಾಜಯಗೊಳಿಸಿತು. ಅದರೊಂದಿಗೆ ಟಿಪ್ಪುವಿನ ನಿಯಂತ್ರಣದಲ್ಲಿದ್ದ ಮಲಬಾರು ಪೂರ್ಣವಾಗಿ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು. ಸ್ವಯಂ ಆಡಳಿತಗಾರರು ಎಂಬ ನೆಲೆಯಲ್ಲಿದ್ದ ನಾಡುವಾಳಿ ಸ್ವರೂಪಗಳ ಅಧಿಕಾರವು ಇದರೊಂದಿಗೆ ಮಲಬಾರಿನಲ್ಲಿ ಕೊನೆಗೊಂಡಿತು. ತಿರುವಾಂಕೂರು ಮತ್ತು ಕೊಚ್ಚಿ ನಾಡುವಾಳಿ ರಾಜ್ಯಗಳಾಗಿ ಮುಂದುವರಿದುವು.

8ರಿಂದ 18ನೆಯ ಶತಮಾನದ ವರೆಗಿನ ಕೇರಳದ ರಾಜಕೀಯ ಚರಿತ್ರೆಯನ್ನು ವಿಶ್ಲೇಷಿಸಿರಿ.



## ಭೂಮಿಯ ಒಡೆತನದ ಹಕ್ಕುಗಳು

18ನೇ ಶತಮಾನದ ವರೆಗಿನ ಕೇರಳದ ರಾಷ್ಟ್ರೀಯ ಚರಿತ್ರೆಯನ್ನು ನಾವು ಇಲ್ಲಿಯವರೆಗೆ ಚರ್ಚಿಸಿದೆವು. ಇನ್ನು ಆ ಕಾಲದ ಭೂಮಿಯ ಒಡೆತನದ ಹಕ್ಕುಗಳ ಕುರಿತಾಗಿ ಪರಿಶೋಧಿಸುವ. ಮಧ್ಯಕಾಲದಲ್ಲಿ ಭೂಮಿಯ ಒಡೆತನದ ಆಧಾರದಲ್ಲಿ ಭೂಮಿಯನ್ನು ಹಲವು ರೀತಿಯಲ್ಲಿ ವಿಂಗಡಿಸಲಾಗಿತ್ತು.

| | |
|---|---|
| ಚೇರಿಗಳ್ | ನಾಡುವಾಳಿಗಳ ನಿಯಂತ್ರಣದಲ್ಲಿರುವ ಭೂಮಿ |
| ಬ್ರಹ್ಮಸ್ವಂ | ಬ್ರಾಹ್ಮಣರ ನಿಯಂತ್ರಣದಲ್ಲಿರುವ ಭೂಮಿ |
| ದೇವಸ್ವಂ | ದೇವಾಲಯಗಳ ನಿಯಂತ್ರಣದಲ್ಲಿರುವ ಭೂಮಿ |

**ತಿರುನೆಲ್ಲಿ ಶಾಸನ**



"............ತಿರುನೆಲ್ಲಿ ದೇವರಿಗೆ ನಿತ್ಯವೂ ಹನ್ನೆರಡು ಹಾನೆ ಅಕ್ಕಿಯನ್ನು ಮೂರು ಹೊತ್ತುಗಳಲ್ಲಾಗಿ ಆರು ಸಲದ ನೈವೇದ್ಯ ಮತ್ತು ಒಂದು ನಂದಾದೀಪವನ್ನು ಅರ್ಪಿಸುವುದಕ್ಕಾಗಿ ಕೀಲ್‌ಕೋಟೆಯಲ್ಲಿರುವ ಪೋಳಚೇರಿಯ ಭೂಮಿಯನ್ನು ಆಳಲು ಕುಞಕುಟ್ಟವರ್ಮನೆಂಬ ಒಡೆಯರು ಆಗಮಿಸಿದರು..... (ಭೂಮಿಯ ಒಡೆತನದ ಹಕ್ಕನ್ನು ತಿಳಿಸುವ ತಿರುನೆಲ್ಲಿ ಶಾಸನದ ಅನುವಾದ)

ದೇವಸ್ವಂ ಭೂಮಿಯ ಹಕ್ಕುದಾರರು ಊರಾಳರಾಗಿದ್ದರು. ರಾಜರು, ಬ್ರಾಹ್ಮಣರು ಅಥವಾ ಕ್ಷೇತ್ರದ ಜನರು ನೇರವಾಗಿ ಈ ಭೂಮಿಯಲ್ಲಿ ಕೃಷಿ ಮಾಡುತ್ತಿರಲಿಲ್ಲ. ಊರಾಳರು ಕೃಷಿಭೂಮಿಯನ್ನು ಮಧ್ಯವರ್ತಿಗಳಿಗೆ ಕೃಷಿ ಮಾಡಲು ನೀಡಿದರು. ಇವರನ್ನು ಕಾರಾಳರೆಂದು ಕರೆಯುತ್ತಿದ್ದರು. ಈ ರೀತಿಯಲ್ಲಿ ನಾಡುವಾಳಿಗಳು, ಊರಾಳರು, ಅವರಿಗಿಂತ ಕೆಳಗೆ ಕಾರಾಳರು ಎಂಬ ಶ್ರೇಣೀಕೃತ ಅಧಿಕಾರ ವ್ಯವಸ್ಥೆ ರೂಪುಗೊಂಡಿತು.

ಹೀಗೆ 12ನೆಯ ಶತಮಾನದಿಂದ 18ನೆಯ ಶತಮಾನದ ವರೆಗಿನ ಕಾಲದಲ್ಲಿ ಭೂಮಿಯ ಒಡೆತನದ ಹಕ್ಕಿಗೆ ಸಂಬಂಧಿಸಿ ಹಲವು ಬದಲಾವಣೆಗಳು ಉಂಟಾದುವು.

- ಭೂಮಿಯ ಮೇಲಿನ ಒಡೆತನವು ವಂಶಪಾರಂಪರ್ಯವಾಗಿ ಮುಂದುವರಿಯಿತು. ಈ ರೀತಿ ಬಂದ ಭೂಮಿಯನ್ನು ಪರಂಪರಾಗತ ಭೂಮಿಯೆಂದೂ ಅದರ ಒಡೆತನದಹಕ್ಕು ಇರುವವನನ್ನು 'ಜಮೀನ್ದಾರ' ಎಂದೂ ಕರೆದರು.

- 'ವೆರುಂಪಾಟ್ಟಂ' ಎಂಬ ಸಂಪ್ರದಾಯವು ಈ ಕಾಲದಲ್ಲಿ ಕೇರಳದಲ್ಲಿ ಪ್ರಚಾರದಲ್ಲಿತ್ತು. ಉತ್ಪಾದನೆಯ ನಿಶ್ಚಿತ ಪ್ರಮಾಣವನ್ನು ಗೇಣಿಯ ರೂಪದಲ್ಲಿ ಜಮೀನ್ದಾರನಿಗೆ ನೀಡಬೇಕಿತ್ತು. ಈ ರೀತಿಯಲ್ಲಿ ಜಮೀನ್ದಾರರು ಒಕ್ಕಲುಗಳಿಗೆ ನೀಡಿದ ಭೂಮಿಯನ್ನು 'ವೆರುಂಪಾಟ್ಟಂ' ಭೂಮಿಯೆಂದು ಕರೆಯುತ್ತಿದ್ದರು.

> "ಆಸ್ತಿ ಮಾರಿಯಾದರೂ ಓಣಂ ಉಣ್ಣಬೇಕು.
>
> ಆಸ್ತಿ ಮಾರಿದರೂ ಮಾನ ಕಳೆದುಕೊಳ್ಳಬಾರದು.
>
> ಆಸ್ತಿ ಮಾರಿದರೂ ಹಾದಿ (ಹುಣಿ) ಮಾರಬಾರದು.

ಈ ನಾಣ್ಣುಡಿಗಳನ್ನು ಕೇಳಿರಬಹುದಲ್ಲವೇ. ಓಣಂ, ಮಾನ (ಸ್ವಾಭಿಮಾನ), ಹಾದಿ ಮುಂತಾದುವು ಏನೆಂದು ಎಲ್ಲರಿಗೂ ತಿಳಿದಿದೆಯಲ್ಲವೇ. ಮೂಲಗೇಣಿಯ ಆಸ್ತಿ ಎಂದರೇನು? ಅದನ್ನು ಮಾರಲು ಸಾಧ್ಯವಿತ್ತೇ?

ಆಸ್ತಿ (ಕಾಣಂ), ಅಡಮಾನ (ಬಿಟ್ಟಿ) ಮುಂತಾದ ಹೆಸರುಗಳಿಂದ ಕರೆಯಲ್ಪಟ್ಟ ಗೇಣಿ ವ್ಯವಸ್ಥೆಯು ಪೆರುಮಾಳರ ಕಾಲದ ನಂತರ ಹೆಚ್ಚು ಪ್ರಚಾರಕ್ಕೆ ಬಂತು. ಇದರಂತೆ ಭೂಮಿಯನ್ನು ಗೇಣಿಗೆ ಪಡೆಯುವ ವ್ಯಕ್ತಿಯು (ಒಕ್ಕಲುದಾರ) ನಿಶ್ಚಿತ ಮೊತ್ತವೊಂದನ್ನು ಭೂಮಿಯ ಯಾಜಮಾನನಿಗೆ ಭದ್ರತೆಯಾಗಿ ನೀಡಿ ಆ ಭೂಮಿಯನ್ನು ಗೇಣಿಗೆ ಪಡೆದು ಕೃಷಿ ಮಾಡುತ್ತಾನೆ. ಈ ಕೃಷಿ ಭೂಮಿಯನ್ನು ಮಾರಾಟ ಮಾಡುವ ಅಥವಾ ಪರಾಭಾರೆ ಮಾಡುವ ಹಕ್ಕು ಒಕ್ಕಲುದಾರನಿಗಿರಲಿಲ್ಲ. ಅವನಿಗೆ ಕೃಷಿ ಮಾಡುವ ಹಕ್ಕು ಮಾತ್ರವಿತ್ತು.

'ಕುಯಿಕ್ಕಾಣಂ' ಆ ಕಾಲದಲ್ಲಿ ಜ್ಯಾರಿಯಲ್ಲಿದ್ದ ಒಂದು ವಿಧದ ತೆರಿಗೆ ವಿನಾಯಿತಿಯಾಗಿತ್ತು. ಇದರಂತೆ ಫಲ ನೀಡದ ಫಲವೃಕ್ಷಾದಿಗಳನ್ನು ಗೇಣಿಯಿಂದ ಹೊರತುಪಡಿಸುತ್ತಿದ್ದರು.



ಹದಿನೆಂಟನೆಯ ಶತಮಾನದ ವರೆಗೆ ಕೇರಳದಲ್ಲಿ ರೂಪುಗೊಂಡ ಭೂಮಿಯ ಹಕ್ಕಿನ ಸಂಪ್ರದಾಯಗಳನ್ನು ಪಟ್ಟಿ ಮಾಡಿರಿ.

- ಚೇರಿಗಳು
-
-
-
-
-

ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಭೂಮಿಯನ್ನು ಅಳೆದು ವಿಂಗಡಿಸಿದರು. ಆ ಕಾಲದಲ್ಲಿ ಮಲಬಾರು ಪ್ರದೇಶವು ಮೈಸೂರು ಸುಲ್ತಾನರ ಅಧೀನದಲ್ಲಿತ್ತು. ಕೃಷಿ ಭೂಮಿಯ ಒಟ್ಟು ಉತ್ಪಾದನೆಯನ್ನು ಗಣನೆಗೆ ತೆಗೆದುಕೊಂಡು ಅದರ ನಿಶ್ಚಿತ ಭಾಗವನ್ನು ತೆರಿಗೆಯಾಗಿ ತೆಗೆದುಕೊಳ್ಳುವ ವಿಧಾನವನ್ನು ಮೈಸೂರು ಸುಲ್ತಾನರು ಜಾರಿಗೊಳಿಸಿದರು. ಅನಂತರ ಆಗಮಿಸಿದ ಬ್ರಿಟಿಷರು ಸರ್ವೇ ಮಾಡಿ ಪ್ರತಿಯೊಂದು ಭೂಭಾಗವನ್ನು ಎಕ್ರೆ, ಸೆಂಟುಗಳೆಂದು ವಿಂಗಡಿಸಿ ಸರ್ವೆ ನಂಬರನ್ನು ನೀಡಿದರು. ಕೊಚ್ಚಿ ಮತ್ತು ತಿರುವಾಂಕೂರಿನಲ್ಲಿಯೂ ಭೂಸರ್ವೆಗಳು ನಡೆದುವು. ಇದನ್ನು ಕೊಚ್ಚಿಯಲ್ಲಿ 'ಕೆಟೆಳುತ್ತ್' ಎಂದೂ ತಿರುವಾಂಕೂರಿನಲ್ಲಿ 'ಕಂಡೆಳುತ್ತ್' ಎಂದೂ ಕರೆದರು. ಈ ರೀತಿಯಲ್ಲಿ ವಿಂಗಡಿಸಿದ ಭೂಮಿಗೆ ನಿಶ್ಚಿತ ತೆರಿಗೆಯನ್ನು ವಿಧಿಸಿದರು.



ಭೂಮಿಯ ಆಧಾರ (ಹಕ್ಕುಪತ್ರ) ವೊಂದನ್ನು ವೀಕ್ಷಿಸಿ ಅದರಲ್ಲಿ ಚೇರಿಗಳ್, ಭಂಡಾರಭೂಮಿ, ಪಿತ್ರಾರ್ಜಿತ, ಬ್ರಹ್ಮಸ್ವಂ, ಮೂಲಗೇಣಿಯ ಆಸ್ತಿ, ಅಡಮಾನ, ಕುಳಿಕ್ಕಾಣಂ ಮುಂತಾದ ಯಾವುದಾದರೂ ಸೂಚನೆಗಳಿವೆಯೇ? ಎಂದು ಕಂಡುಕೊಳ್ಳಿರಿ.

## ಕೃಷಿ ಮತ್ತು ಉದ್ಯೋಗ ಒಕ್ಕೂಟಗಳು

ಮಧ್ಯಕಾಲದಲ್ಲಿ ಪ್ರಚಾರದಲ್ಲಿದ್ದ ಭತ್ತದ ಬೀಜಗಳ ಕುರಿತು ಅಜ್ಜಿಯೊಬ್ಬರು ನೀಡಿದ ವಿವರಣೆಯನ್ನು ಗಮನಿಸಿರಿ.

> "ತವಳಕಣ್ಣನ್, ಆರ್ಯಂಕಾಳಿ, ಒಟ್ಟೆಲಮುಟನ್, ಕೋಯಿವಾಲನ್ ಎಂಬೀ ಬೀಜಗಳನ್ನು ಬಿತ್ತುವ ಎರಡು ಬೆಳೆಗಳು (ಕನ್ಯಾ/ಮಕರ) ಬಯಲಿನಲ್ಲಿಯೂ ಮೂರು ತಿಂಗಳಿನ ಬೆಳವಣಿಗೆಯಿರುವ ಏಚ್ಚಿಲಾಟನ್, ಕರುತ್ರೇಟಕ್ಕನ್, ಚೋಮಾಲ, ಪೆರ್ಯವಿತ್ತ್ (ಪೆರಿಯವಿತ್ತ್), ನಕರ ಮೊದಲಾದ ಬೀಜಗಳನ್ನು ಬಿತ್ತುವ ಒಂದು ಬೆಳೆಯನ್ನು ಹಿತ್ತಿಲಿನಲ್ಲಿಯೂ ಕೆಯಾಳ, ವೆಳುತ್ತಕೊಯ್ಯಾಳ, ಕರುತ್ತಕೊಯ್ಯಾಳ, ಕರ್ವಾಲ, ವಿಲ್ಲನ್, ಎರಯನ್, ಕವುಂಜಂಪುತ್ತಾಳ ಮೊದಲಾದ ಬೀಜಗಳನ್ನು ಬಿತ್ತುವ ಒಂದು ಬೆಳೆಯನ್ನು ಬೆಟ್ಟದಲ್ಲಿಯೂ ಕೃಷಿಮಾಡುತ್ತಿದ್ದರು.

ಇದೇ ರೀತಿಯಲ್ಲಿ ನಿಮ್ಮ ಊರಿನಲ್ಲಿ ಕೃಷಿ ಮಾಡುವ ಕೃಷಿ ಬೀಜಗಳ ಕುರಿತು ಅನ್ವೇಷಣೆ ಮಾಡುತ್ತೀರಲ್ಲವೇ.

ಆ ಕಾಲದಲ್ಲಿ ಬಯಲು, ಹಿತ್ತಿಲು, ವಸತಿಪ್ರದೇಶಗಳು, ಬೆಟ್ಟಪ್ರದೇಶಗಳು ಮುಂತಾದೆಡೆಗಳಲ್ಲಿ ಕೃಷಿ ಮಾಡುತ್ತಿದ್ದರು. ಬಯಲು ಪ್ರದೇಶಗಳಲ್ಲಿ ಪ್ರಧಾನವಾಗಿ ಭತ್ತವನ್ನು ಕೃಷಿ ಮಾಡುತ್ತಿದ್ದರು. ಹಿತ್ತಿಲುಗಳಲ್ಲಿ ಭತ್ತ, ಹುರುಳಿ, ಸಾಮೆ, ಗೆಡ್ಡೆಗೆಣಸುಗಳನ್ನು ಕೃಷಿ ಮಾಡುತ್ತಿದ್ದರು. ತೆಂಗು, ಅಡಿಕೆ, ಕರಿಮೆಣಸು, ಶುಂಠಿ, ಅರಸಿನ, ಧಾನ್ಯ ಗೆಡ್ಡೆಗೆಣಸು ಇತ್ಯಾದಿಗಳನ್ನು ವಸತಿ ಪ್ರದೇಶಗಳಲ್ಲಿ ಬೆಳೆಸುತ್ತಿದ್ದರು. ಬೆಟ್ಟ ಪ್ರದೇಶಗಳಲ್ಲಿ ಮಲೆಭತ್ತವನ್ನು ಬೆಳೆಸುತ್ತಿದ್ದರು. ಆ ಕಾಲದಲ್ಲಿ ಕಾಡುತ್ಪನ್ನಗಳನ್ನು ಬೆಟ್ಟಪ್ರದೇಶಗಳಿಂದ ಸಂಗ್ರಹಿಸುತ್ತಿದ್ದರು. ಅಂದಿನ ಕೃಷಿಯು ಮುಂಗಾರು ಮತ್ತು ಹಿಂಗಾರು ಮಳೆಯನ್ನು ಆಶ್ರಯಿಸಿತ್ತು. ಸೆಗಣಿ ಮತ್ತು ಸೊಪ್ಪನ್ನು ಒಳಗೊಂಡ ಜೈವಿಕ ಗೊಬ್ಬರವನ್ನು ಆ ಕಾಲದಲ್ಲಿ ಕೃಷಿಗೆ ಉಪಯೋಗಿಸುತ್ತಿದ್ದರು.

ಮಧ್ಯಕಾಲದಲ್ಲಿ ವಿಭಿನ್ನ ಕಸುಬುಗಳಲ್ಲಿ ತೊಡಗಿಸಿಕೊಂಡ ಜನರು ನಂತರ ಒಂದೊಂದು ಜಾತಿಗಳಾಗಿ ವಿಂಗಡಿಸಲ್ಪಟ್ಟರು.

ಯಾವೆಲ್ಲ ಕಾರ್ಮಿಕ ಕೂಟಗಳು ಮಧ್ಯಕಾಲದಲ್ಲಿದ್ದುವು ಎಂದು ನೋಡೋಣ.

- ಕೃಷಿ ಮತ್ತು ಕೃಷಿ ಉಪಕರಣಗಳ ನಿರ್ಮಾಣಕ್ಕೆ ಸಂಬಂಧಿಸಿದವರು.
- ಕರಕುಶಲ-ಲೋಹನಿರ್ಮಾಣಕ್ಕೆ ಸಂಬಂಧಿಸಿದವರು.
- ವ್ಯಾಪಾರಕ್ಕೆ ಸಂಬಂಧಿಸಿದವರು.
- ಬಟ್ಟೆನೇಯುವುದು, ಗಾಣ (ಎಣ್ಣೆ ತೆಗೆಯುವುದು)ಕ್ಕೆ ಸಂಬಂಧಿಸಿದವರು.
- ಕ್ಷೇತ್ರ ಪರಿಚಾರಿಕೆಗೆ ಸಂಬಂಧಿಸಿದವರು.
- ನಾಡುವಾಳಿ ಸ್ವರೂಪಗಳಿಗೆ ಸಂಬಂಧಿಸಿದ ಅನೇಕ ಉದ್ಯೋಗಿಗಳು.

ಈ ರೀತಿ ಕೆಲಸ ಮಾಡುತ್ತಿರುವವರ ಹೊಸ ತಲೆಮಾರುಗಳು ಅದೇ ಕೆಲಸವನ್ನು ಮುಂದುವರಿಸಿದರು. ಒಂದೊಂದು ಕೆಲಸವನ್ನು ಮಾಡುವವರ ಕೂಟವು ಕ್ರಮೇಣ ಒಂದು ಜಾತಿಯಾಗಿ ಬದಲಾಯಿತು. ಬಯಲಿನಲ್ಲಿ ಕೃಷಿಮಾಡುವ ಅಡಿಯಾಳರು ಮಧ್ಯಕಾಲದ ಜಾತಿ ಶ್ರೇಣಿಯ ಅತ್ಯಂತ ಕೆಳಗಿನ ಹಂತದವರು ಮತ್ತು ಬ್ರಾಹ್ಮಣರು ಈ ಶ್ರೇಣಿಯ ಅತ್ಯಂತ ಮೇಲಿನ ಹಂತದಲ್ಲಿದ್ದರು.



**ಶುದ್ಧ ಅಶುದ್ಧ**

ಮಧ್ಯಕಾಲದ ಜಾತಿವ್ಯವಸ್ಥೆಯ ಆಧಾರದಲ್ಲಿ ಮೇಲ್ಜಾತಿಯವರು ಶುದ್ಧವೆಂದೂ ಕೆಳಜಾತಿಯವರು ಅಶುದ್ಧವೆಂದೂ ಪರಿಗಣಿಸಲ್ಪಟ್ಟಿದ್ದರು. ಕೆಳಜಾತಿಯವರು ಮೇಲ್ಜಾತಿಯವರನ್ನು ಸ್ಪರ್ಶಿಸಿದರೂ ನೋಡಿದರೂ ಹತ್ತಿರ ಬಂದರೂ ಮೇಲ್ಜಾತಿಯವರು ಶುದ್ಧತೆಯನ್ನು ಕಳೆದುಕೊಳ್ಳುತ್ತಾರೆ ಎಂಬ ನಂಬಿಕೆಯಿತ್ತು.

ಕುಲಕಸುಬಿನ ಆಧಾರದಲ್ಲಿ ಉಳಿದ ಜಾತಿಗಳ ಸ್ಥಾನವು ಈ ಎರಡು ಹಂತಗಳೊಳಗೆ ಬರುತ್ತಿತ್ತು. ಜಾತಿಗಳ ಆಧಾರದಲ್ಲಿ ಶುದ್ಧ-ಅಶುದ್ಧ ಎಂಬ ಭಾವನೆಯು ಬೆಳೆದುಬಂತು. ಭೂಮಿಯಲ್ಲಿ ಹಕ್ಕುಳ್ಳವರನ್ನು ಮೇಲ್ಜಾತಿಯವರೆಂದು ಪರಿಗಣಿಸಿದರಲ್ಲದೆ ಭೂಮಿಯಲ್ಲಿ ಕೆಲಸಮಾಡುವವರು ಹಾಗೂ ಕುಲಕಸುಬನ್ನು ಮಾಡುತ್ತಿದ್ದವರನ್ನು ಕೆಳಜಾತಿಯವರೆಂದು ಪರಿಗಣಿಸಿದ್ದರು.

ಮಲಬಾರು, ಕೊಚ್ಚಿ ಮತ್ತು ತಿರುವಾಂಕೂರಿನಲ್ಲಿ ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಜನಸಮೂಹವನ್ನು ಜಾತಿ ಆಧಾರದಲ್ಲಿ ವಿಂಗಡಿಸಿ ದಾಖಲಿಸಿದರು. ಇದರೊಂದಿಗೆ ಕುಲಕಸುಬನ್ನು ಮಾಡಿದರೂ ಮಾಡದಿದ್ದರೂ ಜಾತಿಯೆಂಬುದು ಜನ್ಮದೊಂದಿಗೆ ದಾಖಲಿಸುವ ವಿಧಾನವಾಗಿ ಬದಲಾಯಿತು.



ಕೇರಳದಲ್ಲಿ ಜಾತಿಗಳು ಹೇಗೆ ರೂಪುಗೊಂಡವೆಂಬುದನ್ನು ಚರ್ಚಿಸಿರಿ.

## ವ್ಯಾಪಾರ ಸಂಬಂಧಗಳು

ಪ್ರಾಚೀನ ಕಾಲದಂತೆ ಮಧ್ಯಕಾಲದಲ್ಲಿಯೂ ವ್ಯಾಪಾರವು ಜಲಮಾರ್ಗ ಮತ್ತು ನೆಲಮಾರ್ಗದ ಮೂಲಕ ಮುಂದುವರಿಯಿತು. ಕೊಲ್ಲಂ, ಕೊಡುಂಗಲ್ಲೂರು, ಕಲ್ಲಿಕೋಟೆ, ಪಂದಲಾಯಿಣಿ, ಮಾಡಾಯಿ, ವಳಪಟ್ಟಣಂ ಮುಂತಾದುವು ಆ ಕಾಲದ ಪ್ರಧಾನ ವ್ಯಾಪಾರ ಮಾರ್ಗಗಳಾಗಿದ್ದುವು. ಮಧ್ಯಕಾಲದಲ್ಲಿ ಯಾವೆಲ್ಲ ರೀತಿಯ ವ್ಯಾಪಾರಗಳಿದ್ದುವೆಂದು ನೋಡೋಣ.

| ಪ್ರಾದೇಶಿಕ ವ್ಯಾಪಾರ | ದೂರಪ್ರದೇಶದ ವ್ಯಾಪಾರ | ವಿದೇಶೀ ವ್ಯಾಪಾರ |
|---|---|---|
| ಸಂತೆಗಳು ಮತ್ತು ಅಂಗಡಿಗಳು ಪ್ರಧಾನ ವ್ಯಾಪಾರ ಕೇಂದ್ರಗಳಾಗಿದ್ದುವು. ಭತ್ತ, ಅಕ್ಕಿ, ಧಾನ್ಯಗಳು, ಹಸಿರು ತರಕಾರಿಗಳು, ವೀಳ್ಯದೆಲೆ, ಉಪ್ಪು, ಮೀನು, ನಿತ್ಯೋಪಯೋಗಿ ವಸ್ತುಗಳು ಇಲ್ಲಿ ವಿನಿಮಯಗೊಳ್ಳುತ್ತಿದ್ದುವು. | ತಮಿಳ್ನಾಡು, ಕರ್ನಾಟಕ, ಆಂಧ್ರ, ಕಳಿಂಗ, ಒರಿಸ್ಸಾ ಮೊದಲಾದ ರಾಜ್ಯಗಳೊಂದಿಗೆ ದೂರ ಪ್ರದೇಶದ ವ್ಯಾಪಾರವು ನಡೆಯುತ್ತಿತ್ತು. ತಮಿಳು ಬ್ರಾಹ್ಮಣರು, ಚೆಟ್ಟಿಯಾರರು ಆಗಿನ ಪ್ರಧಾನ ವ್ಯಾಪಾರಿಗಳಾಗಿದ್ದರು. ಅಕ್ಕಿ ಮೆಣಸು, ಹತ್ತಿ, ರೇಶ್ಮೆ, ಇತರ ವಸ್ತ್ರಗಳು, ಕುದುರೆಗಳನ್ನು ಇಲ್ಲಿಗೆ ತಂದರು. ಕರಿಮೆಣಸು, ಸುಗಂಧದ್ರವ್ಯಗಳನ್ನು ಇಲ್ಲಿಂದ ಕೊಂಡು ಹೋಗುತ್ತಿದ್ದರು. | ಅರಬರು, ಚೀನಿಯರು, ಯುರೋಪಿಯನ್ನರು ಪ್ರಧಾನ ವಿದೇಶಿ ವ್ಯಾಪಾರಿಗಳಾಗಿದ್ದರು. ಕರಿಮೆಣಸು, ಶುಂಠಿ, ಲವಂಗ, ಏಲಕ್ಕಿ, ಇತರ ಸುಗಂಧ ದ್ರವ್ಯಗಳು, ತೆಂಗಿನಕಾಯಿ ಇತ್ಯಾದಿಗಳನ್ನು ಇಲ್ಲಿಂದ ರಫ್ತು ಮಾಡುತ್ತಿದ್ದರು. ಚಿನ್ನ, ತಾಮ್ರ, ಸೀಸ, ಚೀನೀಆವೆಮಣ್ಣಿನ ಪಾತ್ರೆಗಳು, ಚೀನಾರೇಶ್ಮೆ ಇತ್ಯಾದಿಗಳು ಕೇರಳಕ್ಕೆ ಆಮದಾಗುತ್ತಿದ್ದುವು. |

> “ಕೋವಲಾತಚೆಟ್ಟಿ ಅಂಜುವಣ್ಣಂ
> ಕುಟ್ಟುಮಣಿಕಿರಾಮತ್ತಾರ್ ಮಕ್ಕೇಳ್
> ನಮ್ಮಳಾಲ್ ನಾಲು ನಗರತ್ತಿಲುಂ
> ನ್ನಾಲೇರಕೋಳ್ಕ ಕೂಡಿಕ್ಕುಚೊನ್ನ”
>
> ಪಯ್ಯನ್ನೂರ್‌ಪಾಟ್ಟ್

ಹದಿನಾಲ್ಕನೇ ಶತಮಾನದಲ್ಲಿದ್ದ ಪಯ್ಯನ್ನೂರ್‌ಪಾಟ್ಟ್‌ನ ಸಾಲುಗಳನ್ನು ಮೇಲೆ ನೀಡಲಾಗಿದೆ. ಇದರಲ್ಲಿ ಉಲ್ಲೇಖಿಸಿರುವ ಚೆಟ್ಟಿಯಾರರು ವ್ಯಾಪಾರಿಗಳಾಗಿದ್ದರು. ಅಂಜುವಣ್ಣಂ, ಮಣಿಗ್ರಾಮ ಎಂದರೇನು?

ಅಂಜುವಣ್ಣಂ ಮತ್ತು ಮಣಿಗ್ರಾಮಗಳು ಮಧ್ಯಕಾಲದ ಕೇರಳದಲ್ಲಿ ಹದಿನಾಲ್ಕನೆಯ ಶತಮಾನದವರೆಗೆ ಅಸ್ತಿತ್ವದಲ್ಲಿದ್ದ ವ್ಯಾಪಾರ ಸಂಘಟನೆಗಳಾಗಿದ್ದವು. ನೆಲಮಾರ್ಗ ಮತ್ತು ಜಲಮಾರ್ಗದ ವ್ಯಾಪಾರದಲ್ಲಿ ಇವು ಸಕ್ರಿಯವಾಗಿದ್ದುವು. ಹದಿನೈದನೆಯ ಶತಮಾನದ ಕೊನೆಯಲ್ಲಿ ಪೋರ್ಚುಗೀಸರ ಆಗಮನದವರೆಗೆ ಮಲಬಾರಿನಲ್ಲಿ ಅರಬಿಗಳು ಮತ್ತು ಚೀನಿಯರು ಪ್ರಧಾನ ವ್ಯಾಪಾರಿಗಳಾಗಿದ್ದರು. ಯುರೋಪಿಯನರ ಆಗಮನವು ಅರಬಿ ಮತ್ತು ಚೀನಿಯರ ವ್ಯಾಪಾರವು ಕ್ಷೀಣಿಸಲು ಕಾರಣವಾಯಿತು. ಸಮುದ್ರಮಾರ್ಗದ ಮೂಲಕ ನಡೆಯುತ್ತಿದ್ದ ವ್ಯಾಪಾರದ ಏಕಸ್ವಾಮ್ಯವು ಯುರೋಪಿಯನರ ವಶವಾಯಿತು. ಹೀಗೆ ಕೇರಳದ ಸಂಪನ್ಮೂಲದ ಮೇಲೆ ಯುರೋಪಿನ ದೇಶಗಳು ಅಧಿಪತ್ಯವನ್ನು ಸ್ಥಾಪಿಸಿದವು.

## ಸಾಂಸ್ಕೃತಿಕ ಸಮನ್ವಯ

> ತಪೋಧನರ್ ವಾಣಿಡುಮಾಶ್ರಮಂಗಳಿಲ್
> ವಸಿಚ್ಚಿಡುಂ ವನ್ಯಮೃಗಂ ಜಳೆನ್ನ ಪೋಲ್
> ಪರಸ್ಪರ ಭಿನ್ನತಯಾರ್ನ ದೇವತಾ ಗಣಂ
> ವಸಿ ಚೈಕ್ಕಮೋಡ ಪುರತ್ತಿಲಾಯ್
>
> ಮೂಷಕವಂಶದ 12ನೇ ಸರ್ಗದ 112ನೇ ಶ್ಲೋಕ

ಆಶ್ರಮದ ಅಂಗಣದಲ್ಲಿ ಶತ್ರುತ್ವವನ್ನು ಮರೆತು ಸ್ನೇಹದಿಂದ ವಿಹರಿಸಿದ ವನ್ಯಮೃಗಗಳಂತೆ ವಿಭಿನ್ನ ದೇವತೆಗಳನ್ನು ಆರಾಧಿಸುವವರು ಏಕತೆಯಿಂದ ಮಧ್ಯಕಾಲದ ಕೇರಳದಲ್ಲಿ ವಾಸಿಸುತ್ತಿದ್ದರೆಂಬುದನ್ನು ಮೂಷಕವಂಶ ಕಾವ್ಯದ ಈ ಮೇಲಿನ ಸಾಲುಗಳು ತಿಳಿಸುತ್ತವೆ.

ವ್ಯಾಪಾರದ ಮೂಲಕ ವಸ್ತುಗಳ ವಿನಿಮಯದೊಂದಿಗೆ ವ್ಯತ್ಯಸ್ತ ಸಂಸ್ಕೃತಿಗಳ ವಿನಿಮಯವು ನಡೆಯುತ್ತಿತ್ತು.

### ಮೂಷಕವಂಶ ಕಾವ್ಯ

ಹನ್ನೊಂದನೆಯ ಶತಮಾನದಲ್ಲಿ ರಚಿಸಲ್ಪಟ್ಟ ಮೂಷಕವಂಶ ಕಾವ್ಯವು ಕೇರಳ ಮತ್ತು ಭಾರತದ ಮೊದಲ ರಾಜವಂಶಾವಳಿ ಚರಿತ್ರೆಯಾಗಿದೆ. ಸುಮಾರು 6ನೆಯ ಶತಮಾನದಿಂದ ಹನ್ನೊಂದನೇಯ ಶತಮಾನದವರೆಗೆ ಕೋಲತ್ತುನಾಡನ್ನು ಆಳುತ್ತಿದ್ದ ಮೂಷಕ ರಾಜವಂಶದ ರಾಮಘಟನ್‌ನಿಂದ ಶ್ರೀಕಂಠನ್‌ವರೆಗಿರುವ ನೂರ ಹತ್ತೊಂಬತ್ತು ರಾಜರ ಆಡಳಿತ ಕಾಲವನ್ನು ಈ ಕಾವ್ಯದಲ್ಲಿ ವಿವರಿಸಲಾಗಿದೆ. ಶ್ರೀಕಂಠ ರಾಜನ ಆಸ್ಥಾನ ಕವಿಯಾದ ಅತುಲನ್ ಈ ಕಾವ್ಯವನ್ನು ರಚಿಸಿದ್ದಾನೆ.

ಕೇರಳದ ಸಾಂಸ್ಕೃತಿಕ ಸಮನ್ವಯಕ್ಕೆ ಈ ವ್ಯಾಪಾರವು ದೊಡ್ಡ ಕೊಡುಗೆಯನ್ನು ನೀಡಿದೆ. ವಿವಿಧ ಧಾರ್ಮಿಕ ವಿಭಾಗಗಳು ಪರಸ್ಪರ ಸೌಹಾರ್ದದಿಂದ ಒಂದಾಗಿ ಜೀವನ ನಡೆಸುವ ಭೂಪ್ರದೇಶವಾಗಿ ಮಧ್ಯಕಾಲದಲ್ಲಿ ನಾಡು ಬೆಳೆಯಿತು. ಬ್ರಾಹ್ಮಣರು, ಜೈನ, ಬೌದ್ಧ, ಯಹೂದಿ, ಕ್ರೈಸ್ತ, ಇಸ್ಲಾಂ ಮತಗಳು ಕೇರಳದಲ್ಲಿ ಮಧ್ಯಕಾಲದಲ್ಲಿ ವ್ಯಾಪಿಸಿದುವು. ಕೇರಳದ ಆಡಳಿತಗಾರರು ಎಲ್ಲಾ ಮತಗಳಿಗೂ ಸಮಾನ ಪ್ರಾಧಾನ್ಯವನ್ನು ನೀಡಿದರು. ಬ್ರಾಹ್ಮಣರಿಗೂ ದೇವಾಲಯಗಳಿಗೂ ಭೂಮಿಯನ್ನು ಹಾಗೂ ಇತರ ವಸ್ತುಗಳನ್ನು ದಾನವಾಗಿ ನಾಡುವಾಳಿಗಳು ನೀಡಿದ್ದನ್ನು ನೆನಪಿಸಿಕೊಳ್ಳುವಿರಲ್ಲವೇ. ಅದೇ ರೀತಿ ಜೈನ, ಬೌದ್ಧ, ಯಹೂದಿ, ಕ್ರೈಸ್ತ, ಇಸ್ಲಾಂ ಧರ್ಮಗಳಿಗೂ ನಾಡುವಾಳಿಗಳು ವಿವಿಧ ರೀತಿಯ ಹಕ್ಕುಗಳನ್ನು ನೀಡಿದ್ದರು.



### ನಾಡುವಾಳಿಗಳು ನೀಡಿದ ಹಕ್ಕುಗಳು

- ದಕ್ಷಿಣ ತಿರುವಾಂಕೂರಿನ ಆಯಿವಂಶದ ರಾಜನಾದ ವಿಕ್ರಮಾದಿತ್ಯ ವರಗುಣನ್ ಒಂಬತ್ತನೆಯ ಶತಮಾನದಲ್ಲಿ ಶ್ರೀಮೂಲವಾಸರ ಬೌದ್ಧಮತದ ಮಂದಿರಕ್ಕೆ ನೀಡಿದ ಹಕ್ಕುಗಳು.(ಪಾಲಿಯಂ ಶಾಸನ)
- ಸಿ.ಇ. ಒಂಬತ್ತು, ಹತ್ತು, ಹನ್ನೊಂದನೆಯ ಶತಮಾನದಲ್ಲಿ ತಾಳಕ್ಕಾವ್, ಕಿಣಲೂರ್, ಆಲತ್ತೂರ್, ತಿರುವಣ್ಣೂರ್, ಚಿತರಾಲ್ ಮುಂತಾದೆಡೆಗಳಲ್ಲಿ ಜೈನ ಮಂದಿರಗಳಿಗೆ ನೀಡಿದ ದಾನಗಳು. (ತಿರುಮಣ್ಣರ್ ಶಾಸನ).
- ವೇನಾಡಿನ ನಾಡುವಾಳಿ ಅಯ್ಯನಡಿಗಳು ಸಿ.ಇ. ಒಂಬತ್ತನೆ ಶತಮಾನದಲ್ಲಿ ಮಣಿಗ್ರಾಮ ವ್ಯಾಪಾರ ಸಂಘಟನೆಗೆ ಸೇರಿದ ಮಾರ್ ಸಫೀರ್ ಈಶೋ ಎಂಬ ಕ್ರೈಸ್ತ ವ್ಯಾಪಾರಿಗೆ ಕೊಲ್ಲಂ ನಗರದಲ್ಲಿ ವ್ಯಾಪಾರ ಮಾಡಲೂ ತರಿಸಾಪಳ್ಳಿ ನಿರ್ಮಿಸಲೂ ನೀಡಿದ ಹಕ್ಕುಗಳು. (ತರಿಸಾಪಳ್ಳಿ ಶಾಸನ)
- ಅಂಜುವಣ್ಣಂ ವ್ಯಾಪಾರ ಸಂಘಟನೆಗೆ ಸೇರಿದ ಜೋಸೆಫ್ ರಬ್ಬಾನ್ ಎಂಬ ಯಹೂದಿ ವ್ಯಾಪಾರಿಗೆ ಕೊಡುಂಗಲ್ಲೂರ್ ನಗರದಲ್ಲಿ ವ್ಯಾಪಾರ ಮಾಡಲು ಪೆರುಮಾಳ್ ರಾಜರಾದ ಬಾಸ್ಕರರವಿ ಹತ್ತನೇ ಶತಮಾನದಲ್ಲಿ ನೀಡಿದ ಹಕ್ಕುಗಳು. (ಯಹೂದಿ ಶಾಸನ)
- ಸಿ.ಇ. ಹದಿಮೂರನೇ ಶತಮಾನದಲ್ಲಿ ನೆಡಿಯಿರುಪ್ಪು ಸ್ವರೂಪದ ಸಾಮೂದಿರಿ ರಾಜ ಮುಚ್ಚುಂದಿ ಮಸೀದಿಗೆ ಕುನ್‌ಮಂಗಲತ್, ಪುಳಿಕ್ಕಲ್ ಭೂಮಿಯನ್ನು ನೀಡಿದ್ದು. (ಮುಚ್ಚುಂದಿಪಳ್ಳಿ ಶಾಸನ)




ಮುಚ್ಚುಂದಿ ಮಸೀದಿ



ಚಿತರಾಲ್

ಸಿ.ಇ. ಹತ್ತು ಮತ್ತು ಹನ್ನೊಂದನೆ ಶತಮಾನಗಳಲ್ಲಿ ಕೇರಳವನ್ನು ಸಂದರ್ಶಿಸಿದ ಅಲ್ಬರೂನಿ, ಸಿ.ಇ. ಹದಿನೈದನೆಯ ಶತಮಾನದಲ್ಲಿ ಆಗಮಿಸಿದ ಅಬ್ದುಲ್ ರಜಾಕ್ ನೀಡಿದ ವಿವರಣೆಗಳನ್ನು ಗಮನಿಸಿರಿ.




**ಕೇರಳದ ಸಾಂಸ್ಕೃತಿಕ ಸಮನ್ವಯಕ್ಕೆ ವ್ಯಾಪಾರವು ಹೇಗೆ ಕಾರಣವಾಯಿತು?**

## ಸಾಮಾಜಿಕ ನಿಯಂತ್ರಣಗಳು

ಮಧ್ಯಕಾಲದಲ್ಲಿ ಸಾಮಾಜಿಕ ಸಂಬಂಧಗಳ ನಿಯಂತ್ರಣಕ್ಕಾಗಿ ಅನೇಕ ಕಾನೂನು ಕಟ್ಟಳೆಗಳು ಜಾರಿಯಲ್ಲಿದ್ದುವು. ಪೆರುಮಾಳರ ಕಾಲದಲ್ಲಿ "ಮುಳಿಕ್ಕುಳಂ ಕಚ್ಚಂ" ಎಂಬ ಶಿಸ್ತು ಕ್ರಮ ಅಸ್ತಿತ್ವದಲ್ಲಿತ್ತು. ಅದು ಬ್ರಾಹ್ಮಣ ಮತ್ತು ಕ್ಷೇತ್ರಗಳಿಗೆ ಸಂಬಂಧಿಸಿದ ಜನಸಮೂಹಕ್ಕೆ ಪ್ರಧಾನವಾಗಿ ಬಾಧಕವಾಗಿತ್ತು. ಪೆರುಮಾಳ್ ಕಾಲದಲ್ಲಿ ನಾಡಿನ ನಿಯಮಗಳು ಸಮಾಜವನ್ನು ನಿಯಂತ್ರಿಸುತ್ತಿದ್ದುವು. ಪೆರುಮಾಳರ ಕಾಲದ ನಂತರ 'ಮುಳಿಕ್ಕುಳಂ ಕಚ್ಚಂ' ನಿಧಾನವಾಗಿ ಅಪ್ರತ್ಯಕ್ಷವಾಯಿತು. ಅದರ ಬದಲಿಗೆ ನಾಡಿನ ನಿಯಮಗಳು, ಆಚಾರಗಳು ಪ್ರಾಬಲ್ಯವನ್ನು ಪಡೆದವು. ಅವುಗಳನ್ನು 'ಕಟ್ಟಳೆ' ಎಂದು ಕರೆಯುತ್ತಿದ್ದರು. ವ್ಯತ್ಯಸ್ತವಾದ ಕಟ್ಟಳೆಗಳು ಅಸ್ತಿತ್ವದಲ್ಲಿದ್ದುವು.

- ದೇಶದ ಕಟ್ಟಳೆಗಳು
- ಕಸುಬಿನ ಕಟ್ಟಳೆಗಳು
- ಸ್ವರೂಪದ ಕಟ್ಟಳೆಗಳು
- ಶೂದ್ರರ ಕಟ್ಟಳೆಗಳು
- ಉದ್ಯೋಗ ಒಕ್ಕೂಟಗಳು ಪರಸ್ಪರ ಪಾಲಿಸುತ್ತಿದ್ದ ಜಾತಿಯ ಕಟ್ಟಳೆಗಳು

ಸಾಮಾನ್ಯವಾಗಿ ಈ ಕಟ್ಟಳೆಗಳು ಉಲ್ಲಂಘನೆಗೀಡಾಗುತ್ತಿರಲಿಲ್ಲ. ಒಂದು ವೇಳೆ ಉಲ್ಲಂಘಿಸಲ್ಪಟ್ಟರೆ ಅದು ಸಂಘರ್ಷಕ್ಕೆ ಕಾರಣವಾಗುತ್ತಿತ್ತು. ಈ ಮೊದಲು ಸೂಚಿಸಿದ ಭೂಮಿಯ ಒಡೆತನದ ಹಕ್ಕುಗಳು ಮತ್ತು ಜಾತಿಮತ ಸಂಬಂಧಗಳೆಲ್ಲವೂ ಈ ಕಟ್ಟಳೆಗಳನ್ನು ಅನುಸರಿಸಿ ಸಮಾಜದಲ್ಲಿ ಜಾರಿಯಲ್ಲಿದ್ದುವು. ನಾಡುವಾಳಿಗಳ ಕಾಲದಲ್ಲಿ

### ಸತ್ಯ ಪರೀಕ್ಷೆಗಳು

- **ವಿಷಪರೀಕ್ಷೆ** – ಆರೋಪಿಯ ಕೈಯನ್ನು ವಿಷದ ಹಾವಿನ ಗೂಡಿನೊಳಗೆ ಹಾಕಿ ಅದು ಕಚ್ಚಿದರೆ ಅವನು ಅಪರಾಧಿಯೆಂದು ತಿಳಿಯುವುದು.
- **ಜಲಪರೀಕ್ಷೆ** – ಮೊಸಳೆಗಳಿರುವ ಕೊಳಕ್ಕೆ ಆರೋಪಿಯನ್ನು ಇಳಿಸುವುದು. ಮೊಸಳೆ ಹಿಡಿದರೆ ಆತ ಅಪರಾಧಿ.
- **ಅಗ್ನಿಪರೀಕ್ಷೆ** – ಕುದಿಯುವ ತುಪ್ಪ ಅಥವಾ ಎಣ್ಣೆಗೆ ಆರೋಪಿಯು ಬೆರಳುಗಳನ್ನು ಮುಳುಗಿಸುವುದು. ಬೆರಳು ಸುಟ್ಟರೆ ಅಪರಾಧಿ ಎಂದು ತಿಳಿಯುವುದು. 'ಶುಚೀಂದ್ರ ಕೈಮುಕ್ಕ್' ಆ ಕಾಲದಲ್ಲಿ ಪ್ರಚಾರದಲ್ಲಿದ್ದ ಅಗ್ನಿಪರೀಕ್ಷೆಯಾಗಿತ್ತು.
- **ತೂಕಪರೀಕ್ಷೆ** – ಆರೋಪಿಯನ್ನು ಮೊದಲು ತೂಕಮಾಡುವುದು. ಅನಂತರ ಅವನು ಮಾಡಿದ ಅಪರಾಧವನ್ನು ತಾಳೆಗರಿಯಲ್ಲಿ ಬರೆದು ದೇಹಕ್ಕೆ ತೂಗುಹಾಕಿ ಪುನಃ ತೂಕ ಮಾಡುವುದು. ಆಗ ಅವನ ಭಾರವು ಹೆಚ್ಚಾದರೆ ಆತ ಅಪರಾಧಿ ಎಂದು ಘೋಷಿಸಿ ಶಿಕ್ಷಿಸುವುದು.

ಅಪರಾಧಿಗಳಿಗೆ ಶಿಕ್ಷೆಯನ್ನು ನೀಡುವುದಕ್ಕಾಗಿ ವಿಷಪರೀಕ್ಷೆ, ಜಲಪರೀಕ್ಷೆ, ಅಗ್ನಿಪರೀಕ್ಷೆ, ತೂಕಪರೀಕ್ಷೆಗಳಂತಹ ಸತ್ಯಪರೀಕ್ಷೆಗಳು ಜಾರಿಯಲ್ಲಿದ್ದುವು. ಇವುಗಳಲ್ಲಿ ತೂಕಪರೀಕ್ಷೆಯನ್ನು ಬ್ರಾಹ್ಮಣರನ್ನೊಳಗೊಂಡ ಮೇಲ್ಜಾತಿಯವರಿಗೆ ಮಾತ್ರ ನೀಡುತ್ತಿದ್ದರು. ಉಳಿದ ಪರೀಕ್ಷೆಗಳನ್ನು ಅವರ್ಣೀಯರಿಗೆ ಮಾಡುತ್ತಿದ್ದರು. ಮಧ್ಯಕಾಲದಲ್ಲಿ ಎಲ್ಲ ವರ್ಗಗಳಿಗೆ ಸಮಾನ ನೀತಿ ನಿಯಮಗಳಿರಲಿಲ್ಲ. ಸವರ್ಣೀಯರಿಗೆ ಮತ್ತು ಅವರ್ಣೀಯರಿಗೆ ವಿಭಿನ್ನ ರೀತಿಯ ಶಿಕ್ಷಾವಿಧಾನಗಳಿದ್ದುವು.

ಬ್ರಿಟಿಷರ ಆಡಳಿತದ ವರೆಗೆ ಮೇಲೆ ಹೇಳಿದಂತಹ ನಾಡಿನ ಆಚಾರಗಳು ಸಮಾಜದಲ್ಲಿ ಅಸ್ತಿತ್ವದಲ್ಲಿದ್ದುವು. ಹತ್ತೊಂಬತ್ತನೆ ಶತಮಾನದಲ್ಲಿ ಏಕರೂಪದ ನಿಯಮಗಳು ಜಾರಿಗೊಂಡವು.



ಮಧ್ಯಕಾಲ ಸಮಾಜದಲ್ಲಿ ಎಲ್ಲರಿಗೂ ಸಮಾನವಾದ ನೀತಿವ್ಯವಸ್ಥೆ ಜಾರಿಯಲ್ಲಿತ್ತೇ? ಚರ್ಚಿಸಿರಿ.

## ಭಾಷೆ, ಸಾಹಿತ್ಯ, ಕಲೆ, ವಿಜ್ಞಾನ

ಮಧ್ಯಕಾಲ ಕೇರಳದ ಭಾಷೆ, ಸಾಹಿತ್ಯ, ಕಲೆ, ವಿಜ್ಞಾನ ಮುಂತಾದುವುಗಳ ಕುರಿತು ಹಿಂದಿನ ತರಗತಿಯಲ್ಲಿ ನಾವು ಚರ್ಚೆ ನಡೆಸಿದೆವಲ್ಲವೇ.

ಪ್ರಾಚೀನ ಕಾಲದಲ್ಲಿ ಕೇರಳವು ತಮಿಳಗಂನ ಭಾಗವಾಗಿತ್ತಲ್ಲವೇ. ತಮಿಳಿನ ಪ್ರಭಾವ ಮತ್ತು ಸಂಸ್ಕೃತ ಸೇರಿದ ಮಲಯಾಳ ಭಾಷಾರೂಪವು ಮಧ್ಯಕಾಲದಲ್ಲಿತ್ತು. ಮಲೆಯಾಳ ಭಾಷೆಯ ಈ ರೂಪವನ್ನು ಒಂಭತ್ತನೆಯ ಶತಮಾನದಲ್ಲಿ ಉರುಟು ಅಕ್ಷರದಿಂದ ಬರೆದ ಶಾಸನಗಳಲ್ಲಿ ಕಾಣಬಹುದು. ಈ ಮೊದಲು ಸೂಚಿಸಿದ ತರಿಸ್ಸಾಪಳ್ಳಿ, ತಿರುನೆಲ್ಲಿ ಶಾಸನಗಳು ಇದಕ್ಕೆ ಉದಾಹರಣೆಗಳಾಗಿವೆ.

ಹನ್ನೆರಡನೆ ಶತಮಾನದ ವರೆಗಿನ ಶಾಸನಗಳಲ್ಲಿ ಈ ರೀತಿಯ ಬರಹಗಳನ್ನು ಕಾಣಬಹುದು. ಅನಂತರದ ಬರಹಗಳಲ್ಲಿ ಮಲಯಾಳ ಭಾಷೆಯ ಪ್ರಭಾವವು ಹೆಚ್ಚಾಯಿತು. ಹನ್ನೆರಡನೇ ಶತಮಾನದಲ್ಲಿ ರಚಿಸಲ್ಪಟ್ಟ 'ರಾಮಚರಿತ' ಮಲಯಾಳದ ಆರಂಭ ಕಾಲದ ಕೃತಿಯಾಗಿತ್ತು. ಹದಿನಾಲ್ಕನೇ ಶತಮಾನದಲ್ಲಿ ಮಣಿಪ್ರವಾಳ ಸಾಹಿತ್ಯ ಕೃತಿಗಳು ರಚಿಸಲ್ಪಟ್ಟವು. ಈ ಕೆಳಗಿನವುಗಳು ಆ ಕಾಲದಲ್ಲಿ ರಚಿಸಲ್ಪಟ್ಟ ಪ್ರಧಾನ ಮಣಿಪ್ರವಾಳ ಕೃತಿಗಳಾಗಿವೆ.

- ಉಣ್ಣುನೀಲಿ ಸಂದೇಶಂ
- ಉಣ್ಣಿಯಾಚ್ಚಿ ಚರಿತಂ
- ಚಂದ್ರೋಲ್ಸವಂ
- ಅನಂತಪುರವರ್ಣನಂ
- ವೈಶಿಕ ತಂತ್ರಂ



**ಮಣಿಪ್ರವಾಳಂ**

ಮಣಿಪ್ರವಾಳವು ಸಂಸ್ಕೃತ ಹಾಗೂ ಮಲಯಾಳವು ಸಂಯೋಜಿತಗೊಂಡು ರಚಿಸಲ್ಪಟ್ಟ ಸಾಹಿತ್ಯ ಕೃತಿಯಾಗಿದೆ. ಮಣಿಪ್ರವಾಳದಲ್ಲಿ ಸಂದೇಶ ಕಾವ್ಯಗಳು, ಚಂಪೂಕಾವ್ಯಗಳು (ಗದ್ಯ ಪದ್ಯ ಸೇರಿದ ಕಾವ್ಯ) ರಚಿಸಲ್ಪಟ್ಟವು.

ಹದಿನೈದನೆಯ ಶತಮಾನದೊಂದಿಗೆ ಈ ರೀತಿಯ ರಚನೆಗಳ ಕಾಲವು ಕೊನೆಗೊಂಡಿತು. ಹದಿನೈದನೆಯ ಶತಮಾನದಲ್ಲಿ ನಿರಣಂ

ಕವಿಗಳಲ್ಲಿ ಸೇರಿದ ರಾಮಪಣಿಕ್ಕರ್ ಅಥವಾ ಕಣ್ಣಾಶಾನ್ ಮಲಯಾಳದಲ್ಲಿ ರಚಿಸಿದ ರಾಮಾಯಣ, ಭಾಗವತ, ಶಿವರಾತ್ರಿ ಮಹಾತ್ಮೆ ಎಂಬೀ ಕೃತಿಗಳು ಮಲಯಾಳ ಭಾಷೆಯ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ಚೆರುಶ್ಶೇರಿಯ 'ಕೃಷ್ಣಗಾಥ'ವು ಮಲಯಾಳದಲ್ಲಿ ಆ ಕಾಲದಲ್ಲಿ ರಚಿಸಲ್ಪಟ್ಟ ಇನ್ನೊಂದು ಶ್ರೇಷ್ಠ ಕೃತಿಯಾಗಿದೆ.

ಮಧ್ಯಕಾಲ ಭಾರತದ ಭಕ್ತಿ ಪಂಥದ ಕುರಿತು ಈ ಹಿಂದಿನ ಪಾಠಭಾಗಗಳಲ್ಲಿ ಕಲಿತಿರುವಿರಲ್ಲವೇ. ಭಕ್ತಿ ಪಂಥದ ಸಾಹಿತ್ಯವು ಮಲಯಾಳದಲ್ಲಿಯೂ ಇತ್ತು. ಹದಿನೇಳನೇ ಶತಮಾನದಲ್ಲಿ ಪೂಂದಾನಂ ನಂಬೂದಿರಿ ರಚಿಸಿದ ಜ್ಞಾನಪ್ಪಾನ, ಶ್ರೀಕೃಷ್ಣಕರ್ಣಾಮೃತಂ, ತುಂಜತ್ ರಾಮಾನುಜನ್ ಎಳುತ್ತಚ್ಚನ್ ರಚಿಸಿದ ಆಧ್ಯಾತ್ಮ ರಾಮಾಯಣ, ಕಿಳಿಪ್ಪಾಟ್, ಮಹಾಭಾರತ ಕಿಳಿಪ್ಪಾಟ್ ಆ ಕಾಲದ ಭಕ್ತಿ ಸಾಹಿತ್ಯ ಕೃತಿಗಳಾಗಿದ್ದವು. ಹದಿನೆಂಟನೆಯ ಶತಮಾನದಲ್ಲಿ ಕುಂಜನ್ ನಂಬ್ಯಾರ್‌ರ ತುಳ್ಳಲ್ ಪಾಟ್ಟುಗಳ್, ರಾಮಪುರತ್ ವಾರ್ಯರ ಕುಚೇಲವೃತ್ತಂ, ವಂಜಿಪಾಟ್ಟ್ ಮುಂತಾದುವುಗಳು ಮಲಯಾಳ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಿದುವು. ವಡಕ್ಕನ್ ಪಾಟ್ಟ್, ತೆಕ್ಕನ್ ಪಾಟ್ಟ್ ಮುಂತಾದ ಬಾಯ್ದೆರೆ ಹಾಡುಗಳು ಈ ಕಾಲದಲ್ಲಿ ಪ್ರಚಾರವನ್ನು ಪಡೆದುವು.

ಮಲಯಾಳ ಭಾಷೆಯ ಬೆಳವಣಿಗೆಯಲ್ಲಿ ಮಧ್ಯಕಾಲದ ಸಾಹಿತ್ಯ ಕೃತಿಗಳು ವಹಿಸಿದ ಪಾತ್ರದ ಕುರಿತು ಚರ್ಚಿಸಿರಿ.



**ಬಾಯ್ದೆರೆ ಹಾಡುಗಳು**



- **ವಡಕ್ಕನ್ ಪಾಟ್ಟುಗಳು** –ಯುದ್ಧದಲ್ಲಿ ಭಾಗವಹಿಸಿದ ವೀರರನ್ನು ಹೊಗಳಿ ರಚಿಸಿದ ಹಾಡುಗಳು ತಚ್ಚೋಳಿ ಒದೇನನ್ ಎಂಬ ವೀರನ ಹೆಸರನ್ನು ಹೊಗಳಿ ರಚಿಸಿದ ತಚ್ಚೋಳಿಪ್ಪಾಟ್, ಆರೋಮಲ್ ಚೇಕವರನ್ನು ಹೊಗಳಿದ ಪುತ್ತೂರಂಪ್ಪಾಟ್ ಇವುಗಳಲ್ಲಿ ಪ್ರಧಾನವಾದವುಗಳಾಗಿವೆ.
- **ತೆಕ್ಕನ್ ಪಾಟ್ಟುಗಳು**– ದೇಶಚರಿತ್ರಂ, ವಿವಾಹ, ದೇವತಾ ಸಂಕಲ್ಪಗಳು, ಯುದ್ಧವೀರರನ್ನು ಹೊಗಳುವ ಕೀರ್ತನೆಗಳು, ಯಕ್ಷಿಗಳ ಕುರಿತಾದ ಹಾಡುಗಳು ಮುಂತಾದ ಹಲವಾರು ವಿಷಯಗಳು ತೆಕ್ಕನ್ ಪಾಟ್ಟುಗಳಲ್ಲಿ ಬರುತ್ತದೆ. ಇರವಿಕ್ಕುಟ್ಟಿಪಿಳ್ಳೆಯ ಯುದ್ಧಗೀತೆ, ಪಂಚವಕ್ಕಾಡ್, ನೀಲಿಪ್ಪಾಟ್ ಮುಂತಾದವು ಇದಕ್ಕೆ ಉದಾಹರಣೆಗಳು.
- **ತೋಟ್ಟಂ ಪಾಟ್ಟುಗಳು**–ಭೂತದ ಕೋಲಗಳು (ತೆಯ್ಯಂ) ತಿರ ಮುಂತಾದ ಆಚರಣೆಗಳಿಗೆ ಸಂಬಂಧಿಸಿದ ಹಾಡುಗಳು.
- **ಕೊಯ್ತು ಪಾಟ್ಟುಗಳು/ಞಾಟ್ಟು ಪಾಟ್ಟುಗಳು**– ಕೃಷಿ ಕೆಲಸ ಮಾಡುವವರು ಗುಂಪಾಗಿ ಹಾಡುವ ಹಾಡುಗಳು ಇದಾಗಿವೆ.
- **ಪಡಪ್ಪಾಟ್ಟುಗಳು**–ಸೈನ್ಯವನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ ಹಾಡುಗಳು.

ಕೇರಳಕ್ಕೆ ವಲಸೆ ಬಂದ ಅನೇಕ ಜನವಿಭಾಗಗಳ ಆಡುಭಾಷೆ ಶೈಲಿಗಳು ಮಲಯಾಳ ಭಾಷೆಯ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರ ವಹಿಸಿವೆ. ಕೇರಳದ ದಕ್ಷಿಣ ಮೇರೆಯಲ್ಲಿ ವಾಸಿಸುವವರು ಮಾತನಾಡುವ ಮಲಯಾಳ ಭಾಷೆಯಲ್ಲಿ ತಮಿಳಿನ ಪ್ರಭಾವವನ್ನೂ ಉತ್ತರ ಮೇರೆಯಲ್ಲಿ ವಾಸಿಸುವವರ ಭಾಷೆಯಲ್ಲಿ ಕನ್ನಡದ ಪ್ರಭಾವವನ್ನು ಕಾಣಬಹುದು.


ಸಮುದ್ರಮಾರ್ಗದ ಮೂಲಕ ವಲಸೆ ಬಂದ ವ್ಯಾಪಾರಿಗಳ ಭಾಷೆಯ ಪ್ರಭಾವವನ್ನು ನಾವು ಮಲಯಾಳದಲ್ಲಿ ಕಾಣಬಹುದು. ಅರಬಿಗಳ ಪ್ರಭಾವವು ಅರಬಿ ಮಲಯಾಳ ಎಂಬ ಭಾಷೆಯ ಹುಟ್ಟಿಗೆ ಕಾರಣವಾಯಿತು. ಹದಿನೇಳನೆಯ ಶತಮಾನದಲ್ಲಿ ಖಾಸೀ ಮೊಹಮ್ಮದ್‌ನ 'ಮೊಹಿಯುದ್ದೀನ್ ಮಾಲ' ಅರಬೀ ಮಲಯಾಳದಲ್ಲಿ ರಚಿಸಲ್ಪಟ್ಟ ಕೃತಿಯಾಗಿದೆ. ಕೇರಳಕ್ಕೆ ತಲುಪಿದ ಕ್ರೈಸ್ತ ಮಿಷನರಿಗಳು ಮಲಯಾಳ ಭಾಷೆಯಲ್ಲಿ ಕೃತಿಗಳನ್ನು ರಚಿಸಿದರು. ಹದಿನೆಂಟನೆಯ ಶತಮಾನದಲ್ಲಿ ಕ್ರೈಸ್ತ ಮಿಶನರಿಗಳು ರಚಿಸಿದ ಕೃತಿಗಳನ್ನು ಕೆಳಗೆ ನೀಡಲಾಗಿದೆ.

- ಸಂಕ್ಷೇಪ ವೇದಾರ್ಥಂ
- ಅರ್‌ನೋಸ್ ಪಾದ್ರಿಯ ಪುತ್ತನ್ ಪಾನ
- ಪಾರೆಮಾಕ್ಕಲ್ ತೋಮಕತ್ತನಾರುಡೆ ವರ್ತಮಾನ ಪುಸ್ತಕಂ.

ಮಧ್ಯಕಾಲದಲ್ಲಿ ಕೇರಳದಲ್ಲಿ ತನ್ನದೇ ಆದ ಕಲಾರೂಪಗಳು ಹುಟ್ಟಿಕೊಂಡವು. ಆ ಕಾಲದ ಕಲಾರೂಪಗಳನ್ನು ಕೆಳಗೆ ನೀಡಲಾಗಿದೆ.


ಮೋಹಿನಿಯಾಟ್ಟಂ


ಕಥಕ್ಕಳಿ


ಓಟ್ಟಂತುಳ್ಳಲ್


ತೆಯ್ಯಂ



ಪಡಯಣಿ


ಒಪ್ಪನ


ಮಾರ್ಗಂಕಳಿ


ದಫ್‌ಮುಟ್ಟ್


ಪರಿಚಮುಟ್ಟುಕ್ಕಳಿ


ಕೂಡಿಯಾಟ್ಟಂ



ಚಾಕ್ಯಾರ್‌ಕ್ಕೂತ್ತ್


ಚವಿಟ್ಟ್‌ನಾಟಕಂ

ಆಯುರ್ವೇದ, ಗಣಿತಶಾಸ್ತ್ರ, ಜ್ಯೋತಿಶ್ಶಾಸ್ತ್ರ, ವಾಸ್ತುಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲಿಯೂ ಮಧ್ಯಕಾಲದಲ್ಲಿ ಪ್ರಗತಿಯಾಯಿತು. ಗಣಿತಶಾಸ್ತ್ರ ಮತ್ತು ಜ್ಯೋತಿಶ್ಶಾಸ್ತ್ರದಲ್ಲಿ ಆಳವಾದ ನಿರೀಕ್ಷಣೆಗಳು ಮತ್ತು ಸಂಶೋಧನೆಗಳು ಮಧ್ಯಕಾಲದಲ್ಲಿ ನಡೆದುವು. ಶಂಕರನಾರಾಯಣನ್, ಸಂಗ್ರಾಮ ಮಾಧವನ್, ವಡಶ್ಶೇರಿ ಪರಮೇಶ್ವರನ್, ನೀಲಕಂಠ ಸೋಮಯಾಜಿ ಮುಂತಾದವರು ಆ ಕಾಲದ ಪ್ರಧಾನ ಗಣಿತ ಶಾಸ್ತ್ರಜ್ಞರಾಗಿದ್ದರು.

ಮಧ್ಯಕಾಲದಲ್ಲಿ ಮಲಯಾಳ ಭಾಷೆಯಲ್ಲಿರುವ ಸಾಹಿತ್ಯ ಕೃತಿಗಳು, ಮಲಯಾಳಿಗಳ ಕಲಾರೂಪಗಳು ಪ್ರಗತಿ ಹೊಂದಿದವು. ಇದೇ ಕಾಲದಲ್ಲಿ ಸಾಮಾಜಿಕ, ಆರ್ಥಿಕ, ಸಂಸ್ಥೆಗಳು ಅಸ್ತಿತ್ವಕ್ಕೆ ಬಂದುವು ಹಾಗೂ ವಿಜ್ಞಾನವು ಬೆಳವಣಿಗೆ ಹೊಂದಿತು. ಸಂಕ್ಷಿಪ್ತವಾಗಿ ಹೇಳುವುದಾದರೆ ಕೇರಳ ಸಂಸ್ಕೃತಿಯ ವಿಶೇಷತೆಯು ರೂಪುಗೊಂಡುದು ಮಧ್ಯಕಾಲದಲ್ಲಾಗಿದೆ.

**ಕೇರಳದ ಸಂಸ್ಕೃತಿಯು ರೂಪುಗೊಳ್ಳುವಲ್ಲಿ ಮಧ್ಯಕಾಲವು ನಿರ್ಣಾಯಕ ಪಾತ್ರವಹಿಸಿದೆ. ಈ ಹೇಳಿಕೆಯನ್ನು ಸಮರ್ಥಿಸಿರಿ.**




## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ವಸಾಹತುಶಾಹಿತ್ವಕ್ಕಿಂತ ಮೊದಲು ಕೇರಳದಲ್ಲಿ ಅಸ್ತಿತ್ವದಲ್ಲಿದ್ದ ಆಡಳಿತ ವ್ಯವಸ್ಥೆಯ ಕುರಿತು ತಿಳಿದುಕೊಳ್ಳುವುದು.
- ಭೂಮಿಯ ಒಡೆತನದ ಹಕ್ಕು ಹೇಗೆ ರೂಪುಗೊಂಡಿತು ಎಂದು ತಿಳಿದುಕೊಳ್ಳುವುದು.
- ಬಯಲಿನಂತೆಯೇ ಹಿತ್ತಿಲು, ಗುಡ್ಡ ಪ್ರದೇಶಗಳು ಪ್ರಧಾನ ಕೃಷಿ ಸ್ಥಳಗಳಾಗಿತ್ತೆಂದು ತಿಳಿದುಕೊಳ್ಳುವುದು.
- ಪರಂಪರಾಗತ ಉದ್ಯೋಗ ಒಕ್ಕೂಟಗಳು ನಂತರದಲ್ಲಿ ಜಾತಿಗಳಾಗಿ ಬದಲಾದುದು ಹೇಗೆಂದು ವಿಶ್ಲೇಷಿಸುವುದು.
- ಕೇರಳದ ಸಾಂಸ್ಕೃತಿಕ ಸಮನ್ವಯವನ್ನು ತಿಳಿದುಕೊಳ್ಳುವುದು.

- ಜಾತಿ ಮತಗಳ ಆಧಾರದಲ್ಲಿ ಕೇರಳದ ಸಮಾಜವನ್ನು ವರ್ಗೀಕರಿಸಿ, ಸರಕಾರಿ ದಾಖಲೆಯಲ್ಲಿ ಸೇರಿಸಿದ್ದು ಬ್ರಿಟೀಷರ ಕಾಲದಲ್ಲಾಗಿತ್ತೆಂದು ತಿಳಿದುಕೊಳ್ಳುವುದು.
- ಮಧ್ಯಕಾಲದ ಸಮಾಜದಲ್ಲಿದ್ದ ನಿಯಮಗಳ ಕುರಿತು ವಿಶದೀಕರಿಸುವುದು.
- ಮಲಯಾಳ ಭಾಷೆ, ಸಾಹಿತ್ಯ, ಕಲೆ ಮತ್ತು ವಿಜ್ಞಾನದ ಬೆಳವಣಿಗೆಯನ್ನು ವಿಶ್ಲೇಷಿಸುವುದು.
- ಮಲಯಾಳಂ ಮಾತೃಭಾಷೆಯಾಗಿರುವ ಭೂಪ್ರದೇಶವಾಗಿ ಕೇರಳವು ರೂಪುಗೊಂಡುದು ಮಧ್ಯಕಾಲದಲ್ಲಾಗಿದೆ ಎಂದು ತಿಳಿದುಕೊಳ್ಳುವುದು.

## ಮೌಲ್ಯನಿರ್ಣಯ ಮಾಡುವ

- ಮಧ್ಯಕಾಲದ ಆಡಳಿತ ವ್ಯವಸ್ಥೆಯ ಕುರಿತು ಟಿಪ್ಪಣಿ ತಯಾರಿಸಿರಿ.
- ಕೃಷಿಗ್ರಾಮಗಳ ಬೆಳವಣಿಗೆಯು ಜಾತಿ ವ್ಯವಸ್ಥೆಯನ್ನು ಸೃಷ್ಟಿಸಿದ್ದು ಹೇಗೆಂದು ಅವಲೋಕಿಸಿರಿ.
- ಕೇರಳದ ಸಾಂಸ್ಕೃತಿಕ ಸಮನ್ವಯಕ್ಕೆ ವ್ಯಾಪಾರಿಗಳು ಹೇಗೆ ಸಹಾಯ ಮಾಡಿದರೆಂದು ವಿವರಿಸಿರಿ.
- ಮಲಯಾಳ ಭಾಷೆ, ಸಾಹಿತ್ಯ, ಕಲಾರೂಪ, ವಿಜ್ಞಾನಗಳು ಮಧ್ಯಕಾಲದಲ್ಲಿ ಪ್ರಗತಿಯನ್ನು ಹೊಂದಿದವು. ಸಮರ್ಥಿಸಿರಿ.

## ಮುಂದುವರಿದ ಚಟುವಟಿಕೆಗಳು

- ಮಧ್ಯಕಾಲ ಕೇರಳದ ರಾಜಕೀಯ ಭೂಪಟವನ್ನು ರಚಿಸಿರಿ.
- ಕೇರಳದ ಕೃಷಿ ಬೆಳೆಗಳ ಮತ್ತು ಅವುಗಳಿಗೆ ಸಂಬಂಧಿಸಿದ ಕೃಷಿ ಒಕ್ಕೂಟಗಳ ಕುರಿತು ಹಾಗೂ ಅವರ ವಾಸಸ್ಥಳಗಳ ಹೆಸರುಗಳ ಕುರಿತು ಅನ್ವೇಷಣಾ ಟಿಪ್ಪಣಿ ತಯಾರಿಸಿರಿ.
- ಮಧ್ಯಕಾಲದ ವ್ಯಾಪಾರ ಸಂಬಂಧಗಳು ಸಾಂಸ್ಕೃತಿಕ ಸಮನ್ವಯತೆಗೆ ಹೇಗೆ ಕಾರಣವಾಯಿತೆಂದು ಕಂಡುಕೊಳ್ಳಿರಿ.
- ಮಲಯಾಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮಧ್ಯಕಾಲದಲ್ಲುಂಟಾದ ಪ್ರಗತಿಯನ್ನು ಗ್ರಂಥಾಲಯದ ಸಹಾಯದಿಂದ ತಿಳಿದುಕೊಂಡು ಪ್ರಬಂಧ ತಯಾರಿಸಿರಿ.
- ಪ್ರಾದೇಶಿಕವಾಗಿ ಪ್ರಚಾರದಲ್ಲಿರುವ ಬಾಯ್ದೆರೆ ಹಾಡುಗಳನ್ನು ಮತ್ತು ಕಥೆಗಳನ್ನು ಸಂಗ್ರಹಿಸಿರಿ.
- ಮಧ್ಯಕಾಲ ಕಲಾರೂಪಗಳ ಚಿತ್ರಗಳನ್ನು ಸಂಗ್ರಹಿಸಿ ಐ.ಸಿ.ಟಿ. ಸಾಧ್ಯತೆಯನ್ನು ಬಳಸಿ ಡಿಜಿಟಲ್ ಆಲ್ಬಂ ಒಂದನ್ನು ತಯಾರಿಸಿರಿ.



ಅಧ್ಯಾಯ

# 07

# ಚುನಾವಣೆ ಹಾಗೂ ಪ್ರಜಾಪ್ರಭುತ್ವ

## ಮೊದಲ ವೋಟರ್ ನೆಗಿ ಇಂದು ಪುನಃ ಮತಗಟ್ಟೆಗೆ

**ಕಿಣಾರ್ (ಹಿಮಾಚಲಪ್ರದೇಶ)** ಹಿಮಾಚಲಪ್ರದೇಶದ ಕೀಣಾರಿನ ಕಲ್ಪ ಮತಗಟ್ಟೆಯು ಓರ್ವ ವಿ.ಐ.ಪಿ. ಮತದಾರನನ್ನು ಕಾಯುತ್ತಿದೆ. ಶ್ಯಾಂಸರಣ್ ನೆಗಿ ಎಂಬ 97 ವರ್ಷದವರನ್ನು. 1951 ಒಕ್ಟೋಬರ್ 25ಕ್ಕೆ ಅವರು ಚಲಾಯಿಸಿದ ಮತವು ಸ್ವತಂತ್ರ ಭಾರತದ ಮೊದಲ ಮತವಾಗಿದೆ. ಸ್ವತಂತ್ರ ಭಾರತದಲ್ಲಿ ಮೊದಲ ಚುನಾವಣೆ ನಡೆದುದು 1952 ರಲ್ಲಾಗಿದೆ. ಆದರೆ ಸಮುದ್ರ ಮಟ್ಟದಿಂದ 2759 ಮೀಟರ್ ಉನ್ನತಿಯಲ್ಲಿ ಸದಾ ಕಾಲವೂ ಹಿಮಬೀಳುತ್ತಿರುವ ಕಿಣಾರಿನಲ್ಲಿ ಆರು ತಿಂಗಳು ಮೊದಲೇ ಚುನಾವಣೆ



ನಡೆಸಲು ಸರಕಾರವು ತೀರ್ಮಾನಿಸಿತು. ಹೀಗೆ ನೆಗಿ ಮೊದಲ ಮತವನ್ನು ದಾಖಲಿಸಿದುದು ಚರಿತ್ರೆಯಲ್ಲಿ ಸ್ಥಾನವನ್ನು ಪಡೆಯಿತು. "ಮತ ಚಲಾಯಿಸಿ ಹೊರ ಬರುವಾಗ ನಮಗೆ ಮೇರೆ ಇಲ್ಲದ ಆನಂದವೂ ಅಭಿಮಾನವೂ ಸ್ವಾತಂತ್ರ್ಯ ಪಡೆದುದರ ಆವೇಶದಂತೆ ಆಗಿತ್ತು." ಶ್ಯಾಂಸರಣ್ ನೆಗಿ ಮೇಲಿನ ರೀತಿಯಲ್ಲಿ ಹೇಳಿದರು. ಆ ಬಳಿಕ 27 ಚುನಾವಣೆಗಳಲ್ಲಿ ಮತದಾನ ಮಾಡಿದ ಅವರು ಈ ಬಾರಿಯೂ ಮತನೀಡುವ ಹಕ್ಕನ್ನು ಹಾಳು ಮಾಡೆನೆಂಬ ದೃಢ ನಿರ್ಧಾರದಲ್ಲಿದ್ದರು. 2014ರ ಲೋಕಸಭಾ ಚುನಾವಣೆಯ ಪ್ರಚಾರದ ಅಂಬಾಸಿಡರ್ ನೆಗಿಯಾಗಿದ್ದರು. ಶರೀರ ಮತ್ತು ಮುಖವು ಸುಕ್ಕುಗಟ್ಟಿದ್ದರೂ ಯುವಜನಾಂಗಕ್ಕೆ ಅವರಿಗೆ ಹೇಳಲಿಕ್ಕಿರುವುದು ಇಂತಿದೆ. "ಮತದಾನ ಮಾಡದಿರಬಾರದು. ರಾಷ್ಟ್ರಕ್ಕಾಗಿ ನಾವು ನಿರ್ವಹಿಸಲೇಬೇಕಾದ ಕರ್ತವ್ಯ ಇದಾಗಿದೆ."

ಭಾರತದಲ್ಲಿ ಮೊದಲ ಮತದಾನ ಮಾಡಿದ ಶ್ಯಾಂಸರಣ್ ನೆಗಿ ಮತದಾರರಿಗೆ ನೀಡುವ ಸಂದೇಶವನ್ನು ಮೇಲಿನ ಪತ್ರಿಕಾವಾರ್ತೆಯಲ್ಲಿ ಪ್ರತಿಪಾದಿಸಲಾಗಿದೆ. ಚುನಾವಣೆಯಲ್ಲಿ ಮತದಾನದ ಹಕ್ಕು ವಿನಿಯೋಗಿಸುವುದರ ಪ್ರಾಧಾನ್ಯವು ಕುರಿತು ನೆಗಿಯವರ ಮಾತುಗಳಿಂದ ಸ್ಪಷ್ಟವಾಯಿತಲ್ಲವೇ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ನಿರ್ದಿಷ್ಟ ಕಾಲಗಳ ಅಂತರದಲ್ಲಿ ಚುನಾವಣೆ ನಡೆಯುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯು ಜನಪ್ರತಿನಿಧಿಗಳನ್ನು ಆಯ್ಕೆಮಾಡಲಿರುವ ವ್ಯವಸ್ಥೆಯಾಗಿದೆ. ಚುನಾವಣೆ ಇಲ್ಲದೆ ಪ್ರಜಾಪ್ರಭುತ್ವ ವ್ಯವಸ್ಥೆ ನೆಲೆನಿಲ್ಲಲಾರದು.

ಪ್ರಜಾಪ್ರಭುತ್ವದಲ್ಲಿ ಚುನಾವಣೆಗಿರುವ ಪ್ರಾಧಾನ್ಯವನ್ನು ಪರಿಶೀಲಿಸಿರಿ.

- ಚುನಾವಣೆಗಳು ಜನರ ಅಭಿಲಾಷೆಯನ್ನು ಪ್ರತಿಫಲಿಸುತ್ತವೆ.
- ಚುನಾವಣೆಯ ಮೂಲಕ ಜನರಿಗೆ ಇಷ್ಟವಿರುವ ಆಡಳಿತಾಧಿಕಾರಿಗಳನ್ನು ಆಯ್ಕೆಮಾಡಲು ಸಾಧ್ಯವಿದೆ.
- ಜನರಿಗೆ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮತ್ತು ಪ್ರತಿಕ್ರಯಿಸಲು ಸಾಧ್ಯವಿದೆ.
- ಆಡಳಿತಾಧಿಕಾರಿಗಳು ಜನರ ಅಭಿಲಾಷೆಯನ್ನು ಅರಿತು ಕಾರ್ಯಪ್ರವೃತ್ತರಾಗಲು ಚುನಾವಣೆಯು ಕಾರಣವಾಗುತ್ತದೆ.



**ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳು ಅನಿವಾರ್ಯವಾಗಿವೆ. ಸಮರ್ಥಿಸಿರಿ.**

ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳಿಗಿರುವ ಪ್ರಾಧಾನ್ಯವನ್ನು ತಿಳಿದುಕೊಂಡಿರಲ್ಲವೇ. ಪ್ರಜಾಪ್ರಭುತ್ವ ಆಡಳಿತಕ್ರಮವನ್ನು ಜಗತ್ತಿನ ಬಹುಪಾಲು ರಾಷ್ಟ್ರಗಳೂ ಸ್ವೀಕರಿಸಿವೆ. ಆದರೆ ಈ ರಾಷ್ಟ್ರಗಳಲ್ಲೆಲ್ಲ ಆಯ್ಕೆ ಮಾಡಿರುವ ಚುನಾವಣಾ ವ್ಯವಸ್ಥೆಗಳೂ ಸಂಪ್ರದಾಯಗಳೂ ವ್ಯತ್ಯಸ್ತವಾಗಿದೆ. ಕೆಲವು ರಾಷ್ಟ್ರಗಳೆಲ್ಲ ಪ್ರತ್ಯಕ್ಷ ಚುನಾವಣೆ ಹಾಗೂ ಇತರ ಕೆಲವು ರಾಷ್ಟ್ರಗಳಲ್ಲಿ ಪರೋಕ್ಷ ಚುನಾವಣೆಯನ್ನು ಸ್ವೀಕರಿಸಿದ್ದಾರೆ. ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ವಿವಿಧ ಪ್ರಾತಿನಿಧ್ಯ ಸಂಸ್ಥೆಗಳಿಗೆ ಆಯ್ಕೆಮಾಡಿಕೊಂಡಿರುವ ಚುನಾವಣಾ ರೀತಿಗಳನ್ನು ಕೆಳಗೆ ಕೊಟ್ಟಿರುವ ಚಾರ್ಟನಲ್ಲಿ ಗಮನಿಸಿರಿ.

**ಚುನಾವಣಾ ವಿಧಾನಗಳು**

- **ಪ್ರತ್ಯಕ್ಷ ಚುನಾವಣೆ**
  - ಲೋಕಸಭೆ
  - ಪ್ರಾಂತ್ಯದ ಶಾಸನಸಭೆ
  - ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು
- **ಪರೋಕ್ಷ ಚುನಾವಣೆ**
  - ರಾಷ್ಟ್ರಪತಿ
  - ಉಪ ರಾಷ್ಟ್ರಪತಿ
  - ರಾಜ್ಯಸಭೆ



**ರಹಸ್ಯ ಮತಪತ್ರ (Secret Ballot)**

ಭಾರತದಲ್ಲಿ ಚುನಾವಣೆಗಳಲ್ಲಿ ಮತದಾನ ಮಾಡುವವರು ಮತದಾನದ ಹಕ್ಕನ್ನು ಚಲಾಯಿಸುವುದು ರಹಸ್ಯ ಮತದಾನದ ಮೂಲಕವಾಗಿದೆ. ಇದರಿಂದಾಗಿ ಇತರರು ಯಾರೂ ತಿಳಿಯದಂತೆ ರಹಸ್ಯವಾಗಿ ಮತದಾನ ಮಾಡಲು ಮತದಾರನಿಗೆ ಸಾಧ್ಯವಾಗುತ್ತದೆ. ಮತದಾರರಿಗೆ ನೀಡುವ ಮತಪತ್ರದಲ್ಲಿ ತನಗಿಷ್ಟವಿರುವ ಅಭ್ಯರ್ಥಿಗೆ ಮತಚಲಾಯಿಸುತ್ತಾರೆ.

ಲೋಕಸಭೆ, ಪ್ರಾಂತ್ಯದ ಶಾಸನಸಭೆ, ಪಂಚಾಯತ್, ನಗರಾಡಳಿತ ಸಂಸ್ಥೆಗಳಿಗಿರುವ ಪ್ರತಿನಿಧಿಗಳನ್ನು ನಾವು ಹೇಗೆ ಆಯ್ಕೆಮಾಡುವುದು. ಜನರು ನೇರವಾಗಿ ಅವರ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. ಈ ವ್ಯವಸ್ಥೆಯನ್ನು ಪ್ರತ್ಯಕ್ಷ ಚುನಾವಣಾ ರೀತಿ ಎಂದು ಕರೆಯುತ್ತಾರೆ. ಆದರೆ ರಾಷ್ಟ್ರಪತಿ, ಉಪರಾಷ್ಟ್ರಪತಿ, ರಾಜ್ಯಸಭಾ ಸದಸ್ಯರು

ಮುಂತಾದವರ ಚುನಾವಣೆಗಳಲ್ಲಿ ಜನರು ನೇರವಾಗಿ ಭಾಗವಹಿಸುತ್ತಾರೆಯೇ? ಜನರು ಆಯ್ಕೆಮಾಡಿ ಕಳುಹಿಸಿದ ಪ್ರತಿನಿಧಿಗಳು ಇವರನ್ನು ಆಯ್ಕೆಮಾಡುತ್ತಾರೆ. ಈ ರೀತಿಯಲ್ಲಿ ಆಯ್ಕೆಯಾದ ಜನಪ್ರತಿನಿಧಿಗಳು ಮತದಾನದ ಮೂಲಕ ತಮ್ಮ ಪ್ರತಿನಿಧಿಗಳನ್ನು ಆಯ್ಕೆಮಾಡುವ ವಿಧಾನವು ಪರೋಕ್ಷ ಚುನಾವಣಾ ವಿಧಾನವಾಗಿದೆ.

ಪ್ರತ್ಯಕ್ಷ-ಪರೋಕ್ಷ ಚುನಾವಣೆಗಳಿಗೆ ಕೆಲವು ಉದಾಹರಣೆಗಳನ್ನು ಕೊಡಲಾಗಿದೆ. ಹೆಚ್ಚಿನ ಉದಾಹರಣೆಗಳನ್ನು ಕಂಡುಕೊಂಡು ಪಟ್ಟಿಮಾಡಿರಿ.



| ಪ್ರತ್ಯಕ್ಷ ಚುನಾವಣೆ | ಪರೋಕ್ಷ ಚುನಾವಣೆ |
|---|---|
| ♦ ತರಗತಿಯ ಪ್ರತಿನಿಧಿ | ♦ ಶಾಲಾ ಚೆಯರ್‌ಮೇನ್ |
| ♦ ಪಂಚಾಯತ್ ಸದಸ್ಯ | ♦ ಪಂಚಾಯತ್ ಅಧ್ಯಕ್ಷರು |
| ♦ | ♦ |
| ♦ | ♦ |
| ♦ | ♦ |

## ಸರಳ ಬಹುಮತ ವ್ಯವಸ್ಥೆ

ಪ್ರತ್ಯಕ್ಷ-ಪರೋಕ್ಷ ಚುನಾವಣಾ ವಿಧಾನಗಳನ್ನು ತಿಳಿದಿರಲ್ಲವೇ. ಭಾರತದಲ್ಲಿ ಪ್ರತ್ಯಕ್ಷ ಚುನಾವಣಾ ವಿಧಾನವನ್ನು ನಡೆಸುತ್ತಿರುವ ಲೋಕಸಭೆ, ವಿಧಾನಸಭೆಗಳು, ಪಂಚಾಯತ್-ನಗರಾಡಳಿತ ಸಂಸ್ಥೆಗಳು ಎಂಬಿವುಗಳಿಗೆ ಚುನಾವಣೆಯಲ್ಲಿ ಸರಳ ಬಹುಮತ ಸಂಪ್ರದಾಯವನ್ನು ನಾವು ಸ್ವೀಕರಿಸಿದ್ದೇವೆ.. ಈ ಸಂಪ್ರದಾಯಕ್ಕನುಸಾರವಾಗಿ ಚುನಾವಣೆ ನಡೆಸುವುದು ಕೆಳಗೆ ಹೇಳಿರುವ ರೀತಿಯಲ್ಲಾಗಿದೆ.

- ದೇಶವನ್ನು ವಿವಿಧ ಮತದಾನ ಕ್ಷೇತ್ರಗಳಾಗಿ ವಿಂಗಡಿಸಲಾಗುತ್ತದೆ.
- ಒಂದು ವಿಧಾನ ಸಭಾ ಕ್ಷೇತ್ರದಿಂದ ಓರ್ವ ಪ್ರತಿನಿಧಿಯನ್ನು ಚುನಾಯಿಸುತ್ತಾರೆ.
- ಎಷ್ಟು ಅಭ್ಯರ್ಥಿಗಳಿಗೆ ಬೇಕಾದರೂ ಸ್ಪರ್ಧಿಸಬಹುದು.
- ಇತರ ಅಭ್ಯರ್ಥಿಗಳಿಗಿಂತ ಹೆಚ್ಚು ಮತ ಲಭಿಸುವ ಅಭ್ಯರ್ಥಿಯು ಆಯ್ಕೆಯಾಗುತ್ತಾರೆ.

ಸರಳ ಹಾಗೂ ಸುಲಭದಲ್ಲಿ ಜಾರಿಗೊಳಿಸಲು ಸಾಧ್ಯವಾಗುವ ಚುನಾವಣಾ ರೀತಿಯು ಸರಳ ಬಹುಮತ ವ್ಯವಸ್ಥೆಯಾಗಿದೆ. ಆದ್ದರಿಂದಲೇ ಜಗತ್ತಿನ ಬಹುತೇಕ ಪ್ರಜಾಪ್ರಭುತ್ವ ದೇಶಗಳಲ್ಲಿ ಸರಳ ಬಹುಮತ ವ್ಯವಸ್ಥೆ ಅಸ್ತಿತ್ವದಲ್ಲಿದೆ.

ಬಹುಮತ ವ್ಯವಸ್ಥೆಯ ವಿಶೇಷತೆಗಳನ್ನು ತಿಳಿದುಕೊಳ್ಳಲು ತರಗತಿಯಲ್ಲಿ ಒಂದು ಮಾದರಿ ಚುನಾವಣೆಯನ್ನು ಸಂಘಟಿಸಬೇಕು.




## ಅನುಪಾತಿಕ ಪ್ರಾತಿನಿಧ್ಯ ವ್ಯವಸ್ಥೆ

ಭಾರತದಲ್ಲಿ ಪರೋಕ್ಷ ಚುನಾವಣಾ ರೀತಿಯನ್ನು ಅನುಸರಿಸಿ ನಡೆಸುವ ರಾಷ್ಟ್ರಪತಿ, ಉಪರಾಷ್ಟ್ರಪತಿ, ರಾಜ್ಯಸಭೆಯ ಚುನಾವಣೆಗಳಲ್ಲಿ ಅನುಪಾತಿಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಸ್ವೀಕರಿಸಿದ್ದೇವೆ. ಭಾರತದಲ್ಲಿ ಪ್ರಾಂತ್ಯಗಳಿಂದ ರಾಜ್ಯಸಭೆಗೆ ಸದಸ್ಯರನ್ನು ಆಯ್ಕೆಮಾಡುವುದು

ಪ್ರಾಂತ್ಯಗಳಲ್ಲಿನ ಎಂ.ಎಲ್.ಎ. ಗಳಾಗಿದ್ದಾರೆ. ಪ್ರಾಂತ್ಯ-ಶಾಸನ ನಿರ್ಮಾಣ ಸಭೆಯಲ್ಲಿ ಪ್ರತಿಯೊಂದು ರಾಜಕೀಯ ಪಕ್ಷಗಳಿಗಿರುವ ಸಂಖ್ಯಾಬಲಕ್ಕೆ ಅನುಪಾತಿಕವಾಗಿ ಅವರಿಗೆ ರಾಜ್ಯಸಭೆಯ ಪ್ರತಿನಿಧಿಗಳನ್ನು ಆರಿಸಲು ಸಾಧ್ಯವಿದೆ.

## ವಿಧಾನಸಭಾ ಕ್ಷೇತ್ರಗಳು







ಕೇರಳದ ಲೋಕಸಭಾಕ್ಷೇತ್ರಗಳ ಹಾಗೂ ಕಾಸರಗೋಡು ಜಿಲ್ಲೆಯ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಭೂಪಟವನ್ನು ನೀಡಲಾಗಿದೆ. ನಮ್ಮ ಪ್ರಾಂತ್ಯದಿಂದ ಲೋಕಸಭೆಗೆ ಆಯ್ಕೆಯಾಗುವ ಎಂ.ಪಿ. ಗಳು ಹಾಗೂ ವಿಧಾನಸಭೆಗೆ ಆಯ್ಕೆಯಾಗುವ ಎಂ.ಎಲ್.ಎ. ಗಳು ಒಂದೇ ಕ್ಷೇತ್ರವನ್ನು ಪ್ರತಿನಿಧೀಕರಿಸುವರೇ. ಅವರು ವ್ಯತ್ಯಸ್ತ ಕ್ಷೇತ್ರಗಳನ್ನು ಪ್ರತಿನಿಧೀಕರಿಸತ್ತಾರೆ. ಜನಪ್ರತಿನಿಧಿಗಳನ್ನು ಆರಿಸುವುದಕ್ಕಾಗಿ ಪ್ರತಿಯೊಂದು ಪ್ರಾಂತ್ಯಗಳನ್ನೂ ಕೇಂದ್ರಾಡಳಿತ ಪ್ರದೇಶಗಳನ್ನೂ ಸಣ್ಣ ಭೂಪ್ರದೇಶ ವಲಯವಾಗಿ ವಿಭಾಗಿಸಲಾಗಿದೆ. ಈ ಭೂಪ್ರದೇಶ ವಲಯಗಳೇ ವಿಧಾನಸಭಾ ಕ್ಷೇತ್ರಗಳಾಗಿವೆ.. ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲೂ ಸಾಮಾನ್ಯವಾಗಿ ಸಮಾನ ಜನಸಂಖ್ಯೆಯಿರುತ್ತದೆ. ಲೋಕಸಭಾ ಚುನಾವಣೆಗಾಗಿ ನಮ್ಮ ರಾಷ್ಟ್ರವನ್ನು ಜನಸಂಖ್ಯೆಯ ಆಧಾರದಲ್ಲಿ 543 ಲೋಕಸಭಾ ಕ್ಷೇತ್ರಗಳಾಗಿ ವಿಂಗಡಿಸಲಾಗಿದೆ. ಒಂದು ಲೋಕಸಭಾ ಕ್ಷೇತ್ರದಿಂದ ಓರ್ವ ಪ್ರತಿನಿಧಿಯನ್ನು ನಾವು ಆಯ್ಕೆಮಾಡುತ್ತೇವೆ. ಅಂತೆಯೇ ಪ್ರತಿಯೊಂದು ರಾಜ್ಯಗಳಲ್ಲೂ ಜನಸಂಖ್ಯೆಯ ಆಧಾರದಲ್ಲಿ ವಿವಿಧ ವಿಧಾನಸಭಾ ಕ್ಷೇತ್ರಗಳಿವೆ. ನಮ್ಮ ಪ್ರಾಂತ್ಯದಲ್ಲಿ ಈಗ 20 ಲೋಕಸಭಾ ಕ್ಷೇತ್ರಗಳು ಮತ್ತು 140 ವಿಧಾನಸಭಾ ಕ್ಷೇತ್ರಗಳು ಇವೆ.

**ಕೇರಳದ ಈಗಿರುವ ಲೋಕಸಭಾಕ್ಷೇತ್ರಗಳ ಹೆಸರುಗಳನ್ನು ಭೂಪಟದಿಂದ ಕಂಡುಹಿಡಿದು ಪಟ್ಟಿ ಮಾಡಿರಿ.**

## ಮೀಸಲು ಕ್ಷೇತ್ರಗಳು

ಲೋಕಸಭೆ, ವಿಧಾನಸಭಾ ಚುನಾವಣೆಯಲ್ಲಿ ನಾವು ಸರಳ ಬಹುಮತದ ವ್ಯವಸ್ಥೆಯನ್ನು ಮುಂದುವರಿಸುವುದರಿಂದ ಪ್ರಬಲ ವಿಭಾಗದವರು ಎಲ್ಲ ಕ್ಷೇತ್ರಗಳಲ್ಲೂ ಜಯಗಳಿಸಲು ಸಾಧ್ಯತೆಯಿದೆ. ಆದರೆ ಸಮಾಜದ ದುರ್ಬಲರ ಹಾಗೂ ದಬ್ಬಾಳಿಕೆಗೊಳಪಟ್ಟ ವಿಭಾಗದವರ ಪ್ರಾತಿನಿಧ್ಯವು ಲೋಕಸಭೆಯಲ್ಲೂ ವಿಧಾನ ಸಭೆಗಳಲ್ಲೂ ಖಚಿತಪಡಿಸಬೇಡವೇ. ಸಂವಿಧಾನ ರಚನಾಕಾರರು ಲೋಕಸಭೆಯಲ್ಲೂ ವಿಧಾನಸಭೆಗಳಲ್ಲೂ ಇಂತಹ ವಿಭಾಗದವರ ಪ್ರಾತಿನಿಧ್ಯವನ್ನು

ಖಚಿತಪಡಿಸುವುದಕ್ಕಾಗಿ ಮೀಸಲಾತಿ ಕ್ಷೇತ್ರಗಳು ಎಂಬ ತತ್ವವನ್ನು ಜ್ಯಾರಿಗೊಳಿಸಿದರು. ಇದರ ಪ್ರಕಾರ ಭಾರತದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗದ ಜನರಿಗೆ ಲೋಕಸಭೆಯಲ್ಲೂ ವಿಧಾನ ಸಭೆಗಳಲ್ಲೂ ಜನಸಂಖ್ಯೆಗೆ ಅನುಸಾರವಾಗಿ ಮತದಾನ ಕ್ಷೇತ್ರಗಳನ್ನು ಮೀಸಲಿರಿಸಲಾಗಿದೆ. ಮೀಸಲು ಕ್ಷೇತ್ರಗಳಲ್ಲಿ ಆ ಸಮುದಾಯದವರಿಗೆ ಮಾತ್ರವೇ ಸ್ಪರ್ಧಿಸಲು ಸಾಧ್ಯವಾಗುತ್ತದೆ. ಆದರೆ ಎಲ್ಲ ವಿಭಾಗದ ಜನರಿಗೂ ಮತದಾನಮಾಡಲು ಹಕ್ಕು ಇದೆ. ಲೋಕಸಭೆಯಲ್ಲಿ 84 ಕ್ಷೇತ್ರಗಳನ್ನು ಪರಿಶಿಷ್ಟಜಾತಿಯವರಿಗೂ 47 ಕ್ಷೇತ್ರವನ್ನು ಪರಿಶಿಷ್ಟವರ್ಗದವರಿಗೂ ಈಗ ಮೀಸರಿಸಲಾಗಿದೆ.


ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ನೀಡಿರುವಂತೆ ಮೀಸಲಾತಿಯನ್ನು ಇತರ ದುರ್ಬಲ ವಿಭಾಗದವರಿಗೂ ಸ್ತ್ರೀಯರಿಗೂ ನೀಡಬೇಕೆ? ಪ್ರಸ್ತುತ ವಿಷಯಕ್ಕೆ ಸಂಬಂಧಿಸಿ ತರಗತಿಯಲ್ಲಿ ಒಂದು ಚರ್ಚೆಯನ್ನು ನಡೆಸಿರಿ.



## ಸ್ವತಂತ್ರವೂ ನೀತಿಯುಕ್ತವೂ ಆದ ಚುನಾವಣೆ

ಸ್ವತಂತ್ರ ಹಾಗೂ ನೀತಿಯುಕ್ತವಾದ ಚುನಾವಣಾ ವ್ಯವಸ್ಥೆಯು ಚುನಾವಣೆಗಳನ್ನು ಪಾರದರ್ಶಕ ಹಾಗೂ ನಿಷ್ಪಕ್ಷವಾಗಿ ನಡೆಸಲು ಅನಿವಾರ್ಯವಾಗಿದೆ. ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು, ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಹಕ್ಕು, ಸ್ವತಂತ್ರ ಚುನಾವಣಾ ಕಮಿಶನ್ ಮುಂತಾದುವು ಈ ಉದ್ದೇಶಗಳನ್ನು ಇಟ್ಟುಕೊಂಡು ಭಾರತದ ಸಂವಿಧಾನದಲ್ಲಿ ಸೇರಿಸಲಾಗಿದೆ.

## ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು




ನೀಡಿರುವ ಪ್ರಕಟಣೆಯನ್ನು ಓದಿದಿರಲ್ಲವೇ. ಶ್ರೀಮೂಲಂ ಪ್ರಜಾಸಭಾ ಚುನಾವಣೆಗೆ ಮತದಾನದ ಹಕ್ಕಿನ ಕುರಿತು ಯಾವೆಲ್ಲ ಸೂಚನೆಗಳು ಇದರಿಂದ ಲಭಿಸುತ್ತದೆ?

- 
- 
- 

ತಿರುವಾಂಕೂರಿನಲ್ಲಿ ಹಿಂದೆ ಜಾರಿಯಲ್ಲಿದ್ದ ಮತದಾನದ ಹಕ್ಕಿನ ಅರ್ಹತೆಯನ್ನು ತಿಳಿದಿರಲ್ಲವೇ. ಇಂದು ಮತದಾನದ ಹಕ್ಕಿನ ಅರ್ಹತೆ ಯಾವುದು? ನಾವು ಪರಿಶೀಲಿಸುವ.



ಚಿತ್ರ ನಿರೀಕ್ಷಿಸಿರಿ. ರಾಷ್ಟ್ರದ ಮತದಾರರು ಮತದಾನದ ಹಕ್ಕನ್ನು ವಿನಿಯೋಗಿಸುವುದಕ್ಕಾಗಿ ಕಾದುನಿಂತಿದ್ದಾರೆ. ಮತದಾನದ ಹಕ್ಕು ಮತದಾನ ಮಾಡಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಹಕ್ಕು ಆಗಿದೆ. ಮತದಾರರು (Electors) ಮತದಾನ ಮಾಡಿ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. ಮತದಾನದ ಹಕ್ಕು ಎಂಬುದು ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ಪೌರರ ಭಾಗವಹಿಸುವಿಕೆಯನ್ನು ಖಚಿತಪಡಿಸುವುದಕ್ಕಿರುವ ಅತ್ಯುತ್ತಮ ಮಾರ್ಗವಾಗಿದೆ ಇಂದು ಭಾರತದಲ್ಲಿ ಮತದಾನದ ಹಕ್ಕು ಸಾರ್ವತ್ರಿಕವಾಗಿದೆ.

ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು ಎಂದರೆ  ಜಾತಿ, ಮತ, ವರ್ಗ, ಭಾಷೆ, ಲಿಂಗ, ಪ್ರದೇಶಗಳೆಂಬ ವ್ಯತ್ಯಾಸಗಳಿಲ್ಲದೆ ಪ್ರಾಯಪೂರ್ತಿಯಾದ ಎಲ್ಲರಿಗೂ ಚುನಾವಣೆಯಲ್ಲಿ ಮತದಾನ ಚಲಾಯಿಸಲಿರುವ ಹಕ್ಕಾಗಿದೆ. ಹದಿನೆಂಟು ವರ್ಷ ಪ್ರಾಯ ಪೂರ್ತಿಯಾದ ಎಲ್ಲರಿಗೂ ಭಾರತದಲ್ಲಿ ಮತದಾನದ ಹಕ್ಕಿಗೆ ಅರ್ಹತೆ ಇದೆ.

### ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು

- 1950 ಜನವರಿ 26 ಸಂವಿಧಾನವು ಜಾರಿಗೆ ಬಂದಂದಿನಿಂದ ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು ಜಾರಿಯಾಯಿತು.
- ಸಂವಿಧಾನದ ಪರಿಚ್ಛೇದ 326 ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕನ್ನು ತಿಳಿಸುತ್ತದೆ.
- 1989ರ ವರೆಗೆ ಮತದಾನದ ಹಕ್ಕಿಗಿರುವ ಪ್ರಾಯ – 21 ವಯಸ್ಸಾಗಿತ್ತು.
- 1989ರಲ್ಲಿ ಸಂವಿಧಾನದ 61ನೇ ತಿದ್ದುಪಡಿಯ ಪ್ರಕಾರ – ಮತದಾನದ ಪ್ರಾಯ 21 ವಯಸ್ಸಿನಿಂದ 18 ವರ್ಷಕ್ಕೆ ಇಳಿಸಲಾಯಿತು.

**ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕಿನ ಈಗಿರುವ ಅರ್ಹತೆಯನ್ನು ಬದಲಾಯಿಸಬೇಕೆ? ಪ್ರಸ್ತುತ ವಿಷಯದ ಕುರಿತು ತರಗತಿಯಲ್ಲಿ ಒಂದು ಚರ್ಚೆ ನಡೆಸಿರಿ.**

### ಬದಲಾಗುತ್ತಿರುವ ಮತದಾನದ ವ್ಯವಸ್ಥೆಗಳು



ಮೊದಲ ಸಾರ್ವಜನಿಕ ಚುನಾವಣೆಯ ಕಾಲದಿಂದ ನಾವು ಪ್ರಯೋಗಿಸಿದ ಮತದಾನದ ವ್ಯವಸ್ಥೆಯಲ್ಲಿ ಇಂದು ಹಲವು ರೀತಿಯ ಬದಲಾವಣೆಗಳು ಉಂಟಾಗಿದೆ. ಪ್ರತಿಯೋರ್ವ ಅಭ್ಯರ್ಥಿಗಳ ಹೆಸರು ಹಾಗೂ ಚುನಾವಣಾ ಚಿಹ್ನೆಯನ್ನು ಪ್ರದರ್ಶಿಸಿದ ಪ್ರತ್ಯೇಕ ಬ್ಯಾಲೆಟ್ ಪೆಟ್ಟಿಗೆಗಳನ್ನು ಪೋಲಿಂಗ್ ಬೂತಿನಲ್ಲಿ ಸಜ್ಜೀಕರಿಸಲಾಗುತ್ತಿತ್ತು. ಮತದಾನ ಮಾಡುವವರು ತಮಗೆ ಲಭಿಸುವ ಬರೆಯದಿರುವ ಬ್ಯಾಲೆಟ್ ಪೇಪರನ್ನು ತಮಗಿಷ್ಟವಿರುವ ಅಭ್ಯರ್ಥಿಗಳ ಬ್ಯಾಲೆಟ್ ಪೆಟ್ಟಿಗೆಯಲ್ಲಿ ನಿಕ್ಷೇಪಿಸುವ ಮತದಾನದ ವ್ಯವಸ್ಥೆಯು ಮೊದಲ ಎರಡು ಸಾರ್ವಜನಿಕ ಚುನಾವಣೆಗಳಲ್ಲಿ ಜಾರಿಯಲ್ಲಿತ್ತು.

ಮತದಾನ ಮಾಡುವವರು ಇಚ್ಛಿಸುವ ಅಭ್ಯರ್ಥಿಗೆ ಬ್ಯಾಲೆಟ್ ಪೇಪರಿನಲ್ಲಿ ಮತದಾನ ಮಾಡಿ ಪೋಲಿಂಗ್ ಬೂತಿನಲ್ಲಿ ಸ್ಥಾಪಿಸಿರುವ ಬ್ಯಾಲೆಟ್ ಪೆಟ್ಟಿಗೆಯಲ್ಲಿ ನಿಕ್ಷೇಪಿಸುವ ರೀತಿಯನ್ನು ಎರಡನೆಯ ಸಾರ್ವತ್ರಿಕ ಚುನಾವಣೆಯ ಬಳಿಕ 40 ವರ್ಷಗಳವರೆಗೆ ಸ್ವೀಕರಿಸಲಾಯಿತು.



1990ರ ಕೊನೆಗೆ ಚುನಾವಣಾ ಆಯೋಗವು ಇಲೆಕ್ಟ್ರೋನಿಕ್ ಮತಯಂತ್ರವನ್ನು ಜಾರಿಗೆ ತಂದಿತು. ಈ ವ್ಯವಸ್ಥೆಯನ್ನು ಮೊತ್ತಮೊದಲಾಗಿ ಕೇರಳದ ಚುನಾವಣೆಯಲ್ಲಿ ಉಪಯೋಗಿಸಿದರು. ಇಂದು ರಾಷ್ಟ್ರದಲ್ಲಿ ನಡೆಯುವ ಚುನಾವಣೆಗಳಲ್ಲಿ ಇಲೆಕ್ಟ್ರೋನಿಕ್ ಪೋಲಿಂಗ್ ಯಂತ್ರವನ್ನು ಉಪಯೋಗಿಸುತ್ತಾರೆ.

## ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಹಕ್ಕು

ಚುನಾವಣೆಯಲ್ಲಿ ಸ್ಪರ್ಧಿಸಿ ಜನಪ್ರತಿನಿಧಿಯಾಗಲು ಎಲ್ಲ ಪೌರರಿಗೂ ಹಕ್ಕಿದೆ. ಜನಪ್ರಾತಿನಿಧ್ಯ ನಿಯಮದ ಪ್ರಕಾರ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾವಣೆಗೊಂಡಿರುವ ಭಾರತದ ಪೌರನನ್ನು ಅಯೋಗ್ಯರನ್ನಾಗಿ ಮಾಡದೆ ಇದ್ದರೆ ಚುನಾವಣೆಯಲ್ಲಿ ಸ್ಪರ್ಧಿಸಬಹುದು. ಚುನಾವಣೆಯಲ್ಲಿ ಸ್ಪರ್ಧಿಸಲು ಕನಿಷ್ಠ ಪ್ರಾಯ ಮಿತಿಯನ್ನು ನಿಶ್ಚಯಿಸಲಾಗಿದೆ. ವಿವಿಧ ಚುನಾವಣೆಗೆ ಸ್ಪರ್ಧಿಸಲಿರುವ ಪ್ರಾಯಮಿತಿಯನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ಚುನಾವಣೆ | ಪ್ರಾಯಮಿತಿ |
|---|---|
| ♦ ರಾಷ್ಟ್ರಪತಿ | 35 |
| ♦ ಉಪರಾಷ್ಟ್ರಪತಿ | 35 |
| ♦ ರಾಜ್ಯಸಭೆ | 30 |
| ♦ ಲೋಕಸಭೆ | 25 |
| ♦ ವಿಧಾನ ಸಭೆ | 25 |
| ♦ ಪಂಚಾಯತ್‌ಗಳು | 21 |
| ♦ ನಗರ ಸಭೆಗಳು | 21 |

## ಸ್ವತಂತ್ರ ಚುನಾವಣಾ ಆಯೋಗ


ಸುಕುಮಾರ್ ಸೇನ್ ಮೊದಲ ಚುನಾವಣಾ ಕಮಿಷನರ್

ಪ್ರಜಾಪ್ರಭುತ್ವವು ಪರ್ಣಾಮಕಾರಿಯಾಗಬೇಕಾದರೆ ಚುನಾವಣೆಗಳು ಸ್ವಂತಂತ್ರವೂ ನಿಷ್ಪಕ್ಷಪಾತವೂ ಆಗಿರಬೇಕು. ಇದು ಸಾಧ್ಯವಾಗಬೇಕಾದರೆ ಚುನಾವಣಾ ಆಯೋಗವು ಒಂದು ಸ್ವತಂತ್ರ ಸಂಸ್ಥೆಯಾಗಿರಬೇಕು. ಭಾರತದ ಸಂವಿಧಾನವು ಒಂದು ಸ್ವತಂತ್ರ ಚುನಾವಣಾ ಆಯೋಗಕ್ಕೆ ರೂಪುನೀಡಿದೆ.

ಭಾರತದ ಚುನಾವಣಾ ಆಯೋಗವು ಈಗ 3 ಮಂದಿ ಸದಸ್ಯರನ್ನು ಒಳಗೊಂಡಿರುವ ಒಂದು ಸಮಿತಿಯಾಗಿದೆ. ಇದು ಒಬ್ಬ ಮುಖ್ಯ ಚುನಾವಣಾ ಅಧಿಕಾರಿ ಮತ್ತು ಇತರ ಇಬ್ಬರು ಸಹಾಯಕ ಕಮಿಷನರನ್ನು ಒಳಗೊಂಡಿದೆ. ರಾಷ್ಟ್ರಪತಿಯವರು ಇವರನ್ನು ನೇಮಕ ಮಾಡುತ್ತಾರೆ. ಚುನಾವಣಾ ಕಮಿಷನರಿಗೆ ಸಹಾಯಮಾಡಲು ಎಲ್ಲ ಪ್ರಾಂತ್ಯಗಳಲ್ಲೂ ಮುಖ್ಯ ಚುನಾವಣಾ ಅಧಿಕಾರಿ ಇದ್ದಾರೆ. ಚುನಾವಣೆ ನಡೆಸಲು ವಿಶಾಲವಾದ ಉದ್ಯೋಗಿಗಳ ವೃಂದವು ಚುನಾವಣಾ ಆಯೋಗಕ್ಕೆ ಇಲ್ಲ. ಅಗತ್ಯದ ಸಂದರ್ಭಗಳಲ್ಲಿ ಕೇಂದ್ರ, ಪ್ರಾಂತ್ಯ ಸರಕಾರಿ ಉದ್ಯೋಗಿಗಳನ್ನು ಚುನಾವಣಾ ಕೆಲಸಕ್ಕಾಗಿ ನೇಮಿಸುತ್ತಾರೆ. ರಾಷ್ಟ್ರಪತಿ, ಉಪರಾಷ್ಟ್ರಪತಿ, ರಾಜ್ಯಸಭೆ, ಲೋಕಸಭೆ, ಪ್ರಾಂತ್ಯ ಶಾಸನಸಭೆಯ ಚುನಾವಣೆಗಳನ್ನು ನಡೆಸುವುದು ಭಾರತದ ಚುನಾವಣಾ ಆಯೋಗವಾಗಿದೆ.



ಭಾರತದ ಚುನಾವಣಾ ಆಯೋಗ ಕಛೇರಿ






### ಪ್ರಾಂತ್ಯ ಚುನಾವಣಾ ಆಯೋಗ

ಪಂಚಾಯತ್-ನಗರಸಭೆಗಳಿಗಿರುವ ಚುನಾವಣೆಗೆ ನೇತೃತ್ವ ನೀಡುವುದು ಪ್ರಾಂತ್ಯ ಚುನಾವಣಾ ಆಯೋಗವಾಗಿದೆ. 73, 74ನೇ ಸಂವಿಧಾನ ತಿದ್ದುಪಡಿಯ ಮೂಲಕ ಎಲ್ಲಾ ಪ್ರಾಂತ್ಯಗಳಲ್ಲೂ ಚುನಾವಣಾ ಆಯೋಗವನ್ನು ರೂಪಿಸಿದರು.

ಕೊಟ್ಟಿರುವ ಕೊಲಾಷ್ ಗಮನಿಸಿರಿ. ಅವುಗಳು ಚುನಾವಣಾ ಆಯೋಗವು ನಡೆಸುವ ವ್ಯತ್ಯಸ್ತ ಚಟುವಟಿಕೆಯ ಕುರಿತಿರುವ ಸೂಚಕಗಳಾಗಿವೆ. ಸೂಚಕಗಳನ್ನು ಪರಿಶೀಲಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗದ ಜವಾಬ್ದಾರಿಗಳನ್ನು ತರಗತಿಯಲ್ಲಿ ಚರ್ಚಿಸಿ ಒಂದು ಟಿಪ್ಪಣಿಯನ್ನು ತಯಾರಿಸಿರಿ.

ನೀವು ಕಂಡುಕೊಂಡಿರುವವುಗಳನ್ನು ಕೆಳಗೆ ಕೊಟ್ಟಿರುವ ಚುನಾವಣಾ ಆಯೋಗದ ಜವಾಬ್ದಾರಿಗಳೊಂದಿಗೆ ಹೋಲಿಸಿ ವಿಶ್ಲೇಷಣೆ ನಡೆಸಿರಿ.

### ಚುನಾವಣಾ ಆಯೋಗದ ಜವಾಬ್ದಾರಿಗಳು

- ಚುನಾವಣೆಯ ಮೇಲ್ನೋಟ ವಹಿಸುವುದು.
- ಮತದಾರರ ಪಟ್ಟಿ ತಯಾರಿಸುವುದು.
- ಚುನಾವಣಾ ಪ್ರಕ್ರಿಯೆಯ ವಿವಿಧ ಹಂತಗಳ ದಿನಾಂಕವನ್ನು ಘೋಷಿಸುವುದು.
- ಚುನಾವಣಾ ಚಿಹ್ನೆಗಳನ್ನು ನೀಡುವುದು.
- ನೀತಿ ಸಂಹಿತೆಯನ್ನು ರೂಪಿಸುವುದು.
- ಚುನಾವಣಾ ಉದ್ಯೋಗಿಗಳ ನೇಮಕ ಮತ್ತು ತರಬೇತಿ
- ಮತದಾನ, ಮತಎಣಿಕೆ ಫಲಿತಾಂಶ ಘೋಷಣೆ
- ಚುನಾವಣಾ ಲೆಕ್ಕಾಚಾರಗಳನ್ನು ಪರಿಶೋಧಿಸುವುದು.

ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವುದು, ರದ್ದುಗೊಳಿಸುವುದು ಮುಂತಾದ ಕಾರ್ಯಗಳನ್ನು ಹಾಗೂ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ನಿಮ್ಮ ಪ್ರದೇಶದಲ್ಲಿರುವ ಬಿ.ಎಲ್.ಓ. ಗಳನ್ನು (ಬೂತ್ ಮಟ್ಟದ ಅಧಿಕಾರಿ) ಸಂಪರ್ಕಿಸಿ ವಿಷಯಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಮಂಡಿಸಿರಿ.



## ಭಾರತದ ಚುನಾವಣಾ ವ್ಯವಸ್ಥೆಯ ನ್ಯೂನತೆಗಳು

ಚುನಾವಣಾ ಪ್ರಕ್ರಿಯೆಯು ಸ್ವತಂತ್ರವೂ ನೀತಿಯುಕ್ತವೂ ಆಗುವುದಕ್ಕಾಗಿ ನಾವು ಸ್ವೀಕರಿಸಿರುವ ಕಾರ್ಯಗಳ ಕುರಿತು ತಿಳಿದುಕೊಂಡಿರಲ್ಲವೇ. ಯಾವುದೇ ಚುನಾವಣಾ ವ್ಯವಸ್ಥೆಗೆ ಸಂಪೂರ್ಣವಾಗಿ ನ್ಯೂನತೆಗಳಿಂದ ಮುಕ್ತವಾಗಿರಲು ಸಾಧ್ಯವಿಲ್ಲ. ಭಾರತದ ಚುನಾವಣಾ ವ್ಯವಸ್ಥೆಗಳಿಗೆ ಕೆಲವು ನ್ಯೂನತೆಗಳಿವೆ. ನ್ಯೂನತೆಗಳನ್ನು ಕೆಳಗೆ ಕೊಟ್ಟಿರುವ ಚಾರ್ಟಿನಿಂದ ತಿಳಿದುಕೊಳ್ಳಿರಿ.


**ಹಣದ ಪ್ರಭಾವ**
- ಚುನಾವಣೆಯಲ್ಲಿ ಮತದಾರರಿಗೆ ಹಣ ನೀಡಿ ಪ್ರಭಾವ ಬೀರುವುದು.
- ಚುನಾವಣಾ ಪ್ರಚಾರ ಚಟುವಟಿಕೆಗಳಿಗೆ ರಾಜಕೀಯ ಪಕ್ಷಗಳು ಅಮಿತವಾಗಿ ಹಣವನ್ನು ಖರ್ಚುಮಾಡುತ್ತವೆ.

**ಚುನಾವಣೆಗೆ ಸಂಬಂಧಿಸಿ ಅಕ್ರಮಗಳು**
- ಮತದಾನ ದಿನದಲ್ಲುಂಟಾಗುವ ಅಕ್ರಮಗಳು
- ಚುನಾವಣೆಯಲ್ಲಿ ನಕಲಿ ಮತದಾನ ಹಾಗೂ ಮತಗಟ್ಟೆಯ ವಶೀಕರಣ

**ಜಾತಿಮತಗಳ ಪ್ರಭಾವ**
- ಅಭ್ಯರ್ಥಿಗಳ ನಿರ್ಣಯದಲ್ಲಿ ಜಾತಿಮತ ಘಟಕಗಳು ಪ್ರಭಾವ ಬೀರುತ್ತವೆ.

**ಸ್ತ್ರೀಯರ ಪ್ರಾತಿನಿಧ್ಯ ಕೊರತೆ**
- ಅಭ್ಯರ್ಥಿಗಳ ನಿರ್ಣಯದಲ್ಲಿ ಸ್ತ್ರೀಯರನ್ನು ಕಡೆಗಣಿಸುತ್ತಾರೆ.
- ಪಾರ್ಲಿಮೆಂಟಿನಲ್ಲೂ ವಿಧಾನ ಸಭೆಗಳಲ್ಲೂ ಸ್ತ್ರೀ ಪ್ರಾತಿನಿಧ್ಯ ಕಡಿಮೆ.

ಚುನಾವಣಾ ಸಂದರ್ಭದಲ್ಲಿನ ಪತ್ರಿಕಾ ವಾರ್ತೆಯನ್ನು ಸಂಗ್ರಹಿಸಿ ಚುನಾವಣಾ ವ್ಯವಸ್ಥೆಯಲ್ಲಿನ ಕುಂದುಕೊರತೆಗಳ ಕುರಿತು ಟಿಪ್ಪಣಿ ತಯಾರಿಸಿರಿ.



## ಚುನಾವಣಾ ಸುಧಾರಣೆಗಳು

ಚುನಾವಣಾ ವ್ಯವಸ್ಥೆಯಲ್ಲಿನ ಕುಂದು ಕೊರತೆಗಳು ಚುನಾವಣಾ ಸುಧಾರಣೆಗೆ ಕಾರಣವಾಗುತ್ತವೆ. ಕುಂದುಕೊರತೆಗಳನ್ನು ಪರಿಹರಿಸಿ ಹೇಗೆ ಚುನಾವಣಾ ವ್ಯವಸ್ಥೆಯನ್ನು ಸುಧಾರಣೆ ಮಾಡಲು ಸಾಧ್ಯ. ಚುನಾವಣಾ ವ್ಯವಸ್ಥೆಯಲ್ಲಿನ ಕುಂದುಕೊರತೆಗಳನ್ನು ಪರಿಹರಿಸುವುದಕ್ಕಾಗಿ ಚುನಾವಣಾ ಆಯೋಗವು ಜಾರಿಗೆ ತಂದ ಕೆಲವು ಸುಧಾರಣೆಗಳನ್ನು ಕೆಳಗೆ ಕೊಡಲಾಗಿದೆ.

- ಮತದಾರರ ಫೋಟೋ ಅಂಟಿಸಿದ ಗುರುತಿನ ಚೀಟಿ ಜಾರಿಗೆ ತಂದರು.
- ಅಭ್ಯರ್ಥಿಗಳ ಚುನಾವಣಾ ಖರ್ಚಿನ ಮಿತಿಯನ್ನು ನಿಶ್ಚಯಿಸಿದರು.
- ರಾಜಕೀಯ ಪಕ್ಷಗಳಿಗೂ ಅಭ್ಯರ್ಥಿಗಳಿಗೂ ಇರುವ ನೀತಿಸಂಹಿತೆಯನ್ನು ಜಾರಿಗೊಳಿಸಿದರು.

KT-541-4/Soc. Sci. I-9 (K) Vol-2

- ಚುನಾವಣೆಗಳಲ್ಲಿ ಎಲೆಕ್ಟ್ರೋನಿಕ್ ಮತದಾನ ಯಂತ್ರವನ್ನು ಜಾರಿಗೆ ತಂದರು.
- ಮತದಾರರ ಫೋಟೋ ಅಂಟಿಸಿದ ಮತದಾರರ ಪಟ್ಟಿ ಪ್ರಕಟಿಸಲಾಯಿತು.
- ನಕಾರ ಮತದಾನ ಪದ್ಧತಿಯನ್ನು ಜಾರಿಗೆ ತಂದರು.
- ಬ್ಯಾಲೆಟ್ ಪೇಪರ್‌ನಲ್ಲಿ ಅಭ್ಯರ್ಥಿಯ ಚಿಹ್ನೆಯನ್ನು ಅಳವಡಿಸಿದರು.

### ನಕಾರ ಮತ

ಚುನಾವಣೆಯಲ್ಲಿ ಸ್ಪರ್ಧಿಸುವ ಎಲ್ಲಾ ಅಭ್ಯರ್ಥಿಗಳನ್ನೂ ತಿರಸ್ಕರಿಸಲು ಮತದಾರರಿಗೆ ಹಕ್ಕುಗಳನ್ನು ನೀಡುವ ನಕಾರ ಮತವು ಭಾರತದಲ್ಲಿ ಜಾರಿಗೆ ಬಂದಿತು. ಇಲೆಕ್ಟ್ರೋನಿಕ್ ಮತದಾನ ಯಂತ್ರದಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರಿನ ಕೊನೆಗೆ ಸೇರಿಸಿರುವ NOTA (none of the above) ಗುಂಡಿಯನ್ನು ಒತ್ತುವ ಮೂಲಕ ನಕಾರಮತವನ್ನು ದಾಖಲಿಸಬಹುದು.

### ಬ್ಯಾಲೆಟ್ ಪೇಪರಿನಲ್ಲಿ ಅಭ್ಯರ್ಥಿಯ ಚಿತ್ರವೂ

ಬ್ಯಾಲೆಟ್ ಪೇಪರಿನಲ್ಲಿ ಅಭ್ಯರ್ಥಿಯ ಹೆಸರಿನ ಹಾಗೂ ಚಿಹ್ನೆಯೊಂದಿಗೆ ಚಿತ್ರವನ್ನೂ ಪ್ರದರ್ಶಿಸಲು ಚುನಾವಣಾ ಆಯೋಗವು ತೀರ್ಮಾನಿಸಿತು. ಅಭ್ಯರ್ಥಿಗಳ ವಿರುದ್ಧ ಒಂದೇ ಹೆಸರಿನ ನಕಲಿಗಳು ವ್ಯಾಪಕವಾದುದರಿಂದ ಚುನಾವಣಾ ಆಯೋಗವು ಈ ಹೊಸ ರೀತಿಯನ್ನು ಜಾರಿಗೆ ತಂದಿತು. ನಿರಕ್ಷರರಾದ ಮತದಾರರಿಗೂ ಅವರ ಮತದಾನದ ಹಕ್ಕನ್ನು ಸರಿಯಾಗಿ ವಿನಿಯೋಗಿಸಲು ಇಂತಹ ಸುಧಾರಣೆಗಳು ಸಹಾಯಕವಾಗುತ್ತವೆ.

ಚುನಾವಣಾ ಸುಧಾರಣೆಗಿರುವ ಹೆಚ್ಚಿನ ಕ್ರಿಯಾತ್ಮಕವಾದ ನಿರ್ದೇಶನಗಳನ್ನು ಕಂಡುಕೊಂಡು ಪಟ್ಟಿಮಾಡಿರಿ.

## ಚುನಾವಣೆ ಮತ್ತು ರಾಜಕೀಯ ಪಕ್ಷಗಳು

ಭಾರತದಲ್ಲಿ ವಿವಿಧ ರಾಜಕೀಯ ಪಕ್ಷಗಳು ಕಾರ್ಯನಿರ್ವಹಿಸುತ್ತಿವೆ. ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವ ಪ್ರಕ್ರಿಯೆಯ ಅವಿಭಾಜ್ಯ ಘಟಕವಾಗಿವೆ. ರಾಜಕೀಯ ಪಕ್ಷಗಳು ಎಂದರೇನು? ಒಂದು ಪ್ರತ್ಯೇಕ ದೃಷ್ಟಿಕೋನದ ಆಧಾರದಲ್ಲಿ ಸಂಘಟಿತರಾಗುವುದು ಮತ್ತು ರಾಜಕೀಯ ಅಧಿಕಾರ ಗಳಿಸುವುದಕ್ಕಾಗಿ ನಿರಂತರವಾಗಿ ಕಾರ್ಯನಿರ್ವಹಿಸುವ ಸಂಘಟನೆಗಳನ್ನು ರಾಜಕೀಯ ಪಕ್ಷಗಳೆನ್ನುತ್ತಾರೆ. ರಾಜಕೀಯ ಪಕ್ಷಗಳ ಪ್ರಧಾನ ಜವಾಬ್ದಾರಿಗಳನ್ನು ಕೆಳಗೆ ಕೊಡಲಾಗಿದೆ.

- ಸರಕಾರ ಹಾಗೂ ಜನರನ್ನು ಪರಸ್ಪರ ಬೆಸೆಯುತ್ತದೆ.
- ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುತ್ತದೆ.
- ರಾಜಕೀಯ ತಿಳುವಳಿಕೆಯನ್ನು ಮೂಡಿಸುತ್ತದೆ.
- ಚುನಾವಣೆಯಲ್ಲಿ ಸ್ಪರ್ಧಿಸಿ ಬಹುಮತ ಲಭಿಸುವ ಪಕ್ಷಗಳು ಸರಕಾರವನ್ನು ರೂಪಿಸುತ್ತದೆ.
- ಚುನಾವಣೆಯಲ್ಲಿ ಸ್ಪರ್ಧಿಸಿ ಬಹುಮತ ಲಭಿಸದ ಪಕ್ಷಗಳು ವಿರೋಧ ಪಕ್ಷವಾಗಿ ಕಾರ್ಯವೆಸಗುತ್ತದೆ.

### ಚುನಾವಣಾ ಪ್ರಣಾಳಿಕೆ

ಪ್ರತಿಯೊಂದು ರಾಜಕೀಯ ಪಕ್ಷವೂ ಚುನಾವಣೆಯ ಪ್ರಚಾರಕ್ಕಾಗಿ ಚುನಾವಣಾ ಪ್ರಣಾಳಿಕೆಯನ್ನು (Election manifesto) ಹೊರಡಿಸುತ್ತದೆ. ಪಕ್ಷದ ಪ್ರಾದೇಶಿಕ, ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಷಯಗಳ ಕುರಿತಾದ ಧೋರಣೆ ಮತ್ತು ತಾವು ಅಧಿಕಾರಕ್ಕೆ ಬಂದರೆ ಜಾರಿಗೊಳಿಸಲು ಉದ್ದೇಶಿಸುವ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಒಳಗೊಂಡ ಲಘು ಲೇಖನವು ಚುನಾವಣಾ ಪ್ರಣಾಳಿಕೆಯಾಗಿದೆ.

- ಸರಕಾರದ ತಪ್ಪಾದ ಧೋರಣೆಗಳಲ್ಲಿ ಬದಲಾವಣೆಯನ್ನು ತರುವುದಕ್ಕಾಗಿ ಕಾರ್ಯಪ್ರವೃತ್ತವಾಗುತ್ತದೆ.
- ವಿವಿಧ ಧೋರಣೆಗಳನ್ನೂ ಕಾರ್ಯಕ್ರಮಗಳನ್ನೂ ಮುಂದಿಡುತ್ತಾರೆ.

ಒಂದು ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ವ್ಯಕ್ತಿಯೊಬ್ಬನಿಗೆ ರಾಜಕೀಯ ಪಕ್ಷವನ್ನು ರೂಪಿಸುವ ಸ್ವಾತಂತ್ರ್ಯವಿದೆ.

**ಭಾರತದ ರಾಜಕೀಯ ಪಕ್ಷಗಳು**

| ರಾಷ್ಟ್ರೀಯ ಪಕ್ಷಗಳು | ಪ್ರಾದೇಶಿಕ ಪಕ್ಷಗಳು |
|---|---|
| ♦ | ♦ |
| ♦ | ♦ |
| ♦ | ♦ |
| ♦ | ♦ |

ಭಾರತದಲ್ಲಿ ಪ್ರಸ್ತುತ ಕಾರ್ಯವೆಸಗುತ್ತಿರುವ ಪ್ರಧಾನ ರಾಜಕೀಯ ಪಕ್ಷಗಳ ಪಟ್ಟಿ ತಯಾರಿಸಿರಿ.



ನಮ್ಮ ರಾಷ್ಟ್ರದಲ್ಲಿ ಕಾರ್ಯವೆಸಗುತ್ತಿರುವ ಎಲ್ಲ ರಾಷ್ಟ್ರೀಯ ಪಕ್ಷಗಳು ಚುನಾವಣಾ ಆಯೋಗದಲ್ಲಿ ನೊಂದಾವಣೆ ಮಾಡಬೇಕು. ರಾಷ್ಟ್ರೀಯ ಪಕ್ಷಗಳೂ, ಪ್ರಾಂತ್ಯಗಳೂ, ಪ್ರಾದೇಶಿಕ ಪಕ್ಷಗಳೂ ಭಾರತದಲ್ಲಿ ಕಾರ್ಯವೆಸಗುತ್ತಿವೆ. ಒಂದು ರಾಜಕೀಯ ಪಕ್ಷವನ್ನು ರಾಷ್ಟ್ರೀಯ ಪಕ್ಷವೋ ಪ್ರಾದೇಶಿಕ ಪಕ್ಷವಾಗಿಯೋ ಅಂಗೀಕರಿಸುವುದಕ್ಕೆ ಚುನಾವಣಾ ಆಯೋಗವು ಪ್ರತ್ಯೇಕ ಮಾನದಂಡಗಳನ್ನು ನಿಶ್ಚಯಿಸಿದೆ.

ರಾಷ್ಟ್ರೀಯ ಪಕ್ಷಗಳೆಂದರೆ ಸಾಮಾನ್ಯವಾಗಿ ದೇಶ ವ್ಯಾಪಕವಾಗಿ ಕಾರ್ಯಪ್ರವೃತ್ತವಾಗಿರುವ ಒಂದಕ್ಕಿಂತ ಹೆಚ್ಚು ಪ್ರಾಂತ್ಯಗಳಲ್ಲಿ ಪ್ರಭಾವ ಹೊಂದಿರುವ ರಾಜಕೀಯ ಪಕ್ಷಗಳಾಗಿವೆ. ಆದರೆ ಕೆಲವು ಪ್ರಾಂತ್ಯಗಳಲ್ಲಿ ಮಾತ್ರವೇ ಪ್ರಭಾವ ಬೀರುವ ರಾಜಕೀಯ ಪಕ್ಷಗಳೇ ಪ್ರಾದೇಶಿಕ ಪಕ್ಷಗಳಾಗಿವೆ. ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳಿಗೆ ನಿಶ್ಚಯಿಸಿರುವ ಮಾನದಂಡಗಳನ್ನು ಪಾಲಿಸಲು ಸಾಧ್ಯವಾಗದ ಧಾರಾಳ ಪಕ್ಷಗಳು ನಮ್ಮ ರಾಷ್ಟ್ರದಲ್ಲಿ ಕಾರ್ಯನಿರ್ವಹಿಸುತ್ತಿವೆ. ಆದರೆ ಇವುಗಳು ಚುನಾವಣಾ ಆಯೋಗದಲ್ಲಿ ನೊಂದಾಯಿಸಿದ ಪಕ್ಷಗಳಾದುದರಿಂದ ಇವುಗಳನ್ನು ನೊಂದಾಯಿತ ಪಕ್ಷಗಳು ಎಂಬುದಾಗಿ ಕರೆಯುತ್ತಾರೆ.

**ರಾಷ್ಟ್ರೀಯ ಪಕ್ಷಗಳು**



ಒಂದು ರಾಜಕೀಯ ಪಕ್ಷವನ್ನು ರಾಷ್ಟ್ರೀಯ ಪಕ್ಷವಾಗಿ ಅಂಗೀಕರಿಸಬೇಕಾದರೆ ಆ ಪಕ್ಷವು ಲೋಕಸಭಾ ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು ಮತಗಳ ಆರು ಶೇಕಡಾ ಮತ್ತು ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಪ್ರಾಂತ್ಯಗಳಲ್ಲಿ ಅಸ್ತಿತ್ವದಲ್ಲಿರಬೇಕು. ಮಾತ್ರವಲ್ಲದೆ ಒಂದೋ ಅದಕ್ಕಿಂತಲೂ ಹೆಚ್ಚು ಪ್ರಾಂತ್ಯಗಳಿಂದ ನಾಲ್ಕು ಲೋಕಸಭಾ ಸೀಟು ಲಭಿಸಿರಬೇಕು.

**ಪ್ರಾದೇಶಿಕ ಪಕ್ಷಗಳು**



ಒಂದು ಪಕ್ಷವನ್ನು ಪ್ರಾದೇಶಿಕ ಪಕ್ಷವಾಗಿ ಪರಿಗಣಿಸಬೇಕಿದ್ದಲ್ಲಿ ಆ ಪಕ್ಷಕ್ಕೆ ಪ್ರಾಂತ್ಯದ ಶಾಸನಸಭಾ ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು ಮತಗಳ ಆರು ಶೇಕಡಾ ಮತ ಹಾಗೂ ಎರಡು ಸೀಟುಗಳು ಲಭಿಸಿರಬೇಕು.

**ಲೋಕಸಭಾ ಚುನಾವಣೆಯನ್ನು ಘೋಷಿಸಲಾಯಿತು**
**ಕೇಂದ್ರದಲ್ಲಿನ ಪ್ರಧಾನ ಒಕ್ಕೂಟಗಳು ನಿರೀಕ್ಷೆಯಲ್ಲಿ**

ದಿಲ್ಲಿ: ಹದಿನಾರನೇ ಲೋಕಸಭಾ ಚುನಾವಣೆಗಿರುವ ಘೋಷಣೆಯನ್ನು ಹೊರಡಿಸಲಾಯಿತು. ಕೇಂದ್ರದ ಪ್ರಧಾನ ಒಕ್ಕೂಟಗಳು ಹೆಚ್ಚಿನ ನಿರೀಕ್ಷೆಯಿಂದ ಈ ಚುನಾವಣೆಯನ್ನು ಎದುರಿಸುತ್ತಿವೆ.

## ಒಕ್ಕೂಟ ರಾಜಕೀಯ ಮತ್ತು ಚುನಾವಣೆ

ಮೇಲೆ ಕೊಟ್ಟಿರುವ ವಾರ್ತೆಯನ್ನು ಗಮನಿಸಿದಿರಲ್ಲವೇ. ಕೇಂದ್ರದಲ್ಲೂ ಹಲವು ಪ್ರಾಂತ್ಯಗಳಲ್ಲೂ ರಾಜಕೀಯ ಪಕ್ಷಗಳು ಒಕ್ಕೂಟಗಳನ್ನು ರೂಪಿಸಿಕೊಂಡು ಚುನಾವಣೆಯಲ್ಲಿ ಸ್ಪರ್ಧಿಸುತ್ತವೆ. ಒಕ್ಕೂಟ ರಾಜಕೀಯ ಎಂದರೇನೆಂದು ನಾವು ಪರಿಶೀಲಿಸೋಣ. ಚುನಾವಣೆಯಲ್ಲಿ ಯಾವುದೇ ರಾಜಕೀಯ ಪಕ್ಷಕ್ಕೂ ಒಬ್ಬಂಟಿಯಾಗಿ ಬಹುಮತ ಲಭಿಸಲು ಸಾಧ್ಯವಿಲ್ಲದ ಸಂದರ್ಭಗಳು ನಿರ್ಮಾಣವಾಗುವುದಿದೆ. ಅಂತಹ ಸಂದರ್ಭಗಳಲ್ಲಿ ಪರಸ್ಪರ ಸಹಕರಿಸಲು ಸಾಧ್ಯವಾಗುವ ರಾಜಕೀಯ ಪಕ್ಷಗಳು ಒಂದು ಸಾಮಾನ್ಯ ಕಾರ್ಯಕ್ರಮಗಳ ಆಧಾರದಲ್ಲಿ ಒಂದುಗೂಡಿ ಒಕ್ಕೂಟವನ್ನು ರೂಪಿಸಿ ಚುನಾವಣೆಯಲ್ಲಿ ಸ್ಪರ್ಧಿಸುತ್ತವೆ. ಅದುವೇ ಒಕ್ಕೂಟ ರಾಜಕೀಯವಾಗಿದೆ. (Coalition Politics). ಒಕ್ಕೂಟ ಸರಕಾರಗಳು (Coalition Government) ಇಂತಹ ಒಕ್ಕೂಟಗಳು ಚುನಾವಣೆಯಲ್ಲಿ ಸ್ಪರ್ಧಿಸಿ ಅಧಿಕಾರಕ್ಕೆ ಬರುವಾಗ ರೂಪೀಕರಿಸುವ ಸರಕಾರವಾಗಿದೆ.


ಭಾರತದಲ್ಲಿ ಕೇರಳವು ಇತರ ಪ್ರಾಂತ್ಯಗಳಿಗಿಂತ ವ್ಯತ್ಯಸ್ತವಾಗಿ ಒಕ್ಕೂಟ ರಾಜಕೀಯ ವ್ಯವಸ್ಥೆಯನ್ನು ಜಾರಿಗೆ ತಂದಿರುವ ಒಂದು ಪ್ರಾಂತ್ಯವಾಗಿದೆ. 1960ರಲ್ಲಿ ಕೇರಳ ಪ್ರಾಂತ್ಯದಲ್ಲಿ ಮೊತ್ತಮೊದಲಾಗಿ ಒಕ್ಕೂಟ ಸರಕಾರವು ಅಧಿಕಾರಕ್ಕೆ ಬಂದಿತು. ಆ ಬಳಿಕ ಕೇರಳದಲ್ಲಿ ಅಧಿಕಾರಕ್ಕೆ ಬಂದ ಸರಕಾರಗಳಲ್ಲಿ ಬಹುಪಾಲೂ ಒಕ್ಕೂಟ ಸರಕಾರಗಳಾಗಿದ್ದುವು. ಇಂದು ಕೇಂದ್ರದಲ್ಲೂ ಹೆಚ್ಚಿನ ಪ್ರಾಂತ್ಯಗಳಲ್ಲೂ ಒಕ್ಕೂಟ ಸರಕಾರಗಳಿವೆ.

## ಚುನಾವಣಾ ಭವಿಷ್ಯ ಶಾಸ್ತ್ರ (Psephology)

ಚುನಾವಣಾ ಫಲಿತಾಂಶ ಘೋಷಣೆಯ ಮೊದಲು ರಾಜಕೀಯ ಪಕ್ಷಗಳ ಹಾಗೂ ಒಕ್ಕೂಟಗಳು ಜಯಗಳಿಸುವ ಸಾಧ್ಯತೆಯನ್ನು ಮೊದಲೇ ಪರಿಶೋಧಿಸಿ ಊಹಿಸುವ ಕಲಿಕಾ ಶಾಖೆಯು ಚುನಾವಣಾ ಭವಿಷ್ಯ ಶಾಸ್ತ್ರವಾಗಿದೆ (Psephology). ಅಭಿಪ್ರಾಯ, ಸರ್ವೇಗಳು, ಮಾಧ್ಯಮ ವಿಶ್ಲೇಷಣೆಗಳು, ಸಂದರ್ಶನಗಳು, ಮತದಾನೋತ್ತರ ಸಮೀಕ್ಷೆ, ಹಿಂದಿನ ಚುನಾವಣೆಯ ಫಲಿತಾಂಶ ಎಂಬಿವುಗಳನ್ನು ಮುಂದಿಟ್ಟುಕೊಂಡು ಚುನಾವಣಾ ಫಲಿತಾಂಶವನ್ನು ಹೇಳಲಾಗುತ್ತದೆ. ರಾಜಕೀಯ ಪಕ್ಷಗಳಿಗೆ ಅನುಕೂಲವಾಗಿಯೋ ಪ್ರತಿಕೂಲವಾಗಿಯೋ ಇರುವ ಸಾರ್ವಜನಿಕ ಅಭಿಪ್ರಾಯವನ್ನು ಭವಿಷ್ಯದ ಮೂಲಕ ತಿಳಿದುಕೊಳ್ಳಲು ಸಾಧ್ಯವಿದೆ. ಚುನಾವಣಾ ಭವಿಷ್ಯವು ಎಲ್ಲ ಸಂದರ್ಭಗಳಲ್ಲೂ ಸರಿಯಾಗಬೇಕೆಂದಿಲ್ಲ. ಚುನಾವಣಾ ಭವಿಷ್ಯ ನುಡಿಯುವುದಕ್ಕೆ ಚುನಾವಣಾ ಆಯೋಗವು ಈಗ ನಿಯಂತ್ರಣಗಳನ್ನು ಹೇರಿದೆ.

ನಮ್ಮ ಚುನಾವಣಾ ವ್ಯವಸ್ಥೆಯ ವಿವಿಧ ಪ್ರತ್ಯೇಕತೆಗಳನ್ನು ತಿಳಿದುಕೊಂಡಿರಲ್ಲವೇ. ಇಲ್ಲಿಯ ವರೆಗೆ ವಿಶ್ಲೇಷಣೆ ಮಾಡಿರುವುದರಲ್ಲಿ ಸ್ವತಂತ್ರವೂ ನಿಷ್ಪಕ್ಷವೂ ಆಗಿರುವ ಚುನಾವಣಾ ಆಯೋಗ, ಸರಿಯಾದ ಸಮಯದಲ್ಲಿ ನಡೆಸುವ ಚುನಾವಣೆ, ಸಾರ್ವತ್ರಿಕ ಮತದಾನದ ಹಕ್ಕು, ಆಡಳಿತಾಧಿಕಾರಿಗಳನ್ನು ಆಯ್ಕೆಮಾಡಲಿರುವ ಜನರ ಸ್ವಾತಂತ್ರ್ಯ ಎಂಬಿವುಗಳು ಭಾರತದ ಪ್ರಜಾಪ್ರಭುತ್ವವನ್ನು ಬಲಪಡಿಸಲು ಸಹಾಯಕವಾಗಿವೆ ಎಂದು ಊಹಿಸಬಹುದು.

ಇದರೊಂದಿಗೆ ಜನರ ಉನ್ನತ ರಾಜಕೀಯ ಪ್ರಜ್ಞೆ, ತರ್ಕಬದ್ಧವಾದ ತೀರ್ಮಾನಗಳನ್ನು ಕೈಗೊಳ್ಳುವ ಸಾಮರ್ಥ್ಯ, ಸಕ್ರಿಯ ರಾಜಕೀಯ ಭಾಗವಹಿಸುವಿಕೆಯು ಪ್ರಜಾಪ್ರಭುತ್ವವನ್ನು ಬಲಪಡಿಸಲು ಸಹಾಯಕವಾಗುತ್ತವೆ. ಹೀಗಾದರೆ ಮಾತ್ರವೇ ಪ್ರಜಾಪ್ರಭುತ್ವವು ಅರ್ಥಪೂರ್ಣವಾಗಲು ಸಾಧ್ಯ.






## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಪ್ರಜಾಪ್ರಭುತ್ವದಲ್ಲಿ ಚುನಾವಣೆಗಿರುವ ಪ್ರಾಧಾನ್ಯವನ್ನು ವಿವರಿಸುವರು.
- ಭಾರತದ ಚುನಾವಣಾ ವ್ಯವಸ್ಥೆಗಳನ್ನು ವಿಶ್ಲೇಷಿಸುವರು.
- ಚುನಾವಣಾ ಆಯೋಗದ ಜವಾಬ್ದಾರಿಗಳನ್ನು ಪಟ್ಟಿಮಾಡುವರು.
- ಚುನಾವಣೆಯ ಕೊರತೆಗಳನ್ನು ಪರಿಶೀಲಿಸಿ ಸುಧಾರಣೆಗಳನ್ನು ನಿರ್ದೇಶಿಸುವರು.
- ರಾಜಕೀಯ ಪಕ್ಷಗಳ ಜವಾಬ್ದಾರಿಗಳನ್ನು ಪಟ್ಟಿಮಾಡುವರು.
- ಚುನಾವಣಾ ಭವಿಷ್ಯಶಾಸ್ತ್ರವನ್ನು ವಿವರಿಸುವರು.

## ಮೌಲ್ಯನಿರ್ಣಯ ಮಾಡುವ

- ಕೆಳಗೆ ನೀಡಿರುವ ಹೇಳಿಕೆಗಳಲ್ಲಿ ವಯಸ್ಕ ಮತದಾನದ ಹಕ್ಕಿಗೆ ಸಂಬಂಧಿಸಿದ ಹೇಳಿಕೆ ಯಾವುದು?

  ಎ. ರಾಷ್ಟ್ರದ ಪ್ರಾಥಮಿಕ ವಿದ್ಯಾಭ್ಯಾಸ ಹೊಂದಿದ ಎಲ್ಲರಿಗೂ ಮತದಾನದ ಹಕ್ಕಿದೆ.

  ಬಿ. ರಾಷ್ಟ್ರದಲ್ಲಿನ ಪ್ರಾಯಪೂರ್ತಿಯಾದ ಎಲ್ಲರಿಗೂ ಜಾತಿ,ಮತ,ಭಾಷೆ, ಲಿಂಗ ವ್ಯತ್ಯಾಸವಿಲ್ಲದೆ ಮತದಾನದ ಹಕ್ಕಿದೆ.

  ಸಿ. ರಾಷ್ಟ್ರದ ಪ್ರಾಯ ಪೂರ್ತಿಯಾದ ಎಲ್ಲಾ ಪುರುಷರಿಗೂ ಮತದಾನದ ಹಕ್ಕಿದೆ.

  ಡಿ. ರಾಷ್ಟ್ರಕ್ಕೆ ಆದಾಯತೆರಿಗೆ ಪಾವತಿಸುವ ಎಲ್ಲರಿಗೂ ಮತದಾನದ ಹಕ್ಕಿದೆ.
- ಪ್ರಜಾಪ್ರಭುತ್ವದಲ್ಲಿ ಚುನಾವಣೆಗಿರುವ ಪ್ರಾಧಾನ್ಯವನ್ನು ಸ್ಪಷ್ಟಪಡಿಸಿರಿ.
- ಪ್ರತ್ಯಕ್ಷ-ಪರೋಕ್ಷ ಚುನಾವಣೆಗಳು ಹೇಗೆ ವ್ಯತ್ಯಸ್ತವಾಗಿವೆ? ಉದಾಹರಣೆಯನ್ನು ಕಂಡುಕೊಳ್ಳಿರಿ.
- ಚುನಾವಣಾ ಆಯೋಗಕ್ಕೆ ಹೆಚ್ಚಿನ ಜವಾಬ್ದಾರಿಗಳಿವೆ. ಈ ಹೇಳಿಕೆಯನ್ನು ಸಮರ್ಥಿಸಿರಿ.
- ಭಾರತದ ಚುನಾವಣಾ ವ್ಯವಸ್ಥೆಯಲ್ಲಿ ಧಾರಾಳ ಕೊರತೆಗಳಿವೆ. ಈ ಕೊರತೆಗಳನ್ನು ಪರಿಹರಿಸುವುದಕ್ಕಿರುವ ಮಾರ್ಗಗಳನ್ನು ಸೂಚಿಸಿರಿ.
- ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚಿಹ್ನೆಯನ್ನು ನೀಡುವವರು ಯಾರು?

  ಎ. ಸರಕಾರ　　　　ಬಿ. ರಾಜಕೀಯ ಪಕ್ಷಗಳು

  ಸಿ. ಚುನಾವಣಾ ಆಯೋಗ　　　　ಡಿ. ಜಿಲ್ಲೆಯ ಕಲೆಕ್ಟರ್ (ಜಿಲ್ಲಾಧಿಕಾರಿ)
- ಭಾರತದಲ್ಲಿ ವಿವಿಧ ಪ್ರಾತಿನಿಧ್ಯ ಸಂಸ್ಥೆಗಳಿಗೆ ಸ್ಪರ್ಧಿಸಲು ಅಗತ್ಯವಿರುವ ಕನಿಷ್ಠ ಪ್ರಾಯಮಿತಿ ಎಷ್ಟು?
- ಚುನಾವಣಾ ಭವಿಷ್ಯಶಾಸ್ತ್ರ ಎಂದರೇನು?

## ಮುಂದುವರಿದ ಚಟುವಟಿಕೆಗಳು

- ಲೋಕಸಭಾ/ವಿಧಾನಸಭಾ ಚುನಾವಣೆಯ ಭಾಗವಾಗಿ ಪತ್ರಿಕೆಗಳಲ್ಲೂ ಇತರ ಮಾಧ್ಯಮಗಳಲ್ಲೂ ಬಂದ ವಾರ್ತೆಗಳನ್ನೂ ಚಿತ್ರಗಳನ್ನೂ ಸಂಗ್ರಹಿಸಿ ಚುನಾವಣಾ ಸಂಚಿಕೆ ತಯಾರಿಸಿರಿ.
- ರಾಜಕೀಯ ಪಕ್ಷಗಳ ಚಟುವಟಿಕೆಗಳನ್ನು ನಿರೀಕ್ಷಿಸಿ ಒಂದು ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ರಾಜಕೀಯ ಪಕ್ಷಗಳು ವಹಿಸುವ ಪಾತ್ರದ ಕುರಿತು ಟಿಪ್ಪಣಿ ತಯಾರಿಸಿರಿ.



ಅಧ್ಯಾಯ

08

# ಉತ್ತಮ ಭವಿಷ್ಯಕ್ಕಾಗಿ



ಮೇಲೆ ನೀಡಿದ ಚಿತ್ರವು 1993 ಮಾರ್ಚ್ 26ರಂದು ನ್ಯೂಯಾರ್ಕಿನ ಟೈಮ್ಸ್ ಎಂಬ ಪತ್ರಿಕೆಯಲ್ಲಿ ಪ್ರಕಟಗೊಂಡುದಾಗಿದೆ. ಆಫ್ರಿಕಾದ ರಾಷ್ಟ್ರವಾದ ಸುಡಾನಿನ ದಕ್ಷಿಣ ಭಾಗದಲ್ಲಿ ದಾರಿದ್ರ್ಯದಿಂದಾಗಿ ಹಸಿದು ಬಿದ್ದ ಒಬ್ಬ ಮಗುವನ್ನೂ ಆ ಮಗುವನ್ನು ಆಹಾರವನ್ನಾಗಿಸಲು ಹತ್ತಿರ ಬಂದು ನಿಂತ ಹದ್ದನ್ನೂ ಚಿತ್ರದಲ್ಲಿ ಕಾಣಬಹುದಾಗಿದೆ. ಈ ಚಿತ್ರವು ಏನನ್ನು ಸೂಚಿಸುತ್ತದೆ?

ಈ ಚಿತ್ರವು ಜಗತ್ತು ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳಲ್ಲಿ ಒಂದಾಗಿರುವ ದಾರಿದ್ರ್ಯ(ಬಡತನ)ವನ್ನು ಸೂಚಿಸುತ್ತದೆ. ದಾರಿದ್ರ್ಯವಲ್ಲದೆ ಇನ್ನೂ ಅನೇಕ ಸಾಮಾಜಿಕ ಸಮಸ್ಯೆಗಳನ್ನು ನಮ್ಮ ಸುತ್ತುಮುತ್ತಲು ಕಾಣಲು ಸಾಧ್ಯವಿದೆ. ಈ ರೀತಿಯಲ್ಲಿ ಸಮಾಜವು ಎದುರಿಸುತ್ತಿರುವ ಕಿರಿದು-ಹಿರಿದು ಸಮಸ್ಯೆಗಳ ಕುರಿತು ಈ ಪಾಠ ಭಾಗದಲ್ಲಿ ಚರ್ಚಿಸಲಾಗುತ್ತದೆ.

## ಸಾಮಾಜಿಕ ಸಮಸ್ಯೆಗಳು ಮತ್ತು ಪರಿಹಾರ

ಸಮಾಜದಲ್ಲಿ ಎಲ್ಲರನ್ನೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬಾಧಿಸುವ ಸಮಸ್ಯೆಗಳನ್ನು ಸಾಮಾಜಿಕ ಸಮಸ್ಯೆಗಳಾಗಿ ಗಣನೆ ಮಾಡುತ್ತಾರೆ. ವ್ಯಕ್ತಿಗಳ ಸಮಸ್ಯೆಯಾಗಲಿ, ಸಾರ್ವಜನಿಕ ಸಮಸ್ಯೆಯಾಗಲಿ ಸಮಾಜವನ್ನು ಬಾಧಿಸುತ್ತ ದೀರ್ಘಕಾಲದ ತನಕ ನೆಲೆನಿಂತಿದ್ದರೆ ಅದು ಸಾಮಾಜಿಕ ಸಮಸ್ಯೆಯಾಗಿ ಬದಲಾಗುತ್ತದೆ. ಸಾಮಾಜಿಕ ಸಮಸ್ಯೆಯ ಕುರಿತು ಹೆಚ್ಚು ಸ್ಪಷ್ಟವಾಗಿ ತಿಳಿಯಲು ಕೆಲವು ಸಮಾಜಶಾಸ್ತ್ರಜ್ಞರ ಚಿಂತನೆಗಳನ್ನು ಪರಿಶೀಲಿಸುವ.

ಸಾಮಾಜಿಕ ವ್ಯವಸ್ಥೆಯನ್ನು ಕೈಬಿಡಲು ಸಾಧ್ಯವಿಲ್ಲವೆಂದು ಸಾರ್ವಜನಿಕವಾಗಿ ಅಂಗೀಕರಿಸುವ ವರ್ತನೆಯ ರೀತಿಗಳು ಸಾಮಾಜಿಕ ಕಾನೂನುಗಳ ಉಲ್ಲಂಘನೆಯೇ ಸಾಮಾಜಿಕ ಸಮಸ್ಯೆ ಎನಿಸುತ್ತದೆ.

ರೋಬರ್ಟ್ ಮೆರ್ಟನ್ ಮತ್ತು ರೋಬರ್ಟ್ ನಿಸ್ಬೆಟ್

ಸಮಾಜದ ಸಹಿಷ್ಣುತೆಯ ನೆಲೆಯು ಇಲ್ಲದಾಗುವ ರೀತಿಯಲ್ಲಿ ವ್ಯಕ್ತಿಯ ಗುಣ ಸ್ವಭಾವ ಮತ್ತು ಚಲನವಲನಗಳನ್ನು ಸಾಮಾಜಿಕ ಸಮಸ್ಯೆಯಾಗಿ ಗಣನೆ ಮಾಡಲಾಗುತ್ತದೆ.

ಲೆನ್ಬರ್ಗ್

ಮೇಲೆ ನೀಡಿರುವ ಚಿಂತನೆಗಳನ್ನು ಪರಿಶೀಲಿಸಿದಾಗ ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಿಸಿ ಯಾವ ನಿಗಮನಕ್ಕೆ ಬರಲು ನಿಮಗೆ ಸಾಧ್ಯವಿದೆ?

- ಸಮಾಜದ ಸಾಮಾನ್ಯ ನಡತೆಯ ಉಲ್ಲಂಘನೆ.
- ಸಾಮಾಜಿಕ ಕಾನೂನುಗಳ ನಿಷೇಧ.
- ಸಮಾಜದ ಅಸ್ತಿತ್ವಕ್ಕಿರುವ ಬೆದರಿಕೆ.
- 
- 



ಮಾಧ್ಯಮಗಳಲ್ಲಿ ಬರುವ ದೈನಂದಿನ ವಾರ್ತೆಗಳನ್ನು ಪರಿಶೀಲಿಸಿ ವಿವಿಧ ಸಾಮಾಜಿಕ ಸಮಸ್ಯೆಗಳನ್ನು ತಿಳಿದುಕೊಂಡು ಟಿಪ್ಪಣಿ ತಯಾರಿಸಿರಿ.

ಇಂದಿನ ಸಮಾಜವು ಎದುರಿಸುತ್ತಿರುವ ಸಮಸ್ಯೆಗಳು ಯಾವುವು?

- ದಾರಿದ್ರ್ಯ
- ವಸತಿ ಸಮಸ್ಯೆ

- ವೃದ್ಧ ಜನರ ಅನಾಥ ಸ್ಥಿತಿ.
- ಹದಿಹರೆಯದ ಅಪರಾಧಗಳು
- 
- 
- 
- 



ಕೆಳಗೆ ಕೊಟ್ಟಿರುವ ಸಮಸ್ಯೆಗಳು ಸಾಮಾಜಿಕ ಸಮಸ್ಯೆಗಳಾಗಿವೆ ಎಂಬುದನ್ನು ಕೊಟ್ಟಿರುವ ಸೂಚನೆಗಳ ಸಹಾಯದಿಂದ ಮೌಲ್ಯ ನಿರ್ಣಯ ಮಾಡಿರಿ.

| | ಸಾಮಾಜಿಕ ಶಾಂತಿಭಂಗ ವಾಗುತ್ತದೆ | ಸಾಮಾಜಿಕ ಕಾನೂನಿನ ಉಲ್ಲಂಘನೆಯಾಗುತ್ತದೆ | ವ್ಯಕ್ತಿ ಜೀವನ ಏರುಪೇ ರಾಗುತ್ತದೆ | ಸಾಮಾಜಿಕ ಸುರಕ್ಷತೆ ಇಲ್ಲದಾ ಗುತ್ತದೆ | ದೀರ್ಘ ಕಾಲದಿಂದ ಸಮಾಜ ದಲ್ಲಿ ಅಸ್ತಿತ್ವದಲ್ಲಿರುತ್ತದೆ |
|---|---|---|---|---|---|
| ♦ ದಾರಿದ್ರ್ಯ | | | | | |
| ♦ ನಿರುದ್ಯೋಗ | | | | | |
| ♦ ವಸತಿ ಸಮಸ್ಯೆ | | | | | |
| ♦ ವೃದ್ಧ ಜನರ ಅನಾಥ ಸ್ಥಿತಿ | | | | | |
| ♦ ಮಹಿಳೆಯರ ಶೋಷಣೆ | | | | | |
| ♦ ಮಾದಕ ವಸ್ತುಗಳ ಉಪಯೋಗ | | | | | |
| ♦ ಹದಿಹರೆಯದ ಅಪರಾಧ | | | | | |
| ♦ ಸೈಬರ್ ಅಪರಾಧಗಳು | | | | | |
| ♦ ಮಕ್ಕಳ ಮೇಲಾಗುವ ಅಪರಾಧಗಳು | | | | | |

## ದಾರಿದ್ರ್ಯ



ಜೀವನ, ಆರೋಗ್ಯ, ಕಾರ್ಯದಕ್ಷತೆ ಮುಂತಾದುವುಗಳಿಗೆ ಅಗತ್ಯವಿರುವ ಕನಿಷ್ಠ ಬಳಕೆಯ ವಸ್ತುಗಳನ್ನು ಪಡೆಯಲಿರುವ ಸಾಮರ್ಥ್ಯವಿಲ್ಲದಿರುವಿಕೆಯನ್ನೇ ದಾರಿದ್ರ್ಯ ಎನ್ನಲಾಗುತ್ತದೆ. ಜಾಗತಿಕ ಬ್ಯಾಂಕಿನ 2015 ರ ಲೆಕ್ಕಾಚಾರದ ಪ್ರಕಾರ ಜಗತ್ತಿನಲ್ಲಿ 702 ದಶಲಕ್ಷ ಜನರು ದರಿದ್ರರಾಗಿದ್ದಾರೆ. ದಾರಿದ್ರ್ಯವು ಭಾರತದಲ್ಲಿ ಮಾತ್ರವಲ್ಲ ಜಗತ್ತಿನೆಲ್ಲೆಡೆಗಳಲ್ಲಿಯೂ ಒಂದು ಸಾಮಾಜಿಕ ಸಮಸ್ಯೆಯಾಗಿದೆ. ಯುಕ್ತರಾಷ್ಟ್ರ ಸಂಘದ ಅಂಕಿಅಂಶಗಳ ಪ್ರಕಾರ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಐವರಲ್ಲಿ ಒಬ್ಬರು ಬಡತನ ರೇಖೆಗಿಂತ ಕೆಳಗೆ ಜೀವನ ನಡೆಸುತ್ತಿದ್ದಾರೆ. ಯೋಜನಾ ಆಯೋಗದ

ಅಂಕಿಅಂಶಗಳ ಪ್ರಕಾರ ಭಾರತದಲ್ಲಿ 22% ಜನರು ಬಡತನವನ್ನು ಅನುಭವಿಸುವವರಾಗಿದ್ದಾರೆ.



ನೀವು ವಾಸಮಾಡುವ ಪ್ರದೇಶದ ಸ್ಥಳೀಯಾಡಳಿತ ಸಂಸ್ಥೆಯ ದಾಖಲೆಗಳನ್ನು ಪರಿಶೀಲಿಸಿ ಅಲ್ಲಿ ಎಷ್ಟು ಶೇಕಡಾ ಜನರು ದಾರಿದ್ರ್ಯ ರೇಖೆಗಿಂತ ಕೆಳಗಿರುವವರೆಂದು ಕಂಡುಹಿಡಿಯಿರಿ.

## ನಿರುದ್ಯೋಗ



ನಿರುದ್ಯೋಗವು ಬಡತನದೊಂದಿಗೆ ಸಂಬಂಧವಿರುವ ಸಾಮಾಜಿಕ ಸಮಸ್ಯೆಯಾಗಿದೆ. ಜನರಲ್ಲಿ ಒಂದು ವಿಭಾಗದವರು ಯಾವುದಾದರೂ ರೀತಿಯಲ್ಲಿರುವ ಉದ್ಯೋಗವನ್ನು ಆಯ್ಕೆಮಾಡುವುದಿದ್ದರೆ ಜಗತ್ತಿನ ಬಹುಪಾಲು ಜನರು ಅದನ್ನು ಪಡೆಯಲು ಸಾಧ್ಯವಾಗದವರಾಗಿದ್ದಾರೆ. ಕೆಲಸವನ್ನು ಮಾಡಲು ಶಾರೀರಿಕವೂ ಮಾನಸಿಕವೂ ಆದ ಸಾಮರ್ಥ್ಯವೂ ಅದಕ್ಕಿರುವ ಪ್ರಾಯವೂ ಸಮ್ಮತಿಯೂ ಇದ್ದು ಕೆಲಸ ಸಿಗದ ಸ್ಥಿತಿಯೇ ನಿರುದ್ಯೋಗವೆನಿಸುತ್ತದೆ. ನಿರುದ್ಯೋಗದ ಸಮಸ್ಯೆಯ ಪರಿಣಾಮಗಳನ್ನು ನಿಮ್ಮ ಊರಿನಲ್ಲಿಯೂ ಕಾಣಬಹುದು. ಇತರ ರಾಜ್ಯಗಳಿಂದ ಅದೆಷ್ಟೋ ಮಂದಿ ಉದ್ಯೋಗವನ್ನು ಹುಡುಕಿ ಕೇರಳಕ್ಕೆ ಬರುತ್ತಿದ್ದಾರೆ.



ಬಡತನವು ನಿರುದ್ಯೋಗಕ್ಕೆ ಕಾರಣವಾಗುವುದು ಹೇಗೆ?

## ವಸತಿ ಸಮಸ್ಯೆ

ವಸತಿ ಎಂಬುದು ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿದೆ. ವಸತಿಯ ಕುರಿತಾದ ಸಮಾಜದ ದೃಷ್ಟಿಕೋನವು ವಿಭಿನ್ನವಾಗಿದೆ. ವಸತಿಯ ಕೊರತೆಯು ಭಾರತವು ಎದುರಿಸುತ್ತಿರುವ ಪ್ರಧಾನ ಸಾಮಾಜಿಕ ಸಮಸ್ಯೆಯಾಗಿದೆ. ಒಬ್ಬ ವ್ಯಕ್ತಿಗೂ ಕುಟುಂಬಕ್ಕೂ ಆರೋಗ್ಯಕರವಾದ ರೀತಿಯಲ್ಲಿ ಜೀವನ ನಡೆಸಲು ಅಗತ್ಯವಾದ ಒಂದು ಮನೆ ಎಂಬುದು ಪೌರನ ಹಕ್ಕಾಗಿದೆ. ಸುರಕ್ಷಿತವೂ ಯೋಗ್ಯವೂ ಆದ ವಾಸಸ್ಥಳವನ್ನು ಹೊಂದಲೋ ಕಾಪಾಡಲೋ ಸಾಧ್ಯವಾಗದ ಪರಿಸ್ಥಿತಿಯನ್ನು ವಸತಿ ಸಮಸ್ಯೆ ಎನ್ನುತ್ತಾರೆ.







ವಸತಿಗಳ ನಿರ್ಮಾಣ ಇಂದು ಆಡಂಬರವಾಗಿ ಬದಲಾಗುತ್ತಿದೆಯೇ? ಚರ್ಚಿಸಿರಿ.

## ವೃದ್ಧ ಜನರ ಅನಾಥ ಸ್ಥಿತಿ




ನಮ್ಮ ಊರಿನಲ್ಲಿ ಅನಾಥರಾದ ವೃದ್ಧ ಜನರ ಸಂಖ್ಯೆ ಹೆಚ್ಚುತ್ತಾ ಇದೆ. ಅಣು ಕುಟುಂಬಗಳ ಹೆಚ್ಚಳ ಮತ್ತು ಉತ್ತಮ ಸೌಕರ್ಯಗಳನ್ನು ಹುಡುಕಿ ನಗರಗಳ ಕಡೆಗೆ ಸಾಗುವುದರಿಂದ ವಯೋವೃದ್ಧರಿಗೆ ಹಿಂದೆ ಲಭಿಸುತ್ತಿದ್ದ ಆರೈಕೆ, ಗಮನ ಇತ್ಯಾದಿಗಳು ಇಂದು ಲಭಿಸುವುದಿಲ್ಲ. ಇದು ಅವರ ಅನಾಥ ಸ್ಥಿತಿಗೆ ಕಾರಣವಾಗುತ್ತದೆ. ಪ್ರೀತಿಯಿಲ್ಲದಿರುವಿಕೆ, ಅಂಗೀಕರಿಸಲ್ಪಡದಿರುವಿಕೆ, ಏಕಾಂಗಿತನ, ಅನಿಶ್ಚಿತತೆ, ಆರ್ಥಿಕ ಮುಗ್ಗಟ್ಟು, ಆರೋಗ್ಯ ಸಮಸ್ಯೆಗಳು, ಮಾನಸಿಕ ತಳಮಳ ಮೊದಲಾದ ಸಮಸ್ಯೆಗಳನ್ನು ವೃದ್ಧ ಜನರು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳು ಅವರಲ್ಲಿ ಹಲವು ರೀತಿಯ ಆಂತರಿಕ ಸಂಘರ್ಷಗಳನ್ನು ಸೃಷ್ಟಿಸುತ್ತವೆ. ಅವರು ಅನಾಥರೆಂಬ ಭಾವನೆಯು ಇತ್ತೀಚೆಗಿನ ಕಾಲದಲ್ಲಿ ಒಂದು ಸಾಮಾಜಿಕ ಸಮಸ್ಯೆಯಾಗಿ ಬೆಳೆಯುತ್ತದೆ. ಇದರಿಂದಾಗಿ ವೃದ್ಧಾಶ್ರಮಗಳು ನಮ್ಮ ಊರಿನಲ್ಲಿ ಹೆಚ್ಚುತ್ತಿವೆ.

ವೃದ್ಧರಿಗೆ ನೀವು ಸಹಾಯಮಾಡಬಹುದು. ಅದಕ್ಕಾಗಿ ಕೆಳಗೆ ಕೊಟ್ಟಿರುವ ಕಾರ್ಯಗಳನ್ನು ಮಾಡುತ್ತೀರಾ?



| | ಇದೆ | ಇಲ್ಲ | ಕೆಲವೊಮ್ಮೆ ಮಾತ್ರ |
|---|---|---|---|
| ಹಿರಿಯರ ಅವಶ್ಯಕತೆಗಳನ್ನು ಅರ್ಥೈಸಿ ಅವರಿಗೆ ಸಹಾಯವನ್ನು ಮಾಡುತ್ತೀರಾ? | | | |
| ಬಸ್ಸಿನಲ್ಲಿ ಹಿರಿಯ ನಾಗರಿಕರಿಗೆ ಆಸನವನ್ನು ಬಿಟ್ಟುಕೊಡುತ್ತೀರಾ? | | | |
| ಸರದಿಸಾಲು ನಿಲ್ಲುವಾಗ ಹಿರಿಯ ನಾಗರಿಕರಿಗೆ ಆದ್ಯತೆ ನೀಡುತ್ತೀರಾ? | | | |
| ಬಸ್ಸಿನಲ್ಲೋ, ರೈಲಿನಲ್ಲೋ ಹತ್ತುವಾಗ ಹಿರಿಯ ನಾಗರಿಕರಿಗೆ ಸಹಾಯ ಮಾಡುತ್ತೀರಾ? | | | |
| ಕುಟುಂಬದಲ್ಲಿಯೋ, ನೆರೆಕರೆಯಲ್ಲಿಯೋ ವೃದ್ಧ ಜನರನ್ನು ಸಂದರ್ಶಿಸಿ ಅವರೊಂದಿಗೆ ಮಾತನಾಡುವಿರೋ? | | | |
| ವೃದ್ಧಾಶ್ರಮವನ್ನು ಸಂದರ್ಶಿಸುತ್ತಿದ್ದೀರಾ? | | | |
| ಶಾಲೆಯಲ್ಲಿ ವೃದ್ಧರ ದಿನವನ್ನು ಆಚರಿಸುತ್ತೀರಾ? | | | |

## ಸ್ತ್ರೀಯರ ಮೇಲಿನ ಅತಿಕ್ರಮಣ

ಸ್ತ್ರೀಯರ ಮೇಲೆ ನಡೆಯುವ ಅತಿಕ್ರಮಣವು ಒಂದು ದೊಡ್ಡ ಸಾಮಾಜಿಕ ಸಮಸ್ಯೆಯಾಗಿದೆ. ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವ ಯಾವೆಲ್ಲ ಸಮಸ್ಯೆಗಳು ನಿಮ್ಮ ಗಮನಕ್ಕೆ ಬಂದಿವೆ?



ಕೇರಳ ಮಹಿಳಾ ಆಯೋಗ


- ವಿದ್ಯಾಭ್ಯಾಸದ ಹಕ್ಕನ್ನು ನಿಷೇಧಿಸುವುದು.
- ಒಂದೇ ರೀತಿಯ ಕೆಲಸಕ್ಕೆ ವಿಭಿನ್ನ ಸಂಬಳ.
- ಸಾಮರ್ಥ್ಯವನ್ನು ತೋರ್ಪಡಿಸಲಿರುವ ಅವಕಾಶವನ್ನು ನಿಷೇಧಿಸುವುದು.
- ಸಾರ್ವಜನಿಕ ರಂಗದಿಂದ ದೂರವಿರಿಸುವುದು.
- 



ಸ್ತ್ರೀಯರ ಸಂರಕ್ಷಣೆಗಾಗಿ ಕಾರ್ಯನಿರ್ವಹಿಸುವ ಸರಕಾರದ ವ್ಯವಸ್ಥೆಗಳು ಯಾವುವು ಎಂದು ಕಂಡು ಹಿಡಿದು ತರಗತಿಯಲ್ಲಿ ಮಂಡಿಸಿರಿ.

## ಮಾದಕ ವಸ್ತುಗಳ ಉಪಯೋಗ

ಮಾದಕ ವಸ್ತುಗಳ ಉಪಯೋಗವು ಸಮಾಜದಲ್ಲಿ ಹೆಚ್ಚುತ್ತಿದೆ. ಹೊಗೆಸೊಪ್ಪು, ಮದ್ಯಪಾನ, ಮಾದಕದ್ರವ್ಯ ಮೊದಲಾದ ಹಾನಿಕಾರಕ ವಸ್ತುಗಳನ್ನು ಆರಂಭದಲ್ಲಿ ನಿಯಂತ್ರಿಸಿ ಉಪಯೋಗಿಸುತ್ತೇವೆ ಎನ್ನುವವರು ಬಹುಬೇಗನೆ ಅವುಗಳಿಗೆ ಶರಣಾಗುತ್ತಾರೆ. ಕ್ರಮೇಣ ಮಾದಕ ವಸ್ತುಗಳ ದಾಸರಾಗುತ್ತಾರೆ. ಇದರಿಂದ ವ್ಯಕ್ತಿಗಳಲ್ಲಿ ಆರೋಗ್ಯ ಸಮಸ್ಯೆ ಉಂಟಾಗುವುದರೊಂದಿಗೆ ಕುಟುಂಬವು ಶಿಥಿಲವಾಗುತ್ತದೆ. ಸಮಾಜದಲ್ಲಿ ಅವರ ಏಕಾಂಗಿತನಕ್ಕೆ ಮಾದಕ ವಸ್ತುಗಳ ಉಪಯೋಗವು ಕಾರಣವಾಗುತ್ತದೆ. ಮಾದಕ ವಸ್ತುಗಳ ಕಡೆಗಿನ ಅತಿಯಾದ ಮೋಹವು ಒಂದು ರೋಗವಾಗಿದೆ.



ಮಾದಕ ವಸ್ತುಗಳ ಉಪಯೋಗವು ವ್ಯಕ್ತಿಯನ್ನು ಮಾತ್ರವಲ್ಲದೆ ಸಮಾಜಕ್ಕೂ ಬಾಧಿಸುತ್ತದೆ ಎಂಬುದು ಅರ್ಥವಾಯಿತಲ್ಲವೆ? ಆದುದರಿಂದ ಮಾದಕ ವಸ್ತುಗಳ ಉಪಯೋಗವನ್ನು ಒಂದು ಸಾಮಾಜಿಕ ಸಮಸ್ಯೆಯಾಗಿ ಪರಿಗಣಿಸಬಹುದು.

**ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲು ನಮಗೆ ಏನೆಲ್ಲ ಮಾಡಲು ಸಾಧ್ಯವಿದೆ?**

ಸಮಾಜಶಾಸ್ತ್ರ ಕ್ಲಬ್ಬಿನ ನೇತೃತ್ವದಲ್ಲಿ ಮಾದಕವಸ್ತುಗಳ ಉಪಯೋಗವನ್ನು ವಿರೋಧಿಸುವ ಭಿತ್ತಿ ಪತ್ರವನ್ನು ತಯಾರಿಸಿ ಶಾಲೆಯಲ್ಲೂ ಸಾರ್ವಜನಿಕ ಪ್ರದೇಶಗಳಲ್ಲೂ ಪ್ರದರ್ಶಿಸಿರಿ.

## ಹದಿಹರೆಯದ ಅಪರಾಧಗಳು

ಮಕ್ಕಳೆಡೆಯಲ್ಲಿ ನಡೆಯುವ ಅಪರಾಧಗಳು ಇಂದು ದೊಡ್ಡ ಸಾಮಾಜಿಕ ಸಮಸ್ಯೆಯಾಗಿ ಪರಿಣಮಿಸಿವೆ. ಹದಿನೆಂಟು ವರ್ಷಕ್ಕಿಂತ ಕೆಳಗಿನ ಮಕ್ಕಳು ಮಾಡುವ ಅಪರಾಧಗಳನ್ನು ಹದಿಹರೆಯದ ಅಪರಾಧಗಳೆಂದು ಹೇಳುತ್ತಾರೆ. ಅಂತಹ ಅಪರಾಧ ಮಾಡಿದವರನ್ನು ಹದಿಹರೆಯದ ಆರೋಪಿಗಳೆಂದು (Juvenile offenders) ತಿಳಿಯಲಾಗುತ್ತದೆ. ದಿನಪತ್ರಿಕೆಗಳಲ್ಲಿ ವಿವಿಧ ರೀತಿಯ ಹದಿಹರೆಯದ ಅಪರಾಧಗಳು ದಿನವೂ ವಾರ್ತೆಯಾಗುತ್ತವೆ. ಸಣ್ಣ ಪ್ರಾಯದಲ್ಲಿಯೇ ಮಕ್ಕಳು ಅಪರಾಧಿಗಳಾಗಿ ಬದಲಾಗಲು ಕಾರಣಗಳು ಹಲವಾರು.

- ಕೌಟುಂಬಿಕ ಸಂಬಂಧಗಳ ಶಿಥಿಲಗೊಳ್ಳುವಿಕೆ.
- ಮಾದಕ ವಸ್ತುಗಳ ಉಪಯೋಗ.
- ದೃಶ್ಯ ಮಾಧ್ಯಮಗಳ ದುರುಪಯೋಗ.
- ಸಾಮಾಜಿಕ ಮೌಲ್ಯಗಳ ಪತನ.
- 
- 

ಮಕ್ಕಳಲ್ಲಿ ಅಪರಾಧ ಮನೋಭಾವವು ಇಲ್ಲದಂತೆ ಮಾಡುವುದು ಸಮಾಜದ ಎಲ್ಲರ ಜವಾಬ್ದಾರಿಯಾಗಿದೆ. ಶಾಲೆಗಳು, ಪೋಲಿಸ್ ವ್ಯವಸ್ಥೆ, ಜನಜಾಗೃತಿ ಮೂಡಿಸುವುದು, ಬೆಂಬಲ ಕೊಡುವುದು, ಸಾಮಾಜಿಕ ಚಟುವಟಿಕೆಗಳು ಮೊದಲಾದುವುಗಳು ಮಕ್ಕಳಲ್ಲಿ ಅಪರಾಧ ಮನೋಭಾವವನ್ನು ತಡೆಯಲು ಸಹಾಯಕವಾಗಿವೆ. ಕೆಳಗೆ ನೀಡಿರುವವುಗಳು ಹದಿಹರೆಯದ ಅಪರಾಧಗಳನ್ನು ತಡೆಯಲಿರುವ ವ್ಯವಸ್ಥೆಗಳಾಗಿವೆ.

### ಕೌನ್ಸಿಲಿಂಗ್ ಸೆಂಟರ್

ಮಕ್ಕಳ ಗುಣಸ್ವಭಾವ ರೂಪೀಕರಣದಲ್ಲೂ ವ್ಯಕ್ತಿತ್ವದ ಬೆಳವಣಿಗೆಯಲ್ಲೂ ಕುಟುಂಬವು ಪ್ರಧಾನ ಪಾತ್ರ ವಹಿಸುತ್ತದೆ. ಮಕ್ಕಳ ಅಗತ್ಯಗಳನ್ನು ಗುರುತಿಸಿಕೊಳ್ಳಲೂ ಅವರನ್ನು ಅರ್ಥ ಮಾಡಿಕೊಳ್ಳಲೂ ಕುಟುಂಬಕ್ಕೆ ಸಹಾಯ ಮಾಡಲೂ ಕೌನ್ಸಿಲಿಂಗ್ ಸೆಂಟರ್‌ಗಳಿಗೆ ಸಾಧ್ಯವಿದೆ.

### ಜ್ಯುವೆನೈಲ್ ನ್ಯಾಯಾಲಯ

ಜ್ಯುವೆನೈಲ್ ನ್ಯಾಯಾಲಯ ಎಂಬುದು ಹದಿಹರೆಯದವರ ಅಪರಾಧಗಳನ್ನು ನಿರ್ವಹಿಸುವುದಕ್ಕಾಗಿ ಸ್ಥಾಪನೆಗೊಂಡ ವ್ಯವಸ್ಥೆಯಾಗಿದೆ. ಇದರ ಚಟುವಟಿಕೆಗಳು ಇತರ ನ್ಯಾಯಾಲಯಗಳ ಕಾರ್ಯಕಲಾಪಗಳಿಗಿಂತ ಭಿನ್ನವಾದ ರೀತಿಯಲ್ಲಿ ನಡೆಯುತ್ತವೆ.

### ಚೈಲ್ಡ್‌ಲೈನ್

ಮಕ್ಕಳು ಅನುಭವಿಸುವ ಸಮಸ್ಯೆಗಳನ್ನು ಮತ್ತು ಕಷ್ಟಗಳನ್ನು ಕಂಡುಕೊಂಡು ಅವರಿಗೆ ಸಹಾಯ ಮಾಡಲು ಮತ್ತು ಸಂರಕ್ಷಣೆ ನೀಡಲು ಚೈಲ್ಡ್‌ಲೈನ್ ಎಂಬ ಸಂಸ್ಥೆಯನ್ನು ರೂಪಿಸಲಾಗಿದೆ. ಅದು ಇಂಡಿಯನ್ ಗವರ್ನ್‌ಮೆಂಟ್ ಮಿನಿಸ್ಟ್ರಿ ಆಫ್ ವುಮೆನ್ ಆ್ಯಂಡ್ ಚೈಲ್ಡ್ ಡೆವೆಲಪ್‌ಮೆಂಟ್‌ನ ಅಧೀನದಲ್ಲಿ ಒಂದು ಏಜೆನ್ಸಿಯಾಗಿ ಕಾರ್ಯ ನಿರ್ವಹಿಸುತ್ತದೆ. 'ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸಯನ್ಸ್' (TISS)ನ ಪ್ರೊಫೆಸರಾದ 'ಜೆರೋ ಬಿಲ್ಲಿ ಮೋರಿಯಾನ್' 1996ರಲ್ಲಿ ಚೈಲ್ಡ್‌ಲೈನನ್ನು ಮುಂಬೈಯಲ್ಲಿ ಸ್ಥಾಪಿಸಿದರು. ಬಳಿಕ ಇದರ ಚಟುವಟಿಕೆಯನ್ನು ಭಾರತ ಸರಕಾರವು 1998-99ರಲ್ಲಿ ದೇಶದಾದ್ಯಂತ ವಿಸ್ತರಿಸಿತು. Toll free number ಆದ 1098ರಲ್ಲಿ ಯಾವ ವೇಳೆಯಲ್ಲಿಯೂ ಇದರ ಸೇವೆ ಲಭ್ಯವಾಗುತ್ತದೆ.

**ಚೈಲ್ಡ್ ಗೈಡೆನ್ಸ್ ಕ್ಲಿನಿಕ್-** ಮಕ್ಕಳ ಸಮಸ್ಯೆಯನ್ನು ಕಂಡು ಹಿಡಿಯಲು, ವಿಶ್ಲೇಷಿಸಲು ಅಗತ್ಯವಿರುವ ವ್ಯವಸ್ಥೆಯಾಗಿದೆ.

**ಕೌನ್ಸಿಲಿಂಗ್ ಸೆಂಟರ್ –** ಮಕ್ಕಳ ಗುಣನಡತೆಯೊಂದಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಹಾರವನ್ನು ಪಡೆಯಲಿರುವ ಕೇಂದ್ರ

ಮಕ್ಕಳೊಳಗಿನ ಅಪರಾಧಗಳ ಕಾರಣಗಳು ಮತ್ತು ಅವುಗಳಿಗಿರುವ ಪರಿಹಾರ ಮಾರ್ಗಗಳನ್ನು ಒಳಗೊಳ್ಳುವ ಅನ್ವೇಷಣಾ ವರದಿಯನ್ನು ತಯಾರಿಸಿರಿ.

## ಸೈಬರ್ ಅಪರಾಧಗಳು




ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಇಂದು ಬಹುದೊಡ್ಡ ಬದಲಾವಣೆಗಳು ಬರುತ್ತಿವೆ. ಜ್ಞಾನದ ಕೊನೆಯ ಹಂತದ ತನಕ ತಲುಪಲು ಈಗ ಕೆಲವೇ ಕ್ಷಣಗಳು ಸಾಕು. ಇಂಟರ್‌ನೆಟ್ ಸೌಕರ್ಯವನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಬಳಸದೆ ಇರುವವರು ಇಂದು ಜಗತ್ತಿನಲ್ಲಿ ವಿರಳರಾಗಿರುವರು. ಕಂಪ್ಯೂಟರ್, ಮೊಬೈಲ್‌ಫೋನ್, ಟ್ಯಾಬ್‌ಗಳು, ಟಿ.ವಿ. ಮೊದಲಾದ ಇಲೆಕ್ಟ್ರೋನಿಕ್ ಮಾಧ್ಯಮಗಳನ್ನು ಮಾಹಿತಿ ಸಂಗ್ರಹಕ್ಕಾಗಿಯೂ ವಿನೋದಕ್ಕಾಗಿಯೂ ಬಳಸಲಾಗುತ್ತದೆ. ಸಾರ್ವಜನಿಕರಲ್ಲಿ ಕೆಲವರು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ದುರುಪಯೋಗ ಮಾಡುತ್ತಿದ್ದಾರೆ. ಇತ್ತೀಚೆಗೆ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಬಳಸಿ ನಡೆಸುವ ಅಪರಾಧಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಸಾಮಾಜಿಕ ಮಾಧ್ಯಮಗಳು (Social media) ವ್ಯಕ್ತಿಗಳ ಸಾಮಾಜಿಕ ಜೀವನದಲ್ಲಿಯೂ ವೈಯಕ್ತಿಕ ಜೀವನದಲ್ಲಿಯೂ ಹಲವಾರು ಸಮಸ್ಯೆಗಳಿಗೆ ಕಾರಣವಾಗುತ್ತವೆ. ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ನಡೆಯುವ ಅಪರಾಧಗಳನ್ನು ನಿಯಂತ್ರಣ ಮಾಡುವ ಪ್ರತ್ಯೇಕ ವ್ಯವಸ್ಥೆಯಾಗಿ 'ಸೈಬರ್‌ಸೆಲ್' ಕಾರ್ಯ ನಿರ್ವಹಿಸುತ್ತದೆ.

ಸಾಮಾಜಿಕ ಮಾಧ್ಯಮಗಳ ಗುಣದೋಷಗಳ ಕುರಿತು ಸಂವಾದವೊಂದನ್ನು ಸಂಘಟಿಸಿರಿ.

## ಮಕ್ಕಳ ಮೇಲಾಗುವ ಅತಿಕ್ರಮಣಗಳು

ಮಕ್ಕಳೇ ನಾಡಿನ ಸಂಪತ್ತು. ಅವರಿಗೆ ಆಹಾರ, ವಿದ್ಯಾಭ್ಯಾಸ, ಆದ್ಯತೆ, ಸ್ನೇಹ, ವಾತ್ಸಲ್ಯ ಮೊದಲಾದುವುಗಳನ್ನು ಒದಗಿಸುವುದು ಸಮಾಜದ ಕರ್ತವ್ಯವಾಗಿದೆ. ಈ ಕರ್ತವ್ಯದಿಂದ ಹಿಂಜರಿಯುವುದು ಸಮಾಜದ ಮತ್ತು ರಾಷ್ಟ್ರದ ಭವಿಷ್ಯಕ್ಕೆ ದೋಷಕರವಾಗಿದೆ. ಆದರೆ ಮಕ್ಕಳ ಮೇಲಾಗುವ ಅನೇಕ ಅತಿಕ್ರಮಣಗಳು ಲೋಕದ ವಿವಿದೆಡೆಗಳಲ್ಲಿ ನಡೆಯುತ್ತವೆ. ಮಕ್ಕಳ ಮೇಲೆ ನಡೆಯುವ ಶೋಷಣೆಗಳನ್ನು ಸೂಚಿಸುವ ಚಿತ್ರಗಳನ್ನು ಕೆಳಗೆ ನೀಡಲಾಗಿದೆ. ಈ ಚಿತ್ರಗಳು ಯಾವೆಲ್ಲಾ ಅನ್ಯಾಯಗಳನ್ನು ಸೂಚಿಸುತ್ತವೆ?





ಸಮಾಜದಲ್ಲಿ ಮಕ್ಕಳು ಎದುರಿಸುವ ಸಮಸ್ಯೆಗಳ ಕುರಿತು ಒಂದು ರಿಪೋರ್ಟ್ ತಯಾರಿಸಿರಿ.


ನಾವು ಚರ್ಚೆ ಮಾಡಿದ ಸಾಮಾಜಿಕ ಸಮಸ್ಯೆಗಳನ್ನು ಒಟ್ಟು ಸೇರಿಸಿ ಓದುವಾಗ ಕೆಲವು ವಿಷಯಗಳು ಸ್ಪಷ್ಟವಾಗುತ್ತವೆ.

- ಸಾಮಾಜಿಕ ಸಮಸ್ಯೆಗಳಲ್ಲಿ ಹೆಚ್ಚಿನವು ಪರಸ್ಪರ ಸಂಬಂಧ ಹೊಂದಿರುವವುಗಳಾಗಿವೆ.
- ಸಾಮಾಜಿಕ ಸಮಸ್ಯೆಗಳು ಉಂಟುಮಾಡಿದ ದುಷ್ಪರಿಣಾಮಗಳು ಸಾಮಾನ್ಯ ಸ್ವಭಾವವುಳ್ಳದ್ದಾಗಿವೆ.
- ಕಾಲಕ್ಕನುಸರಿಸಿ ಸಾಮಾಜಿಕ ಸಮಸ್ಯೆಗಳಲ್ಲಿ ಬದಲಾವಣೆ ಉಂಟಾಗುತ್ತಲೇ ಇದೆ.
- ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಒಗ್ಗಟ್ಟಾಗಿ ಕಾರ್ಯನಿರ್ವಹಿಸುವುದು ಅಗತ್ಯವಾಗಿದೆ.

ನಮ್ಮ ಸಮಾಜದಲ್ಲಿ ನೆಲೆನಿಂತಿರುವ ಕೆಲವು ಸಮಸ್ಯೆಗಳ ಕುರಿತು ತಿಳಿದಿರುವಿರಲ್ಲವೇ. ಇಂತಹ ಸಾಮಾಜಿಕ ಸಮಸ್ಯೆಗಳು ಎಲ್ಲ ರಾಷ್ಟ್ರಗಳಲ್ಲಿವೆ. ಕೆಲವು ಪ್ರದೇಶಗಳಲ್ಲಿ ಕೆಲವು ಸಾಮಾಜಿಕ ಸಮಸ್ಯೆಗಳು ತೀವ್ರವಾಗಿವೆ. ಹಳ್ಳಿಗಳ ಸಾಮಾಜಿಕ ಸಮಸ್ಯೆಗಳು ನಗರಗಳ ಸಮಸ್ಯೆಗಳಿಂದ ಭಿನ್ನವಾಗಿವೆ. ಇಂತಹ ಸಾಮಾಜಿಕ ಸಮಸ್ಯೆಗಳ ಕುರಿತು ತಿಳಿಯಲು ಹಾಗೂ ಅವುಗಳನ್ನು ತಡೆಯಲು ಸಮಾಜಶಾಸ್ತ್ರ (Socialogy)ವು ನಿರಂತರವಾಗಿ ಶ್ರಮಿಸುತ್ತದೆ.



ನಮ್ಮ ಸುತ್ತಮುತ್ತಲೂ ಕಾಣುವ ವಿವಿಧ ಸಾಮಾಜಿಕ ಸಮಸ್ಯೆಗಳನ್ನು ಹೇಗೆ ಪರಿಹರಿಸಬಹುದು? ಒಂದು ಚರ್ಚೆಯನ್ನು ಏರ್ಪಡಿಸಿರಿ. ಚರ್ಚೆಯಲ್ಲಿ ಮೂಡಿಬಂದ ಅಭಿಪ್ರಾಯಗಳನ್ನು ಸರಕಾರಕ್ಕೆ ಸಮರ್ಪಿಸಿರಿ.



## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಸಾಮಾಜಿಕ ಸಮಸ್ಯೆಗಳು ಯಾವುವು ಎಂದು ನಿರ್ವಚಿಸುವುದು.
- ಸಾಮಾಜಿಕ ಸಮಸ್ಯೆಗಳ ವಿಶೇಷತೆಗಳ ಮತ್ತು ದುಷ್ಪರಿಣಾಮಗಳ ಕುರಿತು ವಿವರಿಸುವುದು.
- ವಿವಿಧ ಸಾಮಾಜಿಕ ಸಮಸ್ಯೆಗಳನ್ನು ವಿಶ್ಲೇಷಿಸುವುದು.
- ಸಾಮಾಜಿಕ ಸಮಸ್ಯೆಗಳು ಹೇಗೆ ಪರಸ್ಪರ ಸಂಬಂಧವನ್ನು ಹೊಂದಿವೆ ಎಂದು ತಿಳಿಯುವುದು.
- ಸಾಮಾಜಿಕ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ತಡೆಯಲು ಹಾಗೂ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಲು ಸಾಧ್ಯವಾಗುವುದು.

## ಮೌಲ್ಯನಿರ್ಣಯ ಮಾಡುವ

- ಸಾಮಾಜಿಕ ಸಮಸ್ಯೆಗಳು ಎಂದರೇನು?
- ಸಮಾಜ ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ವಿಶದೀಕರಿಸಿರಿ.
- ಸಾಮಾಜಿಕ ಸಮಸ್ಯೆಗಳ ಪರಸ್ಪರ ಸಂಬಂಧವನ್ನು ವಿಶ್ಲೇಷಿಸಿರಿ.

## ಮುಂದುವರಿದ ಚಟುವಟಿಕೆಗಳು

- ನಿಮ್ಮ ಊರಿನಲ್ಲಿರುವ ಒಂದು ಸಾಮಾಜಿಕ ಸಮಸ್ಯೆಯನ್ನು ಕಂಡುಹಿಡಿಯಿರಿ. ಆ ಪ್ರದೇಶಕ್ಕೆ ಸಂದರ್ಶನ ನಡೆಸಿ ಆ ಸಮಸ್ಯೆಗೆ ಸಂಬಂಧ ಪಟ್ಟ ಮಾಹಿತಿಗಳನ್ನು ಸಂಗ್ರಹಿಸಿರಿ. ಅವುಗಳನ್ನು ವಿಶ್ಲೇಷಿಸಿ ವರದಿ ತಯಾರಿಸಿರಿ.
- ನಿಮ್ಮ ಸುತ್ತಮುತ್ತ ಇರುವ ಯಾವುದಾದರೂ ಸಾಮಾಜಿಕ ಸಮಸ್ಯೆಯ ಕುರಿತು ಒಂದು ಡೋಕ್ಯುಮೆಂಟರಿ ತಯಾರಿಸಿರಿ.